# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಆಗಸ್ಟ್ 29, 2022

ಸಂಪುಟ : 49 ಸಂಚಿಕೆ : 107 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




## ಅಶೋಕ ರಸ್ತೆ ಅಂಡರ್‌ಪಾಸ್‌ಗೆ ಕಾಂಕ್ರೀಟ್ ಚೌಕಟ್ಟು

### ಬೆಳಿಗ್ಗೆ 9.30ರಿಂದ ಆರಂಭವಾದ ಕಾಮಗಾರಿ, ಬೆ.6ರಿಂದ ನಿಂತಿದ್ದ ರೈಲು ಸಂಚಾರ ಸಂಜೆ 4.30ಕ್ಕೆ ಪುನರಾರಂಭ

ದಾವಣಗೆರೆ, ಆ. 28 - ಹಲವು ದಶಕಗಳ ಸಮಸ್ಯೆಯಾಗಿದ್ದ ಅಶೋಕ ರಸ್ತೆಯ ರೈಲ್ವೆ ಕ್ರಾಸಿಂಗ್ ಸಮಸ್ಯೆ ಬಗೆಹರಿಸುವ ಉದ್ದೇಶದಿಂದ ನಿರ್ಮಿಸಲಾಗುತ್ತಿರುವ ಅಂಡರ್‌ಪಾಸ್‌ಗೆ ಭಾನುವಾರದಂದು ಕಾಂಕ್ರೀಟ್ ಚೌಕಟ್ಟುಗಳನ್ನು ಅಳವಡಿಸುವ ಕಾರ್ಯ ಪೂರ್ಣಗೊಳಿಸಲಾಯಿತು.

ಈ ಅಂಡರ್‌ಪಾಸ್ ಮೂಲಕ ಲಿಂಗೇಶ್ವರ ದೇವಾಲಯದ ಎದುರು ಇರುವ ರಸ್ತೆಯನ್ನು, ಅಶೋಕ ಟಾಕೀಸ್ ಕಡೆಯ ರಸ್ತೆಗೆ ಸಂಪರ್ಕಿಸಲಾಗುವುದು. ಕಾಂಕ್ರೀಟ್ ಚೌಕಟ್ಟುಗಳ ಅಳವಡಿಕೆ ಕಾರ್ಯಪೂರ್ಣಗೊಂಡಿದೆಯಾದರೂ, ಇದಕ್ಕೆ ಸಂಪರ್ಕಿಸುವ ರಸ್ತೆ ಕಾಮಗಾರಿಗೆ ಕನಿಷ್ಠ ಮೂರು ತಿಂಗಳು ಬೇಕಾಗುವ ಅಂದಾಜಿದೆ.

ಬೆಳಿಗ್ಗೆ 6 ಗಂಟೆಯಿಂದ ಕಾಮಗಾರಿ ಆರಂಭವಾಗಿ, ಮಧ್ಯಾಹ್ನ 4 ಗಂಟೆಗೆ ಪೂರ್ಣಗೊಳಿಸುವ ಉದ್ದೇಶ ಇತ್ತು. ಆದರೆ, ಮಳೆಯ ಕಾರಣದಿಂದಾಗಿ ಕಾಮಗಾರಿ ಆರಂಭ ಮೂರೂವರೆ ಗಂಟೆಗಳ ಕಾಲ ವಿಳಂಬವಾಯಿತು. ಬೆಳಿಗ್ಗೆ



9.30ರ ಸಮಯದಲ್ಲಿ ಆರಂಭವಾದ ಕಾಮಗಾರಿ, ರಾತ್ರಿ 9 ಗಂಟೆಯ ವೇಳೆಗೆ ಪೂರ್ಣಗೊಂಡಿತು.

ಮಧ್ಯಾಹ್ನ 4 ಗಂಟೆ ವೇಳೆಗೆ, ಎರಡು ಟ್ರಾಕ್‌ಗಳ ಪೈಕಿ ಒಂದರ ಕಾಮಗಾರಿ ಪೂರ್ಣಗೊಳಿಸಲಾಯಿತು. 4.30ರಿಂದ ರೈಲುಗಳ ಓಡಾಟ ಪುನರಾರಂಭವಾಯಿತು.

**ಸಂಜೆ ಹೊರಟ ರೈಲುಗಳು :** ಕಾಮಗಾರಿ ಹಿನ್ನೆಲೆಯಲ್ಲಿ ಬೆಳಿಗ್ಗೆಯಿಂದಲೇ ರೈಲುಗಳನ್ನು ತಡೆಯಲಾಗಿತ್ತು. ಹುಬ್ಬಳ್ಳಿಯಿಂದ ಬರುವ ವಿಶ್ವಮಾನವ ಎಕ್ಸ್‌ಪ್ರೆಸ್ ಹಾಗೂ ದಾದರ್ ರೈಲುಗಳು ಸಂಜೆ 4.30ಕ್ಕೆ ದಾವಣಗೆರೆಯನ್ನು ದಾಟಲು ಸಾಧ್ಯವಾಯಿತು. ಬೆಂಗಳೂರಿನಿಂದ ಬರುವ ರೈಲುಗಳು ರಾತ್ರಿ ತಡವಾಗಿ ಆಗಮಿಸಿದವು.

ರೈಲುಗಳು ವಿಳಂಬವಾಗುತ್ತಿರುವ ಬಗ್ಗೆ ಸೂಚನೆ ನೀಡಿಯೇ ಪ್ರಯಾಣಿಕರಿಗೆ ಟಿಕೆಟ್ ನೀಡಲಾಗುತ್ತಿತ್ತು. ಇಷ್ಟಾದರೂ, ನೂರಾರು ಪ್ರಯಾಣಿಕರು ಗಂಟೆಗಟ್ಟಲೆ ರೈಲಿಗಾಗಿ ಕಾಯುತ್ತಿದ್ದುದು ಕಂಡು ಬಂತು.

**ಬಸ್‌ಗಳಿಗೆ ಬಾರದ ಬೇಡಿಕೆ :** ಬಹುತೇಕ ಇಡೀ ದಿನ ರೈಲುಗಳ ಸಂಚಾರ ಸ್ಥಗಿತವಾಗಿದ್ದರೂ, ಬಸ್‌ಗಳಿಗೆ ಹೆಚ್ಚಿನ ಬೇಡಿಕೆ ಕಂಡು ಬಂದಿಲ್ಲ. ಬಸ್ ಸಂಚಾರ ಎಂದಿನಂತೆ ಇದೆ. ಜನರಿಂದ ಹೆಚ್ಚಿನ ಬೇಡಿಕೆ ಬಂದರೆ ಕಲ್ಪಿಸಲು ಸಿದ್ಧತೆ ಮಾಡಿಕೊಂಡಿದ್ದೆವು. ಆದರೆ, ಭಾನುವಾರವಾದ ಕಾರಣ ಜನದಟ್ಟಣೆ ಕಡಿಮೆ ಇದೆ ಎಂದು ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಕ ಸಿದ್ದೇಶ್ವರ ಹೆಬ್ಬಾರ್ ತಿಳಿಸಿದ್ದಾರೆ.

(2ನೇ ಪುಟಕ್ಕೆ)

## ವಿಶ್ವವಿದ್ಯಾನಿಲಯಗಳ ಪಠ್ಯಗಳಲ್ಲಿ ಕನ್ನಡ ಅಸ್ಮಿತೆ ಮರೀಚಿಕೆ: ಹೆಗಡೆ

**'ಕನ್ನಡ ಕೌಸ್ತುಭ, ಸರಸ್ವತಿ ಪುರಸ್ಕಾರ' ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ**

ದಾವಣಗೆರೆ, ಆ.28- ವಿಶ್ವವಿದ್ಯಾನಿಲಯ ತಯಾರಿಸುತ್ತಿರುವ ಪಠ್ಯಗಳ ಬದಲಾವಣೆಯು ಹಳೆಗನ್ನಡವನ್ನು ಓದಲು ಬಾರದಿರುವ ಪ್ರೊಫೆಸರ್‌ಗಳನ್ನು ಸೃಷ್ಟಿಸುವಂತಾಗಿದೆ. ಇದು ಈ ಕಾಲದ ದುರಂತ ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷ ಡಾ. ಜಿ. ಎಲ್. ಹೆಗಡೆ ಬೇಸರ ವ್ಯಕ್ತಪಡಿಸಿದರು.

ಅವರು, ಇಂದು ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿದ್ದ 'ಕನ್ನಡ ಕೌಸ್ತುಭ, ಸರಸ್ವತಿ ಪುರಸ್ಕಾರ' ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈಗಲೂ ನಿವೃತ್ತರಾದ ಅನೇಕ ಪ್ರೊಫೆಸರ್‌ಗಳು ಹಳೆಗನ್ನಡ ಶಬ್ದದ ಅರ್ಥವನ್ನು ನನ್ನನ್ನು ಸಂಪರ್ಕಿಸಿ ಕಂಡುಕೊಳ್ಳುತ್ತಿದ್ದಾರೆ. ವಿಶ್ವವಿದ್ಯಾನಿಲಯದಲ್ಲಿ ಶಬ್ದಮಣಿ ದರ್ಪಣವೇ ಬೇಡವೆಂಬ ಸ್ಥಿತಿ ಬಂದಿದೆ. ಕನ್ನಡ ಭಾಷೆಯ ಅವ್ಯವಸ್ಥೆ ಬಗ್ಗೆ ಇದು ಒಂದು ಸಾಕ್ಷಿಯಾಗಿದೆ ಎಂದು ವಿಷಾದಿಸಿದರು.

ಆಧುನಿಕ ಶಿಕ್ಷಣದ ಸುನಾಮಿಯಲ್ಲಿ ಕನ್ನಡ ಭಾಷೆ ತನ್ನತನವನ್ನು ಕಳೆದುಕೊಳ್ಳುತ್ತಿದೆ. ಆಂಗ್ಲ ಭಾಷೆಯಲ್ಲಿ ಮಾತನಾಡಿದರೆ ನಾವು ಉತ್ತಮರು ಎನ್ನುವ ವ್ಯಾಮೋಹ ಬಿಡಬೇಕಿದೆ. ನಾವುಗಳು ಡ್ಯಾಡಿ-ಮಮ್ಮಿ ಎನ್ನುವ ಆಂಗ್ಲ ಭಾಷೆಯ ವ್ಯಾಮೋಹ ತೊರೆದು, ಅಪ್ಪ-ಅಮ್ಮ ಎನ್ನುವ ನಮ್ಮತನಕ್ಕೆ ಬರಬೇಕಾಗಿದೆ. ಎಬಿಸಿಡಿ ಗೊತ್ತಿಲ್ಲದವರು ಸಹ ಇಂದು ಆಂಗ್ಲ ಭಾಷೆಯಲ್ಲಿ ಸಹಿ ಮಾಡುವಂತಾಗಿದೆ. ಯಾಕೆ ಈ ಗುಲಾಮತನ? ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಎಲ್ಲಿಯವರೆಗೂ ಯಕ್ಷಗಾನ ಉಳಿಯುತ್ತದೋ ಅಲ್ಲಿಯವರೆಗೆ ಕನ್ನಡ ಉಳಿಯಲಿದೆ. ಯಕ್ಷಗಾನ ವೇದಿಕೆಯಲ್ಲಿ ಆಂಗ್ಲಭಾಷೆ ಬಳಸುವಂತಿಲ್ಲ. ಬಳಸಿದರೆ ವೇದಿಕೆಯಲ್ಲೇ ಬಳಸಿದವರ

(2ನೇ ಪುಟಕ್ಕೆ)



## ಮುರುಘಾ ಶರಣರ ವಿರುದ್ಧ ಆರೋಪ

### ತನಿಖೆಯಿಂದ ಸತ್ಯ ಹೊರ ಬರಲಿದೆ : ಬೊಮ್ಮಾಯಿ

ಬೆಂಗಳೂರು, ಆ. 28 – ಚಿತ್ರದುರ್ಗ ಮುರುಘಾ ಮಠದ ಶ್ರೀ ಶಿವಮೂರ್ತಿ ಶರಣರ ವಿರುದ್ಧದ ಪೋಕ್ಸೋ ಪ್ರಕರಣದ ತನಿಖೆಯಿಂದ ಸತ್ಯ ಹೊರ ಬರಲಿದೆ ಎಂದು ಮುಖ್ಯಮಂತ್ರಿ




ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ತನಿಖೆ ನಡೆಯು ತ್ತಿರುವ ಈ ಹಂತದಲ್ಲಿ ಹೆಚ್ಚಿನ ಹೇಳಿಕೆ ನೀಡುವುದಿಲ್ಲ ಎಂದರು.

ಪೋಕ್ಸೋ ಕಾಯ್ದೆಯಡಿ ಪ್ರಮುಖ ಪ್ರಕರಣ ದಾಖಲಿಸಲಾಗಿದೆ. ಅಲ್ಲದೇ ಚಿತ್ರದುರ್ಗದಲ್ಲಿ ಅಪಹರಣ ಪ್ರಕರಣವನ್ನೂ ದಾಖಲಿಸ ಲಾಗಿದೆ. ಪೊಲೀಸರು ಈ ಎರಡೂ ಪ್ರಕರಣಗಳನ್ನು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಈ ಹಂತದಲ್ಲಿ ಹೇಳಿಕೆಗಳನ್ನು ನೀಡುವುದು ತನಿಖೆಗೆ ಒಳ್ಳೆಯದಲ್ಲ ಎಂದು ಬೊಮ್ಮಾಯಿ ಹೇಳಿದ್ದಾರೆ. ಪೊಲೀಸರಿಗೆ ಪೂರ್ಣ ಸ್ವಾತಂತ್ರ್ಯ ಇದೆ, ಅವರು ತನಿಖೆ ನಡೆಸಿ ಸತ್ಯ ಹೊರಗೆ ತರಲಿದ್ದಾರೆ ಎಂದವರು ಹೇಳಿದ್ದಾರೆ.

## ಶರಣರು ತಪ್ಪು ಮಾಡಿಲ್ಲ : ಬಿಎಸ್‌ವೈ

ಬೆಂಗಳೂರು, ಆ. 28 - ಚಿತ್ರದುರ್ಗ ಮುರುಘಾ ಮಠದ ಶ್ರೀ ಶಿವಮೂರ್ತಿ ಮುರುಘಾ ಶರಣರು ಯಾವುದೇ ತಪ್ಪು ಮಾಡಿಲ್ಲ. ಅವರು ಆರೋಪದಿಂದ ಮುಕ್ತರಾಗಿ ಬರುವ ವಿಶ್ವಾಸ ಇದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.



ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಶ್ರೀಗಳ ವಿರುದ್ಧ ಸುಳ್ಳು ಆರೋಪಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಲಾಗಿದೆ. ಮುರುಘಾ ಮಠದ ಬಗ್ಗೆ ಗೊತ್ತಿರುವ ಯಾರೂ ಶ್ರೀಗಳ ವಿರುದ್ಧ ಇಂತಹ ಆರೋಪ ಮಾಡಲು ಸಾಧ್ಯವೇ ಇಲ್ಲ. ಇದೊಂದು ವ್ಯವಸ್ಥಿತ ಷಡ್ಯಂತ್ರ ಎಂದವರು ಹೇಳಿದ್ದಾರೆ.

ಕೆ.ಪಿ.ಸಿ.ಸಿ. ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಸಹ ಮುರುಘಾ ಶರಣರನ್ನು ಬೆಂಬಲಿಸುವ ಹೇಳಿಕೆ ನೀಡಿದ್ದಾರೆ.

ಶರಣರ ಮೇಲೆ ಮಾಡಿರುವ ಆರೋಪ ಷಡ್ಯಂತ್ರದ ರೀತಿ ಇದೆ. ಪ್ರಕರಣದ ಪೂರ್ಣ ತನಿಖೆಯ ನಂತರವೇ ಸತ್ಯಾಸತ್ಯತೆ ಗೊತ್ತಾಗಲಿದೆ ಎಂದವರು ಹೇಳಿದ್ದಾರೆ.

## ಮೀಸಲಾತಿ ಹೆಚ್ಚಳಕ್ಕೆ ಸೆ.28 ಗಡುವು, ಅಕ್ಟೋಬರ್ 9ಕ್ಕೆ ಬೆಂಗಳೂರು ಚಲೋ



**ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದ ಸ್ವಾಮೀಜಿ ಘೋಷಣೆ**

ಬೆಂಗಳೂರು, ಆ.28- ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳಕ್ಕೆ ಸರ್ಕಾರಕ್ಕೆ ಸೆಪ್ಟೆಂಬರ್ 28 ರ ಗಡುವು ನೀಡಲಾಗುತ್ತಿದ್ದು, ಅಷ್ಟರೊಳಗೆ ಮಾಡದಿದ್ದರೆ, ಅಕ್ಟೋಬರ್ 9 ರಂದು ನಡೆಯುವ ಮಹರ್ಷಿ ವಾಲ್ಮೀಕಿ ಜಯಂತಿಯಂದು ಬೆಂಗಳೂರು ಚಲೋ ನಡೆಸಲಾಗುವುದು ಎಂದು ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದ ಸ್ವಾಮೀಜಿ ತಿಳಿಸಿದರು.

ನಿವೃತ್ತ ನ್ಯಾಯಾಧೀಶ ನಾಗಮೋಹನ್ ದಾಸ್ ವರದಿ ಜಾರಿಗೆ ಒತ್ತಾಯಿಸಿ, ನಾವು ನಡೆಸುತ್ತಿರುವ ಧರಣಿ ಸತ್ಯಾಗ್ರಹ 200ನೇ ದಿನ ತಲುಪಿದ ಹಿನ್ನೆಲೆಯಲ್ಲಿ ಮುಂದಿನ ಹೋರಾಟದ ರೂಪು-ರೇಷೆ ಕುರಿತು ಚರ್ಚಿಸಲು ಬೆಂಗಳೂರಿನ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಎಸ್ಸಿ - ಎಸ್ಟಿ ಸಭೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ರಾಜ್ಯದಲ್ಲಿ ನಮ್ಮ ಸಮುದಾಯದ ಶೇ.95 ರಷ್ಟು ಜನ ಬಡತನದಲ್ಲಿದ್ದಾರೆ. ಪ್ರತಿಯೊಂದು ಸರ್ಕಾರಕ್ಕೂ ಎಸ್ಸಿ - ಎಸ್ಟಿ ಅಂದರೆ ಅಸಡ್ಡೆ. ಆ ಅಸಡ್ಡೆ ಹೋಗಲಾಡಿಸುವುದಕ್ಕಾಗಿಯೇ ಈ ಹೋರಾಟ. ಎಸ್ಸಿ - ಎಸ್ಟಿ ಜನರನ್ನು ಸರ್ಕಾರಗಳು ಮತ್ತೆ ಯಾಮಾರಿಸಲು ಅವಕಾಶ ನೀಡಲ್ಲ. ಎಲ್ಲರೂ ಒಂದಾಗಬೇಕೆನ್ನುವುದು ಅಂಬೇಡ್ಕರ್ ಅವರ ಕನಸಾಗಿತ್ತು. ಅದನ್ನು ನನಸು ಮಾಡುವ ಸಂಕಲ್ಪ ನಮ್ಮದಾಗಿದೆ ಎಂದರು.

(6ನೇ ಪುಟಕ್ಕೆ)

## ಊಟದ ಶಾಲೆಯೋ, ಪಾಠದ ಶಾಲೆಯೋ?

### ಸರ್ಕಾರಿ ಶಾಲೆಗಳಲ್ಲಿ ಪಾಠದ ಚಾಯ್ಸ್‌ಗಿಂತ ಹೆಚ್ಚಾಗುತ್ತಿರುವ ಊಟದ ಚಾಯ್ಸ್!



*ಸರ್ಕಾರಿ ಶಾಲೆಗಳೆಂದರೆ ಊಟದ ಶಾಲೆ, ಖಾಸಗಿ ಶಾಲೆಗಳೆಂದರೆ ಪಾಠದ ಶಾಲೆ ಎಂಬ ಭಾವನೆ ಜನರಲ್ಲಿ ಬೇರೂರುವಂತಾಗಿದೆ. ಇನ್ನಾದರೂ ಸರ್ಕಾರ ಶಿಕ್ಷಕರ ಮೇಲಿನ ಪಠ್ಯೇತರ ಹೊರೆ ಕಡಿಮೆ ಮಾಡಲು ಮುಂದಾಗಬೇಕಿದೆ. ಕೊರೊನಾದಿಂದ ತತ್ತರಿಸಿರುವ ಕಲಿಕೆಯನ್ನು ಸರಿ ದಾರಿಗೆ ತರಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕಿದೆ. ಇಲ್ಲವಾದರೆ, ಮುಂದೊಂದು ದಿನ ಸರ್ಕಾರಿ ಶಾಲೆಗಳು ಆಟ - ಊಟಕ್ಕುಂಟು, ಪಾಠಕ್ಕಿಲ್ಲ ಎಂಬ ಶಾಶ್ವತ ಹಣೆಪಟ್ಟಿ ಹೊರಬೇಕಾಗುತ್ತದೆ.*

**- ಎ.ಕೆ. ಸುರ್ವೆ, ದಾವಣಗೆರೆ**

ನೂತನ ಶಿಕ್ಷಣ ಪದ್ಧತಿಯಲ್ಲಿ ಚಾಯ್ಸ್ ಬೇಸ್ಡ್ ಕಲಿಕೆಯ ಬಗ್ಗೆ ಒಂದೆಡೆ ಚಿಂತನೆ ನಡೆದಿದ್ದರೆ, ನಮ್ಮ ಸರ್ಕಾರಿ ಶಾಲೆಗಳಲ್ಲಿ ಭೋಜನದಲ್ಲಿ ಚಾಯ್ಸ್ ಬೇಸ್ಡ್ ಆರಂಭವಾಗಿದೆ! ಮೊಟ್ಟೆ ಬೇಕಾ, ಚಿಕ್ಕಿ ಬೇಕಾ, ಬಾಳೆಹಣ್ಣು ಬೇಕಾ ಎಂದು ಶಿಕ್ಷಕರು ಮಕ್ಕಳಿಗೆ ಚಾಯ್ಸ್ ನೀಡಬೇಕೆಂದು ಸರ್ಕಾರ ಫರ್ಮಾನು ಹೊರಡಿಸಿದೆ.

ಪ್ರತಿದಿನ ಹಾಲು, ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಮೊಟ್ಟೆ, ಬಾಳೆಹಣ್ಣು ಹಾಗೂ ಶೇಂಗಾ ಚಿಕ್ಕಿ ಸೇರಿ ಶಾಲೆಗಳು ಒಂದು ರೀತಿ ಮಿನಿ ಅಂಗಡಿಗಳಾಗುವತ್ತ ಹೆಜ್ಜೆ ಹಾಕಿವೆ.

ಎರಡು ವರ್ಷಗಳ ಕಾಲ ಕೊರೊನಾ ಹಾಗೂ ಸರ್ಕಾರಿ ಮಂದಿಯ ಅವೈಜ್ಞಾನಿಕ ಶಾಲಾ ಬಂದ್ ಅಭಿಯಾನದಿಂದ ಕಲಿಕೆಯಲ್ಲಿ ಅನಾಥರಾಗಿದ್ದ ಮಕ್ಕಳಿಗೆ ಸೂಕ್ತ ಶಿಕ್ಷಣದ ತುರ್ತು ಅಗತ್ಯವಿತ್ತು. ಎರಡು ವರ್ಷ ಶಾಲೆಗಳು ಬಹುತೇಕ ಬಂದ್ ಆಗಿ, ಸಾಕಷ್ಟು ಮಕ್ಕಳು ತಾವು ವಾಸ್ತವಿಕವಾಗಿ ಓದುತ್ತಿರುವ ತರಗತಿಗಿಂತ ಎರಡು - ಮೂರು ವರ್ಷ ಹಿಂದೆ ಬಿದ್ದಿದ್ದಾರೆ.

ಆದರೂ ಅವರನ್ನು ಹಿಂದಿನ ತರಗತಿಗಳಿಗೆ ಕಳಿಸಿ ಉದ್ಧಾರ ಮಾಡುವಂತಿಲ್ಲ. ಏಕೆಂದರೆ ವಿದ್ಯಾರ್ಥಿಗಳ ಇಡೀ ಶಿಕ್ಷಣ ಫೇಲ್ ಆದರೂ ಪರವಾಗಿಲ್ಲ, ಒಂದು ತರಗತಿ ಮಾತ್ರ ಫೇಲ್ ಮಾಡುವಂತಿಲ್ಲ ಎಂಬುದು ಸರ್ಕಾರದ ದೃಢ ನಿರ್ಧಾರ.

ಹೀಗೆ ಸಾಕಷ್ಟು ಮಕ್ಕಳು ಎರಡು ವರ್ಷ ಓದದೇ ಪಾಸ್ ಆಗಿ, ಅರ್ಥವಾಗದ ಪಾಠಗಳ ಜೊತೆ ತಲೆ ಚಚ್ಚಿಕೊಳ್ಳುವ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಈ ನಡುವೆ, ಸರ್ಕಾರಿ ಶಾಲಾ ಶಿಕ್ಷಕರು ನಿತ್ಯ ಪಾಠದ ಬದಲು ನಿತ್ಯ ಊಟದ ಬಗ್ಗೆ ಯೋಚಿಸುವ ತರಹೇವಾರಿ ಸ್ಕೀಮುಗಳನ್ನು ಸರ್ಕಾರ ಹಮ್ಮಿಕೊಳ್ಳುತ್ತಿದೆ. ಅದಕ್ಕೆ ಇತ್ತೀಚಿನ ಸೇರ್ಪಡೆ ಮೊಟ್ಟೆ, ಬಾಳೆಹಣ್ಣು ಇತ್ಯಾದಿ.

ಶಾಲಾರಂಭದ ನಂತರ ಕಲಿಕಾ ಚೇತರಿಕೆಗಾಗಿ ಸೇತುಬಂಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಇದರ ಜೆರಾಕ್ಸ್ ಪ್ರತಿಗಳನ್ನು ಮಾಡಿಸಿಕೊಂಡು ಶಿಕ್ಷಕರು ಪರದಾಡಿದ ವರದಿಗಳು ಬಂದಿದ್ದವು. ನಂತರ ಸಾಕ್ಸ್ - ಶೂಸ್, ಟಿಸಿ, ಸ್ಯಾಟ್ಸ್ ಇತ್ಯಾದಿಗಳ ಭರಾಟೆಯಲ್ಲಿ ಸಾಕಷ್ಟು ಶಿಕ್ಷಕರು ಮುಳುಗುವಂತಾಯಿತು.

ಈಗ ವಾರಕ್ಕೆರಡು ಬಾರಿ ಮೊಟ್ಟೆ ಒದಗಿಸುವ ಕೈಂಕರ್ಯ ನಮಗೆ ಬಂದಿದೆ. ಕೊರೊನಾದಿಂದ ಮಕ್ಕಳ ಕಲಿಕೆ ಅಧ್ವಾನವಾಗಿದೆ. ಅವರನ್ನು ಕಲಿಕಾ ಹಾದಿಗೆ ತರುವುದೇ ಕಷ್ಟವಾಗಿದೆ. ಅದರ ನಡುವೆ ಮೊಟ್ಟೆ - ಗಿಟ್ಟೆ ಹೊರೆ ಹೇರಲಾಗಿದೆ. ನಾವಂತೂ ಪಾಠದ ಚಿಂತೆಯನ್ನೇ ಬಿಟ್ಟು, ಊಟದ ಚಿಂತೆಯಲ್ಲೇ ತೊಡಗಿದ್ದೇವೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಸರ್ಕಾರಿ ಶಾಲಾ ಶಿಕ್ಷಕರೊಬ್ಬರು ವಿಷಾದದಿಂದ ತಿಳಿಸಿದರು.

30 ಮಕ್ಕಳಿಗೊಬ್ಬ ಶಿಕ್ಷಕರು ಎಂಬ ನಿಯಮ ಇದೆ. ಆದರೆ, ಆ 30 ಮಕ್ಕಳು ಒಂದೇ ತರಗತಿಗೆ ಸೇರಿರಬೇಕು ಎಂದೇನೂ ಇಲ್ಲ. ಹೀಗಾಗಿ ಒಬ್ಬರೇ ಶಿಕ್ಷಕರು ಹಲವು ತರಗತಿಗಳ ಬೋಧನೆ ಮಾಡಬೇಕು. ಇಷ್ಟರ ನಡುವೆ, ಅಧಿಕಾರಿಗಳು ಕೇಳುವ ತರಹೇವಾರಿ

(2ನೇ ಪುಟಕ್ಕೆ)

## ಅ.17ರಂದು ಎಐಸಿಸಿ ಅಧ್ಯಕ್ಷ ಸ್ಥಾನದ ಚುನಾವಣೆ

ನವದೆಹಲಿ, ಆ. 28 – ಬರುವ ಅಕ್ಟೋಬರ್ 17ರಂದು ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಚುನಾವಣೆ ನಡೆಯಲಿದೆ ಎಂದು ಪಕ್ಷ ತಿಳಿಸಿದೆ. ಅಧ್ಯಕ್ಷ ಸ್ಥಾನಕ್ಕೆ ಈ ರೀತಿಯ ಪ್ರಜಾಸತ್ತಾತ್ಮಕ ಪ್ರಕ್ರಿಯೆ ನಡೆಸುತ್ತಿರುವುದು ತಾನು ಮಾತ್ರ ಎಂದು ಕಾಂಗ್ರೆಸ್ ಹೇಳಿದೆ.

ಅಕ್ಟೋಬರ್ 19ರಂದು ಚುನಾವಣೆಯ ಫಲಿತಾಂಶ ಪ್ರಕಟವಾಗಲಿದೆ. ಅವಿರೋಧ ಆಯ್ಕೆ ನಡೆದಲ್ಲಿ ಅಕ್ಟೋಬರ್ 8ರಂದು ಅಧ್ಯಕ್ಷರ ಘೋಷಣೆಯಾಗಲಿದೆ ಎಂದು ಪಕ್ಷದ ಕೇಂದ್ರ ಚುನಾವಣಾ ಪ್ರಾಧಿಕಾರದ ಅಧ್ಯಕ್ಷ ಮಧುಸೂದನ್ ಮಿಸ್ತ್ರಿ ಹೇಳಿದ್ದಾರೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯ ನಂತರ ಈ ಬಗ್ಗೆ ಹೇಳಿಕೆ ನೀಡಲಾಗಿದೆ.

ಈ ಹಿಂದೆ ನವೆಂಬರ್ 2000ದಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಿತ್ತು. 1998ರ ನಂತರ ಸೋನಿಯಾ ಗಾಂಧಿ ಅವರು ಪಕ್ಷದ ಸುದೀರ್ಘ ಕಾಲದ

(2ನೇ ಪುಟಕ್ಕೆ)



**ವಿಜೃಂಭಣೆಯ ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವ**

ದಾವಣಗೆರೆಯ ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವವು ವಿಜೃಂಭಣೆಯಿಂದ ಭಾನುವಾರ ನಡೆಯಿತು. ರಾಜ ಬೀದಿಗಳಲ್ಲಿ ಶ್ರೀ ಲಿಂಗೇಶ್ವರ ಸ್ವಾಮಿಯ ರಥೋತ್ಸವ ಸಾಗಿತು. ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಕೊರೊನಾ ಅಲೆಯ ಹಿನ್ನೆಲೆಯಲ್ಲಿ ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವವನ್ನು ಎರಡು ವರ್ಷ ನಡೆಸಲು ಸಾಧ್ಯವಾಗಿರಲಿಲ್ಲ.

# ಸ್ನೇಹಕ್ಕೂ ಬದ್ಧ, ಸಮರಕ್ಕೂ ಸಿದ್ಧ ಎಂಬ ಶರಣರ ನುಡಿಗೆ ಬೆಂಬಲ

**ಮುರುಘಾ ಶರಣರಿಗೆ ಶೋಷಿತ ವರ್ಗಗಳ ಒಕ್ಕೂಟದಿಂದ ಆತ್ಮಸ್ಥೈರ್ಯ**

ಚಿತ್ರದುರ್ಗ, ಆ.28 - ಸಂಧಾನಕ್ಕೂ ಬದ್ಧ, ಸಮರಕ್ಕೂ ಸಿದ್ಧ ಎಂಬ ಚಿತ್ರದುರ್ಗ ಬೃಹನ್ಮಠದ ಶ್ರೀ ಶಿವಮೂರ್ತಿ ಮುರುಘಾ ಶರಣರ ನುಡಿಗೆ ದಾವಣಗೆರೆ ಜಿಲ್ಲಾ ಶೋಷಿತ ವರ್ಗಗಳ ಒಕ್ಕೂಟ ಸಂಪೂರ್ಣವಾಗಿ ಬೆಂಬಲಿಸಿದೆ ಎಂದು ಬಾಡದ ಆನಂದರಾಜ್ ತಿಳಿಸಿದ್ದಾರೆ.

ಇಲ್ಲಿನ ಮುರುಘಾ ಮಠದಲ್ಲಿ ಶ್ರೀ ಶಿವಮೂರ್ತಿ ಶರಣರನ್ನು ಭೇಟಿ ಮಾಡಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಹಿಂದಿನಿಂದಲೂ ಯಾರು ಶೋಷಿತರ ಪರವಾಗಿ ಹೋರಾಟ ಮಾಡುತ್ತಾರೋ ಅವರಿಗೆ ಕಿರುಕುಳ ತಪ್ಪಿಲ್ಲ. ಬಸವಣ್ಣನವರಿಗಾಗಲೀ, ಅಂಬೇಡ್ಕರ್‌ರವರಿಗಾಗಲೀ, ಸಂಗೊಳ್ಳಿ ರಾಯಣ್ಣನವರಿಗೆ ಕಿರುಕುಳಗಳಾಗಿದ್ದವು. ಈಗ ನಮ್ಮ ಆಧುನಿಕ ಕಾಲದ ಬಸವಣ್ಣರೆಂದೇ ಹೆಸರಾಗಿರುವ ಶ್ರೀ ಶಿವಮೂರ್ತಿ ಮುರುಘಾ ಶರಣರಿಗೆ ಕಿರುಕುಳ ನೀಡಲಾಗುತ್ತಿದೆ. ಪ್ರಕರಣದ ಹಿಂದೆ ಪಟ್ಟಭದ್ರ ಹಿತಾಶಕ್ತಿಗಳ ಕೈವಾಡವಿದೆ ಎಂದು ಆನಂದರಾಜ್ ಆಕ್ರೋಶ ವ್ಯಕ್ತಪಡಿಸಿದರು.

ನಾವು ನಿಮ್ಮದೊಂದಿಗೆ ನಾವಿದ್ದೇವೆ ಎಂದು ದಾವಣಗೆರೆಯ ಮುರುಘಾ ಶರಣರ ಅಭಿಮಾನಿ ಬಳಗ ಮತ್ತು ಜಿಲ್ಲಾ ಶೋಷಿತ ವರ್ಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜ್, ಸಾಮಾಜಿಕ ಕಾರ್ಯಕರ್ತ ಒಣರೊಟ್ಟಿ ಮಹಾಂತೇಶ್, ಕೊರಚ ಸಮಾಜದ ಮಾಜಿ ಜಿಲ್ಲಾಧ್ಯಕ್ಷ ಜಿ.ಕೃಷ್ಣಪ್ಪ, ಪಾಲಿಕೆ ಮಾಜಿ ಸದಸ್ಯ ಶಿವನಗೌಡ ಪಾಟೀಲ್, ಒಕ್ಕಲಿಗರ ಸಂಘದ ಕಾರ್ಯದರ್ಶಿ ಹನುಮೇಗೌಡ ಇನ್ನೂ ಮುಂತಾದವರು ಶರಣರಿಗೆ ಆತ್ಮಸ್ಥೈರ್ಯ ತುಂಬಿದರು.




# ಅಂಕ ಗಳಿಕೆ ಜೊತೆ ಹೆತ್ತವರನ್ನೂ ಪ್ರೀತಿಸಿ

## ಪ್ರತಿಭಾ ಪುರಸ್ಕಾರ, ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಾ. ಸೋಮಶೇಖರಪ್ಪ



ದಾವಣಗೆರೆ, ಆ. 28- ಅಂಕ ಗಳಿಕೆಯ ಜೊತೆ ಹೆತ್ತವರನ್ನು, ಮನೆಯ ಸದಸ್ಯರನ್ನು ಪ್ರೀತಿಸಿ ಎಂದು ಆರ್.ಎಲ್. ಕಾನೂನು ಕಾಲೇಜು ಪ್ರಾಚಾರ್ಯ ಡಾ. ಸೋಮಶೇಖರಪ್ಪ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ವತಿಯಿಂದ ನಗರದ ಗುರುಭವನದಲ್ಲಿ ಭಾನುವಾರ ಎಸ್ಸೆಸ್ಸೆಲ್ಸಿ ಕನ್ನಡ ಐಚ್ಛಿಕ ವಿಷಯದಲ್ಲಿ 125 ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಜ್ಞಾನಕಾಶಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೆಚ್ಚು ಅಂಕಗಳನ್ನು ಪಡೆದು, ಉತ್ತಮ ನೌಕರಿ ಪಡೆಯುವ ಅನೇಕ ಮನೆಗಳಲ್ಲಿ ಇಂದು ಅಶಾಂತಿ ನೆಲೆಸಿರುತ್ತದೆ. ವಿದ್ಯಾರ್ಥಿಗಳು ಅಂಕ ಗಳಿಕೆಯ ಬೆನ್ನತ್ತಿ ಹೆತ್ತವರು, ಮನೆಯ ಸದಸ್ಯರ ಜೊತೆ ಬೆರೆಯಲು ಸಮಯ ನೀಡದೇ ಇರುವುದೇ ಇದಕ್ಕೆ ಕಾರಣ. ನಿಮ್ಮ ಸಾಧನೆಯ ಹಿಂದೆ ಹೆತ್ತವರ ಕಾಳಜಿ, ಪ್ರೀತಿ, ಪ್ರೋತ್ಸಾಹ ಇರುತ್ತದೆ ಎಂಬುದನ್ನು ಮರೆಯಬಾರದು ಎಂದರು.

ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಹಾಗೂ ಇಂದಿನ ರಾಷ್ಟ್ರಪತಿ ದ್ರೌಪದಿ ಮುರ್ಮು ಸಹ ಕಠಿಣ ಪರಿಶ್ರಮದಿಂದ ಮೇಲೆ ಬಂದವರು. ಅಂದಿನ ದಿನಗಳಲ್ಲಿ ಉನ್ನತ ವ್ಯಾಸಂಗಕ್ಕೆ ವಿರಳ ಅವಕಾಶಗಳಿದ್ದವು. ಆದರೆ ಈಗ ಉತ್ತಮ ಅವಕಾಶಗಳಿವೆ. ಅದರ ಜೊತೆ ಹಾದಿ ತಪ್ಪಲು ಬೇಕಾದಷ್ಟು ಅವಕಾಶಗಳೂ ಸಿಗಲಿವೆ. ವಿದ್ಯಾರ್ಥಿಗಳು ಎಚ್ಚರ ವಹಿಸಬೇಕು. ಭಾಷೆ, ಜಾತಿ, ಧರ್ಮದ ಬಗ್ಗೆ ಚಿಂತಿಸದೆ, ಕಷ್ಟ ಪಟ್ಟು ಯಶಸ್ಸನ್ನು ನಿಮ್ಮದಾಗಿಸಿಕೊಳ್ಳಿ ಎಂದರು.

ನಾವೆಲ್ಲಾ ಚಂದಿರನನ್ನು ನೋಡಿ ಊಟ ಮಾಡಿ ಬೆಳೆದವರು. ಆದರೆ ಇಂದಿನ ಚಿಕ್ಕ ಮಕ್ಕಳು ಮೊಬೈಲ್ ಇಲ್ಲದೆ ಊಟ ಮಾಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಜ್ಞಾನ ಪಡೆಯಲು ಮಾತ್ರ ಮೊಬೈಲ್ ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಪ್ರೋತ್ಸಾಹಿಸುವ ಕಾರ್ಯ ವಿರಳ. ಆದರೆ ರಕ್ಷಣಾ ವೇದಿಕೆ ಪ್ರತಿಭೆಗಳನ್ನು ಪ್ರೋತ್ಸಾಹಿಸಿ, ಗೌರವಿಸುತ್ತಿರುವುದು ಶ್ಲಾಘನೀಯ. ಇಂತಹ ಕಾರ್ಯಕ್ರಮಗಳು ಇತರರಿಗೆ ಪ್ರೇರಣೆ ನೀಡುತ್ತವೆ ಎಂದರು.

ಕರವೇ ಗೌರವಾಧ್ಯಕ್ಷ ವಾಸುದೇವ ರಾಯ್ಕರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಬಾಪೂಜಿ ಸ್ಕೂಲ್ ನಿವೃತ್ತ ಪ್ರಾಚಾರ್ಯ ಕೆ. ಇಮಾಮ್ ಅವರಿಗೆ ಸಾವಿತ್ರಿಬಾಯಿ ಪುಲೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿವಿಧ ಕ್ಷೇತ್ರಗಳ ಸಾಧಕರಾದ ಜೆ. ಅಮಾನುಲ್ಲಾಖಾನ್, ಪ್ರಕಾಶ್ ಉತ್ತಂಗಿ, ಬಸವರಾಜ್ ದೊಡ್ಡಮನಿ, ಪಿ.ಕಾಡಜ್ಜಿ ಮಂಜುನಾಥ್, ಚನ್ನಬಸವ ಶೀಲವಂತ್, ಪಿ.ಮಂಜುನಾಥ್, ಎಸ್.ಪ್ರೇಮಾ ಅವರುಗಳನ್ನು ಸನ್ಮಾನಿಸಲಾಯಿತು.

ಡಿಡಿಪಿಐ ಜಿ.ಆರ್. ತಿಪ್ಪೇಶಪ್ಪ, ಬಿಇಒ ಎಂ.ನಿರಂಜನಮೂರ್ತಿ, ಅಂಬಣ್ಣ ಟಿ., ಜೈನ್ ವಿದ್ಯಾಲದ ಕಾರ್ಯದರ್ಶಿ ನರೇಂದ್ರ ಕುಮಾರ್, ಕರವೇ ಮಹಿಳಾ ಜಿಲ್ಲಾಧ್ಯಕ್ಷರಾದ ಬಸಮ್ಮ, ಶ್ರೀನಿವಾಸ ಚಿನ್ನಿಕಟ್ಟಿ, ಗೋಪಾಲ್ ದೇವರಮನೆ, ಜಬೀವುಲ್ಲಾ, ಅಶ್ವಿನಿ, ಲಿಂಗರಾಜ್ ಇತರರು ಉಪಸ್ಥಿತರಿದ್ದರು. ಶ್ರೀಕಾಂತ್ ಭಟ್ ನಿರೂಪಿಸಿದರು. ಮಂಜುನಾಥ್ ಪ್ರಾರ್ಥಿಸಿದರು.

# ಮುರುಘಾ ಶ್ರೀಗಳಿಗೆ ಕಿರುಕುಳ ಪ್ರಕರಣ


## ನಿಷ್ಪಕ್ಷಪಾತ ತನಿಖೆಗೆ ಎಐಡಿಎಸ್‌ಓ ಆಗ್ರಹ

ದಾವಣಗೆರೆ, ಆ.28- ಮುರುಘಾ ಮಠದಲ್ಲಿ ಕೇಳಿ ಬಂದಿರುವ ಲೈಂಗಿಕ ಕಿರುಕುಳದ ಆರೋಪವು ರಾಜ್ಯದ ಜನತೆಯಲ್ಲಿ ಗಾಬರಿಯನ್ನುಂಟು ಮಾಡಿದೆ ಎಂದು ಎಐಡಿಎಸ್‌ಓ ಸಂಘಟನೆ ಆತಂಕ ವ್ಯಕ್ತಪಡಿಸಿದೆ.

ಭರವಸೆಯೊಂದಿಗೆ ಬಡ ಪಾಲಕರು ತಮ್ಮ ಹೆಣ್ಣು ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಇಂತಹ ಸಂಸ್ಥೆಗಳ ಹಾಸ್ಟೆಲ್‌ಗಳಲ್ಲಿ ಉಳಿದುಕೊಂಡು ಶಿಕ್ಷಣ ಪಡೆಯಲು ಕಳುಹಿಸುತ್ತಾರೆ. ಅವರ ನಂಬಿಕೆಯನ್ನು ನಾಶಗೊಳಿಸುವುದು ಮತ್ತು ಮಕ್ಕಳ ಮುಗ್ಧತೆಗೆ ಧಕ್ಕೆ ಉಂಟು ಮಾಡುವುದು ಅಕ್ಷಮ್ಯ ಅಪರಾಧವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಬಡತನ ಮತ್ತು ಗುಣಮಟ್ಟದ ಶಿಕ್ಷಣವು ದೊರಕದೇ ತಮ್ಮ ಪಾಲಕರಿಂದ ದೂರವಿದ್ದು ಇಂತಹ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಲ್ಲಿ ಭರವಸೆ ಮೂಡುವಂತಹ ನಿದರ್ಶನೀಯ ಶಿಕ್ಷೆಯು ಈ ಪ್ರಕರಣದಲ್ಲಿ ಜಾರಿಯಾಗಬೇಕು ಎಂದು ವಿದ್ಯಾರ್ಥಿಗಳ ಪರವಾಗಿ ಎಐಡಿಎಸ್‌ಓ ಪೂಜಾ ನಂದಿಹಳ್ಳಿ ಒತ್ತಾಯಿಸಿದ್ದಾರೆ.

# ರಾಣೇಬೆನ್ನೂರಿನಲ್ಲಿ ವೀರಭದ್ರೇಶ್ವರ ಜಯಂತಿ



ರಾಣೇಬೆನ್ನೂರು, ಆ.28 - ವಾಗೀಶ ನಗರದ ಶ್ರೀ ವೀರಭದ್ರ ದೇವರ ಜಯಂತ್ಯೋತ್ಸವವು ನಾಡಿದ್ದು ದಿನಾಂಕ 30 ರ ಮಂಗಳವಾರ ನಡೆಯಲಿದೆ. ಉತ್ಸವದ ಮೂರ್ತಿಯ ಮೆರವಣಿಗೆಯನ್ನು ಮಾಜಿ ಸಭಾಪತಿ ಕೆ.ಬಿ. ಕೋಳಿವಾಡ ಉದ್ಘಾಟಿಸುವರು.

ನಗರಾಧ್ಯಕ್ಷೆ ರೂಪಾ ಚಿನ್ನಿಕಟ್ಟಿ, ಉಪಾಧ್ಯಕ್ಷೆ ಪ್ರಭಾವತಿ ತಿಳವಳ್ಳಿ ಭಾಗವಹಿಸುವರು. ನಂತರ ಹೊನ್ನಾಳಿ ಚನ್ನಮಲ್ಲಿಕಾರ್ಜುನ ಶ್ರೀಗಳ ಸಾನ್ನಿಧ್ಯದಲ್ಲಿ ನಡೆಯುವ ಧರ್ಮಸಭೆಯ ಉದ್ಘಾಟನೆಯನ್ನು ಶಾಸಕ ಅರುಣ ಕುಮಾರ್ ಮಾಡಲಿದ್ದು, ಅಧ್ಯಕ್ಷತೆ ವೀರಣ್ಣ ಮೋಟಗಿ, ಬಸವರಾಜ ಪಟ್ಟಣಶೆಟ್ಟಿ, ಮೃತ್ಯುಂಜಯ ಭಾಗವಹಿಸುವರು.

# ದೇವಾಂಗ ಸಂಘದಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ,ಆ.28- ದಾವಣಗೆರೆ ನಗರ ದೇವಾಂಗ ಸಂಘದ ವತಿಯಿಂದ ದೇವಾಂಗ ಸಮಾಜದ ಎಸ್.ಎಸ್.ಎಲ್.ಸಿ ಹಾಗು ಪಿ.ಯು.ಸಿ. ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನಡೆಯಲಿದೆ. ಎಸ್.ಎಸ್.ಎಲ್.ಸಿ ಶೇ.90% ಹಾಗು ಪಿ.ಯು.ಸಿ. ಶೇ.85% ಮೇಲ್ಪಟ್ಟ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 5-9-2022. ಸ್ಥಳ : ಶ್ರೀ ದೇವಾಂಗ ವಿದ್ಯಾರ್ಥಿ ನಿಲಯ, ಡಾ|| ಪುರಂತರ ಆಸ್ಪತ್ರೆ ರಸ್ತೆ, ಎಂ.ಸಿ.ಸಿ.ಎ ಬ್ಲಾಕ್, ದಾವಣಗೆರೆ. ವಿವರಕ್ಕೆ ಸಂಪರ್ಕಿಸಿ. ಅಧ್ಯಕ್ಷರು ಅಜ್ಜೇಶ (98806 62036). ಉಪಾಧ್ಯಕ್ಷರು ಬಿ.ಎನ್. ಬಾಬು (89715 90727), ಕಾರ್ಯದರ್ಶಿ ಬಿ.ಜಿ. ರುದ್ರಸ್ವಾಮಿ (94488 73439), ಖಜಾಂಚಿ ಹೆಚ್.ಟಿ. ರಂಗನಾಥ್ (99868 59030)

# ಕೃಷಿ ಪ್ರಶಸ್ತಿಗೆ ಮಹಿಳೆಯರಿಂದ ಅರ್ಜಿ

ದಾವಣಗೆರೆ, ಆ. 28 - ಕೃಷಿ ಮತ್ತು ಪ್ರಶಸ್ತಿ ಬೆಳೆ ಸ್ಪರ್ಧೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು. ಜಿಲ್ಲಾ ಮಟ್ಟಕ್ಕೆ ಮುಸುಕಿನ ಜೋಳ ಮಳೆಯಾಶ್ರಿತ ಬೆಳೆಯನ್ನು ನಿಗದಿಪಡಿಸಲಾಗಿದ್ದು. ತಾಲ್ಲೂಕು ಮಟ್ಟಕ್ಕೆ ದಾವಣಗೆರೆ, ಚನ್ನಗಿರಿ, ಹರಿಹರ ಹಾಗೂ ಹೊನ್ನಾಳಿ ತಾಲ್ಲೂಕುಗಳಿಗೆ ಭತ್ತ ನೀರಾವರಿ ಮತ್ತು ನ್ಯಾಮತಿ ತಾಲ್ಲೂಕಿಗೆ ಶೇಂಗಾ ಮಳೆಯಾಶ್ರಿತ ಹಾಗೂ ಜಗಳೂರು ತಾಲ್ಲೂಕಿಗೆ ಮುಸುಕಿನ ಜೋಳ ಮಳೆಯಾಶ್ರಿತ ಬೆಳೆಗಳನ್ನು ನಿಗದಿಪಡಿಸಲಾಗಿದೆ. ಮುಂಗಾರು ಹಂಗಾಮಿಗೆ ಅರ್ಜಿ ಸಲ್ಲಿಸಲು ಆಗಸ್ಟ್ 31 ಹಾಗೂ ಹಿಂಗಾರು ಹಂಗಾಮಿಗೆ ನವೆಂಬರ್ 30 ಕೊನೆಯ ದಿನ ಆಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಕೃಷಿ ಪ್ರಶಸ್ತಿಗೆ ಪ್ರತ್ಯೇಕವಾಗಿ ಮಹಿಳೆಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ರೈತ ಬಾಂಧವರು ಕೃಷಿ ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು ಎಂದು ದಾವಣಗೆರೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

# ನಗರದಲ್ಲಿ ಇಂದಿನಿಂದ ರೇಬೀಸ್ ವಿರೋಧಿ ಮಾಸಾಚರಣೆ

ಇಂದಿನಿಂದ ಬರುವ ಸೆಪ್ಟೆಂಬರ್ 12 ರವರೆಗೆ ಪಾಲಿ ಕ್ಲಿನಿಕ್ (ಜಿಲ್ಲಾ ಪಶು ಆಸ್ಪತ್ರೆ) ಆವರಣದಲ್ಲಿ ರೇಬೀಸ್ ವಿರೋಧಿ ಮಾಸಾಚರಣೆ ನಡೆಯಲಿದೆ. ನಾಯಿ ಮತ್ತು ಬೆಕ್ಕುಗಳಿಗೆ ಉಚಿತ ರೇಬೀಸ್ ಲಸಿಕಾ ಕಾರ್ಯಕ್ರಮವನ್ನು ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ ಹಮ್ಮಿಕೊಳ್ಳಲಾಗಿದೆ.

# ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕ ಉಮೇಶ್‌ಗೆ ಶ್ರೀ ತರಳಬಾಳು ಜಗದ್ಗುರುಗಳ ಆಶೀರ್ವಾದ



ಸಿರಿಗೆರೆ, ಆ. 28 - ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿರುವ ಶಿಕ್ಷಕ ಟಿ.ಪಿ. ಉಮೇಶ್ ಅವರು ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾ ಸ್ವಾಮಿಗಳವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಪ್ರಶಸ್ತಿ ಆಯ್ಕೆಯ ವಿಧಾನದ ಬಗ್ಗೆ ಮಾಹಿತಿ ಪಡೆದ ಶ್ರೀಗಳು, ಮೆಚ್ಚುಗೆ ವ್ಯಕ್ತಪಡಿಸಿದರು. ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ತನ್ನನ್ನು ಸಮರ್ಪಿಸಿಕೊಂಡಿರುವ ಉಮೇಶ್ ಅವರ ಸಾಧನೆ, ಶಿಕ್ಷಕ ಸಮುದಾಯಕ್ಕೆ ತಿಳಿಯಬೇಕು. ಅವರ ಶ್ರಮ, ಸೇವೆ ಇತರರಿಗೂ ಪ್ರೇರಣೆಯಾಗುವ ಉದ್ದೇಶದಿಂದ ಮುಂದಿನ ದಿನಗಳಲ್ಲಿ ಸಿರಿಗೆರೆಯಲ್ಲಿ ಅಭಿನಂದನಾ ಸಮಾರಂಭ ಏರ್ಪಡಿಸಿ, ಶಿಕ್ಷಕ ವೃತ್ತಿಯ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಪ್ರೊ. ಎಸ್.ಬಿ. ರಂಗನಾಥ್, ಆಡಳಿತಾಧಿಕಾರಿ ಡಾ. ಎಚ್.ವಿ. ವಾಮದೇವಪ್ಪ, ಅಧ್ಯಾಪಕ ನಾಗರಾಜ ಸಿರಿಗೆರೆ, ಪತ್ರಕರ್ತ ಪಾಪುಗುರು ಮುಂತಾದವರು ಇದ್ದರು.

# ಬುಡರನಾಳ್ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ



ಭರಮಸಾಗರ, ಆ. 28- ಭರಮಸಾಗರದಿಂದ ದಾವಣಗೆರೆಗೆ ಹೋಗುವ ಮಾರ್ಗದ ಶ್ರೀ ವ್ಯಾಸರಾಜ ಪ್ರತಿಷ್ಠಿತ ಇತಿಹಾಸವುಳ್ಳ ಶ್ರೀ ಆಂಜನೇಯ ಸ್ವಾಮಿ ದೇವರಿಗೆ ಶ್ರಾವಣ ಮಾಸದ ಕೊನೆ ವಾರ ಹಾಗೂ ಅಮಾವಾಸ್ಯೆ ಪ್ರಯುಕ್ತ ಪೂಜೆ ಕಾರ್ಯವನ್ನು ಭಕ್ತರು ವಿಜೃಂಭಣೆಯಿಂದ ನೆರವೇರಿಸಿದರು.

ಶ್ರೀ ಸ್ವಾಮಿಗೆ ಪಂಚಾಮೃತ ಅಭಿಷೇಕ, ವೀಳ್ಯೆದೆಲೆ ಪೂಜೆ, ಕುಂಕುಮ ಪೂಜೆ ವಿಶೇಷವಾಗಿ ನಡೆಯಿತು. ಭಕ್ತರು ಭಕ್ತಿಯಿಂದ ಅಕ್ಕಿ, ಬೇಳೆ, ಬೆಲ್ಲ, ತರಕಾರಿ, ಅಲ್ಲದೆ ತಟ್ಟೆಯನ್ನು ದಾನವಾಗಿ ದೇವರಿಗೆ ಸಲ್ಲಿಸಿದರು. ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಸಲಾಯಿತು.

ದೇವಸ್ಥಾನದ ಎಲ್ಲಾ ರೀತಿಯ ಅಭಿವೃದ್ಧಿ ಕಾರ್ಯದಲ್ಲಿ ನೂತನ ದೇವಸ್ಥಾನ ಕಟ್ಟಿಸುವಲ್ಲಿ ಜಿ.ಪಂ ಮಾಜಿ ಉಪಾಧ್ಯಕ್ಷ, ಕಾಂಗ್ರೆಸ್ ಮುಖಂಡರಾದ ಹೆಚ್. ಎನ್. ತಿಪ್ಪೇಸ್ವಾಮಿ ಅವರು ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಈ ದೇವಸ್ಥಾನದ ಆವರಣವನ್ನು ಪ್ರವಾಸಿ ತಾಣ, ಮಕ್ಕಳಿಗೆ ಆಟಿಕೆಗಳು, ಹಿರಿಯ ಜೀವಿಗಳಿಗೆ ವಿಶ್ರಾಂತಿ ತಾಣವನ್ನು ಮಾಡುವುದಾಗಿ ತಿಪ್ಪೇಸ್ವಾಮಿ ತಿಳಿಸಿದರು.

ದೇವಸ್ಥಾನದ ಅರ್ಚಕರಾದ ಮುರುಳಿಧರ್ ಭಕ್ತರಿಗೆ ತೀರ್ಥ ಪ್ರಸಾದ ನೀಡಿದರು. ನೀಲಪ್ಪ, ತಿಪ್ಪೇಸ್ವಾಮಿ, ನಿರಂಜನಮೂರ್ತಿ ಮತ್ತು ಇತರರು ಹಾಜರಿದ್ದರು.

# ಅ.17ರಂದು ಎಐಸಿಸಿ ಅಧ್ಯಕ್ಷ ಸ್ಥಾನದ ಚುನಾವಣೆ

(1ನೇ ಪುಟದಿಂದ) ಅಧ್ಯಕ್ಷೆಯಾಗಿದ್ದಾರೆ. 2017-19ರ ನಡುವೆ ರಾಹುಲ್ ಗಾಂಧಿ ಅವರು ಅಧ್ಯಕ್ಷರಾಗಿದ್ದರು. 2000ದಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸೋನಿಯಾ ಗಾಂಧಿ ವಿರುದ್ಧ ಸ್ಪರ್ಧಿಸಿದ್ದ ಜಿತೇಂದ್ರ ಪ್ರಸಾದ್ ಪರಾಭವ ಕಂಡಿದ್ದರು. ರಾಹುಲ್ ಗಾಂಧಿ ಅವರೇ ಅಧ್ಯಕ್ಷರಾಗಬೇಕು ಎಂದು ಗಾಂಧಿ ಕುಟುಂಬದ ನಿಷ್ಠರು ಒತ್ತಾಯಿಸುತ್ತಿದ್ದಾರೆ. ಆದರೆ, ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಸೇರಿದಂತೆ ಹಲವರ ಹೆಸರುಗಳು ಈ ಹುದ್ದೆಗೆ ಕೇಳಿ ಬರುತ್ತಿವೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಭಿನ್ನಮತೀಯ ನಾಯಕ ಆನಂದ್ ಶರ್ಮ ಅವರು, ಮತದಾರರ ಪಟ್ಟಿ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆದರೆ, ಸಭೆಯ ನಂತರ ಪತ್ರಕರ್ತರೊಂದಿಗೆ ಮಾತನಾಡಿರುವ ಎಐಸಿಸಿ ಮಾಧ್ಯಮ ವಿಭಾಗದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಚುನಾವಣಾ ಪ್ರಕ್ರಿಯೆ ಹಾಗೂ ವೇಳಾಪಟ್ಟಿ ಕುರಿತು ಯಾವುದೇ ಪ್ರಶ್ನೆಗಳು ಉದ್ಭವವಾಗಲಿಲ್ಲ ಎಂದಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ವೈದ್ಯಕೀಯ ತಪಾಸಣೆಗಾಗಿ ವಿದೇಶಕ್ಕೆ ತೆರಳಿದ್ದಾರೆ. ಈ ಹಿನ್ನೆಲೆಯಲ್ಲಿ ಆನ್‌ಲೈನ್ ಮೂಲಕ ಸಿ.ಡಬ್ಲ್ಯೂ.ಸಿ. ಸಭೆ ಕರೆಯಲಾಗಿತ್ತು.

# ಸೆ.8 ರಂದು ಹರಿಹರದ ಆರೋಗ್ಯ ಮಾತೆ ಮರಿಯಮ್ಮನವರ ರಥೋತ್ಸವ



ಹರಿಹರ, ಆ. 28 - ನಗರದ ಆರೋಗ್ಯ ಮಾತೆಯ ಬಸಿಲಿಕ ಪುಣ್ಯಕ್ಷೇತ್ರದಲ್ಲಿ ಬರುವ ಸೆಪ್ಟೆಂಬರ್ 7 ರಿಂದ 9 ರವರೆಗೆ ಆರೋಗ್ಯ ಮಾತೆ ಮರಿಯಮ್ಮನವರ ವಾರ್ಷಿಕ ಮಹೋತ್ಸವವನ್ನು ಹರಿಹರ ಮಾತೆಯ ಜೊತೆ ನಮ್ಮ ಪಯಣ, ಅನ್ಯೋನ್ಯತೆಗೆ ಸಾಧನ ಎಂಬ ಉತ್ಸವದ ಧ್ಯೇಯ ವಾಕ್ಯದೊಂದಿಗೆ ಆಚರಿಸಲಾಗುತ್ತಿದೆ ಎಂದು ಆರೋಗ್ಯ ಮಾತೆಯ ಧರ್ಮ ಗುರುಗಳಾದ ಡಾ. ಅಂತೋನಿ ಪೀಟರ್ ಹೇಳಿದರು.

ನಗರದ ಆರೋಗ್ಯ ಮಾತೆ ಚರ್ಚ್ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಆರೋಗ್ಯ ಮಾತೆ ಬಸಿಲಿಕ ಪುಣ್ಯಕ್ಷೇತ್ರದಲ್ಲಿ ದಿ. 30 ರ ಮಂಗಳವಾರ ಸಂಜೆ 5-30 ಕ್ಕೆ ಶಿವಮೊಗ್ಗದ ಧರ್ಮಾಧ್ಯಕ್ಷರಾದ ಡಾ.ಎಸ್.ಜೆ ಫ್ರಾನ್ಸಿಸ್ ಸೆರಾವೋ ರವರು ಧ್ವಜಾರೋಹಣ ಮಾಡುವ ಮೂಲಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಿದ್ದಾರೆ.

ನಂತರ ಸೆ. 6 ರಂದು ಬೆಳಗ್ಗೆ 8 ಕ್ಕೆ, 10-30 ಕ್ಕೆ ಮಧ್ಯಾಹ್ನ 3 ಕ್ಕೆ ಸಂಜೆ 5-30 ಪೂಜಾರ್ಪಣೆ ನಡೆಯಲಿದೆ. ದಿ. 7 ರಂದು ಬೆಳಗ್ಗೆ ಯಿಂದ ಸಂಜೆಯವರೆಗೆ ಚಿಕ್ಕಮಗಳೂರು ಧರ್ಮಾಧ್ಯಕ್ಷ ಡಾ ಟಿ. ಅಂತೋಣಿ ಸ್ವಾಮಿಯವರಿಂದ ವಿಶೇಷ ಆರಾಧನೆ, ಕನ್ನಡದಲ್ಲಿ ಪೂಜಾರ್ಪಣೆ ನಡೆಯಲಿದೆ. ಡಾ. ಫ್ರಾಂಕ್ಲಿನ್ ಡಿಸೋಜಾ, ಫಾ. ರೋಮನ್ ಪಿಂಟೋ, ಬ್ರ. ಟಿ.ಕೆ. ಜಾರ್ಜ್, ಬ್ರ. ವಿಲಿಯಂ ಡಿಸೋಜಾ ಕಾರ್ಯಕ್ರಮ ನಡೆಸಿಕೊಡುವರು. ಸೆ. 8 ರಂದು ಗುರುವಾರ ಬೆಳಗ್ಗೆ 5-15 ಕ್ಕೆ ಕನ್ನಡ 6-15 ಕ್ಕೆ ತೆಲುಗು, 7-15 ಕ್ಕೆ ಮಲಯಾಳಂ ಪೂಜೆ ಡಾ ಜೋಸೆಫ್ ಅರುಮಚಾಡತ್ ಭದ್ರಾವತಿಯ ಧರ್ಮಾಧ್ಯಕ್ಷರಿಂದ ನಂತರ 8-45 ಕ್ಕೆ ತಮಿಳು, 10 ಕ್ಕೆ ಇಂಗ್ಲಿಷ್ ಪೂಜೆ ಡಾ ರಾಬರ್ಟ್ ವಿರಾಂಡಾ ಗುಲ್ಬರ್ಗ ಧರ್ಮಾಧ್ಯಕ್ಷರಿಂದ, ನಂತರ 10-45ಕ್ಕೆ ಧರ್ಮಾಧ್ಯಕ್ಷರಿಂದ ಸ್ವಾಗತ. 11 ಕ್ಕೆ ಕನ್ನಡದಲ್ಲಿ ಹಬ್ಬದ ಸಹ ಬಲಿ ಪೂಜೆ ಡಾ ಫ್ರಾನ್ಸಿಸ್ ಸೆರಾವೋ ಶಿವಮೊಗ್ಗ ಧರ್ಮಾಧ್ಯಕ್ಷರಿಂದ. ಮಧ್ಯಾಹ್ನ 1-15 ಕೊಂಕಣಿ ಪೂಜೆ ಡಾ. ರಾಬರ್ಟ್ ವಿರಾಂಡಾ ರವರಿಂದ. 2-30 ಪರಮ ಪ್ರಸಾದ ವಿಶೇಷ ಆರಾಧನೆ, 4 ಕನ್ನಡ ಪೂಜೆ, ಸಂಜೆ 5 ಗಂಟೆಗೆ ಸೇವಂತಿಗೆ ಹೂವಿನ ಪುಷ್ಪಾಲಂಕೃತ ತೇರಿನ ಮೆರವಣಿಗೆ ವಿಜೃಂಭಣೆಯಿಂದ ನಡೆಯುತ್ತದೆ. 7 ಕ್ಕೆ ಕನ್ನಡ ಬಲಿಪೂಜೆ 8 ಕ್ಕೆ ವಂದನಾರ್ಪಣೆ ನಡೆಯಲಿದೆ.

ಸೆ. 9 ರಂದು ಬೆಳಗ್ಗೆ ವಿಶೇಷ ಪೂಜೆ ಯಾತ್ರಿಕರ ವಾಹನಗಳನ್ನು ಆಶೀರ್ವದಿಸಲಾಗುವುದು ಎಂದವರು ಹೇಳಿದರು. ಈ ಸಂದರ್ಭದಲ್ಲಿ ಡಿ ಫ್ರಾನ್ಸಿಸ್ ಕ್ಸೆವಿಯರ್ ಇತರರು ಹಾಜರಿದ್ದರು.

# ಪಾಕ್: ಸಾವಿರ ದಾಟಿದ ಪ್ರವಾಹ ಸಾವು

ಇಸ್ಲಾಮಾಬಾದ್, ಆ. 28 – ಪಾಕಿಸ್ತಾನದಲ್ಲಿ ಉಂಟಾಗಿರುವ ಭೀಕರ ಪ್ರವಾಹಕ್ಕೆ ಸಿಲುಕಿ ಸಾವನ್ನಪ್ಪಿದವರ ಸಂಖ್ಯೆ ಸಾವಿರದ ಗಡಿ ದಾಟಿದೆ. ಕಳೆದ 24 ಗಂಟೆಗಳಲ್ಲಿ 119 ಜನ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಜೂನ್ 14ರಿಂದ ನಿರಂತರ ಸುರಿಯುತ್ತಿರುವ ಮಳೆಯಿಂದಾಗಿ ಪಾಕಿಸ್ತಾನದಲ್ಲಿ ತೀವ್ರ ವಿಕೋಪ ಉಂಟಾಗಿದೆ. ಹಲವಾರು ನದಿಗಳು ಉಕ್ಕಿ ಹರಿಯುತ್ತಿವೆ.

ಇದುವರೆಗೂ 1,033 ಜನ ಸಾವನ್ನಪ್ಪಿದ್ದಾರೆ ಹಾಗೂ 1,527 ಜನ ಗಾಯಗೊಂಡಿದ್ದಾರೆ. ಕಳೆದ 24 ಗಂಟೆಗಳಲ್ಲಿ ಸಿಂಧ್ ಪ್ರಾಂತ್ಯದಲ್ಲೇ ಅತಿ ಹೆಚ್ಚಿನ 76 ಜನ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇದುವರೆಗೂ ಸಿಂಧ್ ಪ್ರಾಂತ್ಯದಲ್ಲಿ 347, ಬಲೂಚಿಸ್ತಾನದಲ್ಲಿ 238 ಹಾಗೂ ಖೈಬರ್ ಪಖ್ತುಂಖ್ವದಲ್ಲಿ 226 ಜನ ಸಾವನ್ನಪ್ಪಿದ್ದಾರೆ.

ಪ್ರವಾಹದಿಂದ 3,451 ಕಿ.ಮೀ. ಉದ್ದದ ರಸ್ತೆ, 147 ಸೇತುವೆಗಳು ಮತ್ತು 9.49 ಲಕ್ಷ ಮನೆಗಳು ಹಾಳಾಗಿವೆ.

ಪಾಕಿಸ್ತಾನದ ಆರ್ಥಿಕತೆಗೆ ಹಲವು ಶತಕೋಟಿ ರೂ.ಗಳ ನಷ್ಟವಾಗಿದೆ. ಈ ಬಗ್ಗೆ ವರದಿ ರೂಪಿಸಲು ಪ್ರಧಾನ ಮಂತ್ರಿ ಶೆಬಾಜ್ ಷರೀಫ್ ಆದೇಶಿಸಿದ್ದಾರೆ.

ಈ ಪ್ರಮಾಣದ ವಿಕೋಪವನ್ನು ಎದುರಿಸಲು ಪಾಕಿಸ್ತಾನಕ್ಕೆ ಸಾಧ್ಯವಾಗದೇ, ಅಂತರರಾಷ್ಟ್ರೀಯ ನೆರವು ಕೋರಿದೆ. ವಿಶ್ವ ಸಂಸ್ಥೆಯು 160 ದಶಲಕ್ಷ ಡಾಲರ್‌ಗಳ ತುರ್ತು ನೆರವಿಗೆ ಕರೆ ನೀಡುವ ಸಾಧ್ಯತೆ ಇದೆ. ಪಾಕಿಸ್ತಾನದ ಮಿತ್ರ ದೇಶಗಳು ನೆರವಿನ ಹಸ್ತ ಚಾಚುತ್ತಿವೆ. 1.5 ದಶಲಕ್ಷ ಡಾಲರ್ ನೆರವು ನೀಡುವುದಾಗಿ ಬ್ರಿಟನ್ ತಿಳಿಸಿದೆ. ಯುಎಇ, ಟರ್ಕಿ ಹಾಗೂ ಇರಾನ್‌ಗಳೂ ಸಹ ನೆರವು ನೀಡುವುದಾಗಿ ಹೇಳಿವೆ.

**ಶ್ರೀಮತಿ ಶಾಂತಮ್ಮ ನಿಧನ**



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ಕಬ್ಬೇರ ವಾಸಿ ದಿ.ಚಿಕ್ರಪ್ಪನವರ ಧರ್ಮಪತ್ನಿ ಶ್ರೀಮತಿ ಶಾಂತಮ್ಮ ಅವರು, ದಿನಾಂಕ 28.8.2022ರ ಭಾನುವಾರ ಸಂಜೆ 4.15 ಕ್ಕೆ ನಿಧನರಾದರು. ಓರ್ವ ಪುತ್ರ ಓರ್ವ ಪುತ್ರಿ, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.8.2022ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮವಾದ ಎಲೆಬೇತೂರಿನ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

**ಶ್ರೀಮತಿ ಹನುಮಕ್ಕ ಓಬಯ್ಯ ನಿಧನ**



ಚಿತ್ರದುರ್ಗ ಜಿಲ್ಲೆಯ ಬೆಳಗಟ್ಟ ಗ್ರಾಮದ ದಿ.ಓಬಯ್ಯನವರ ಧರ್ಮಪತ್ನಿ ಶ್ರೀಮತಿ ಹನುಮಕ್ಕ (70) ಅವರು, ದಿನಾಂಕ 28.8.2022 ರ ಭಾನುವಾರ ಬೆಳಿಗ್ಗೆ ಚಿತ್ರದುರ್ಗ ನಗರದ ದವಳಗಿರಿ ಬಡಾವಣೆಯಲ್ಲಿ ನಿಧನರಾದರು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.8.2022 ರ ಸೋಮವಾರ ಬೆಳಿಗ್ಗೆ 11.30 ಕ್ಕೆ ಮೃತರ ಸ್ವಗ್ರಾಮ ವಾದ ಬೆಳಗಟ್ಟದಲ್ಲಿ ನೆರವೇರಲಿದೆ.

**ಐದನೇ ವರ್ಷದ ಪುಣ್ಯಸ್ಮರಣೆ**



**ದಿ|| ಶ್ರೀಮತಿ ಸೌಭಾಗ್ಯ**

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು, ಸದಾ ನಿಮ್ಮ ಸ್ಮರಣೆಯಲ್ಲಿರುವ

**ಪತಿ : ಶ್ರೀ ಕೆ. ಸಿದ್ದಪ್ಪ ಮತ್ತು ಮಕ್ಕಳು ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರು**

**ಇವರ ಸ್ಮರಣೆ : ದಿನಾಂಕ : 29.08.2022ರ ಸೋಮವಾರ ಬೆಳಿಗ್ಗೆ 11.00 ಗಂಟೆಗೆ 6ನೇ ಮೇನ್, 4ನೇ ಕ್ರಾಸ್, ಯಲ್ಲಮ್ಮನಗರ, ದಾವಣಗೆರೆಯಲ್ಲಿ ಮೃತರ ಪುಣ್ಯಸ್ಮರಣೆಯನ್ನು ನೆರವೇರಿಸಲಾಗುವುದು. ಫೋ. : 9482690053**

# ಶಿವ ವಿವಿಧೋದ್ದೇಶ ಸಂಘದಿಂದ ಭದ್ರೆಗೆ ಬಾಗಿನ



ಮಲೇಬೆನ್ನೂರು, ಆ.28- ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಭಾನುವಾರ ಮಲೇಬೆನ್ನೂರಿನ ಶಿವ ವಿವಿಧೋದ್ದೇಶ ಸಹಕಾರ ಸಂಘದಿಂದ ಗಂಗೆ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಲಾಯಿತು.

ಈ ವೇಳೆ ಮಾತನಾಡಿದ ಸಂಘದ ಅಧ್ಯಕ್ಷ ಡಾ. ಬಿ.ಚಂದ್ರಶೇಖರ್ ಅವರು, ಮಧ್ಯ ಕರ್ನಾಟಕದ ಜೀವನಾಡಿಯಾಗಿರುವ ಭದ್ರಾ ಜಲಾಶಯ ಪ್ರತಿ ವರ್ಷ ಹೀಗೆ ಭರ್ತಿಯಾಗಿ ಎಲ್ಲಾ ಜನರ ಬದುಕನ್ನು ಹಸನುಗೊಳಿಸಲಿ ಎಂದು ಪ್ರಾರ್ಥಿಸಿದರು.

ಮಲೇಬೆನ್ನೂರು ಲಯನ್ಸ್ ಕ್ಲಬ್ ಅಧ್ಯಕ್ಷ ನಿಟ್ಟೂರಿನ ಎನ್.ಜಿ.ಶಿವಾಜಿ ಪಾಟೀಲ್ ಮಾತನಾಡಿ, ಭದ್ರಾ ಅಚ್ಚುಕಟ್ಟಿನ ರೈತರ ಹಿತ ಕಾಪಾಡುವ ದೃಷ್ಟಿಯಿಂದ ಜಿಲ್ಲೆಯ ಜನ ಪ್ರತಿನಿಧಿಗಳು ಒಂದಾಗಿ ಮುಖ್ಯಮಂತ್ರಿ ಮೇಲೆ ಒತ್ತಡ ಹಾಕಿ, ಅಪ್ಪರ್ ಭದ್ರಾ ಯೋಜನೆಗೆ ಎಲ್ಲಾ ನೀರನ್ನು ತುಂಗಾದಿಂದಲೇ ಹರಿಸುವಂತೆ ಆದೇಶ ಮಾಡಿಸಬೇಕು. ಭದ್ರಾ ಅಚ್ಚುಕಟ್ಟಿನ ವ್ಯಾಪ್ತಿಯ ಹೊಲ, ರಸ್ತೆ, ಬಸಿಗಾಲುವೆಗಳ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಿಸಬೇಕೆಂದು ಒತ್ತಾಯಿಸಿದರು.

ಸಂಘದ ಉಪಾಧ್ಯಕ್ಷ ಯಲಟ್ಟಿಯ ಜಿ.ಆಂಜನೇಯ, ನಿರ್ದೇಶಕರಾದ ಹೆಚ್.ಜಿ.ಚಂದ್ರಶೇಖರ್, ಕರೇಗೌಡ್ರ ರಂಗನಾಥ್, ಶ್ರೀಮತಿ ಸರೋಜಮ್ಮ ಭರಮಗೌಡ, ಕುಂಬಳೂರಿನ ಹೆಚ್.ಬಿ.ಶಿವಕುಮಾರ್, ಹುಲ್ಲುಮನಿ ಷಣ್ಮುಖಪ್ಪ, ಬೆಳ್ಳೂಡಿಯ ಗೌಡ್ರ ರವಿಶಂಕರ್, ಎ.ದೇವೇಂದ್ರಪ್ಪ, ನಿಟ್ಟೂರಿನ ಶ್ರೀಮತಿ ನಾಗರತ್ನ ಬಿ.ಜಿ.ಧನಂಜಯ, ಜಿಗಳಿ ಪ್ರಕಾಶ್, ಕಾರ್ಯದರ್ಶಿ ಜಿ.ಎಂ.ನಳಿನ, ವಾಸವಿ ಪ್ರಿಂಟರ್ಸ್‌ನ ಮಹಾಬಲೇಶ್ ಶ್ರೇಷ್ಠಿ, ಕಮಲಾಪುರದ ರಾಜಣ್ಣ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ರಾಣೇಬೆನ್ನೂರಿನಲ್ಲಿ ಮುಕ್ತ ಚೆಸ್ ಸ್ಪರ್ಧೆ

ರಾಣೇಬೆನ್ನೂರು, ಆ.28 - ಇಲ್ಲಿನ ಖನ್ನೂರ ವಿದ್ಯಾ ನಿಕೇತನ ಶಾಲೆಯಲ್ಲಿ ಸೆಪ್ಟೆಂಬರ್ 11 ರಂದು ಮುಕ್ತ ಚೆಸ್ ಸ್ಪರ್ಧೆ ಏರ್ಪಡಿಸಿದ್ದು, ಆಸಕ್ತರು ಮೊ. ಸಂಖ್ಯೆ 9148859412 ಸಂಪರ್ಕಿಸಲು ಕೋರಲಾಗಿದೆ.

# ನಕಲಿ ಬಂಗಾರ ನೀಡಿ ವಂಚನೆ : ಇಬ್ಬರ ಬಂಧನ




ಜಗಳೂರು, ಆ.28- ಮನೆಯ ಬುನಾದಿ ತೆಗೆಯುವ ಸಮಯದಲ್ಲಿ ಬಂಗಾರದ ನಾಣ್ಯಗಳು ಸಿಕ್ಕಿವೆ ಎಂದು ನಂಬಿಸಿ, ನಕಲಿ ಬಂಗಾರದ ನಾಣ್ಯಗಳನ್ನು ರೂ. 6 ಲಕ್ಷಕ್ಕೆ ಮಾರಾಟ ಮಾಡಿ ವಂಚನೆ ಮಾಡಿದ್ದ ಹರಪನ ಹಳ್ಳಿ ತಾಲ್ಲೂಕು ಅಗ್ರಹಾರ ಕೊರಚರಹಟ್ಟಿ ಗ್ರಾಮದ ಇಬ್ಬರು ಆರೋಪಿಗಳನ್ನು ಜಗಳೂರು ಪೊಲೀಸರು ಬಂಧಿಸಿ ಹಣವನ್ನು ವಶಪಡಿಸಿಕೊಂಡಿರುವುದಾಗಿ ಗ್ರಾಮಾಂತರ ಡಿವೈಎಸ್ಪಿ ಕನ್ನಿಕ ಸಿಕ್ರಿವಾಲ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ರಾಯಚೂರು ಮೂಲದ ಗುತ್ತಿಗೆದಾರ ಈರಣ್ಣ ಎಂಬುವವರನ್ನು ನಂಬಿಸಿ ಮನೆಯ ಬುನಾದಿ ಕಾಮಗಾರಿ ತೆಗೆಯುವಾಗ ಬ್ರಿಟಿಷರ ಕಾಲದ 200 ಗ್ರಾಂ ತೂಕದ ಬಂಗಾರದ ನಾಣ್ಯಗಳು ಸಿಕ್ಕಿದ್ದು, ಹಣದ ಅವಶ್ಯಕತೆ ಇರುವುದರಿಂದ ಕಡಿಮೆ ಬೆಲೆಗೆ ಮಾರಾಟ ಮಾಡುವುದಾಗಿ ನಂಬಿಸಿದ್ದರು.

ಆರೋಪಿಗಳ ಮಾತನ್ನು ನಂಬಿದ ಈರಣ್ಣ 6 ಲಕ್ಷ ರೂ. ನೀಡಿ ಬಂಗಾರದ ನಾಣ್ಯಗಳನ್ನು ಪಡೆದುಕೊಂಡು ಹೋಗಿದ್ದರು. ಊರಿಗೆ ಮರಳಿದ ನಂತರ ತಾವು ಮೋಸ ಹೋಗಿರುವುದು ತಿಳಿದು ಜಗಳೂರು ಪೊಲೀಸರಿಗೆ ದೂರು ನೀಡಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಮಾರ್ಗದರ್ಶನದಲ್ಲಿ ಪಿಎಸ್‌ಐ ಬಸವರಾಜ್, ಸಿಇಎನ್ ಸಿಬ್ಬಂದಿ ಯಾಸಿನ್ ಉಲ್ಲಾ, ರಾಜಪ್ಪ, ಸೈಯದ್ ಗಫಾರ್, ನಾಗರಾಜಯ್ಯ, ಹನುಮಂತ ಕವಾಡಿ, ವಸಂತ ರೆಡ್ಡಿ, ನೂರುಲ್ಲಾ ಮತ್ತಿತರೆ ಸಿಬ್ಬಂದಿಯವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆರೋಪಿಗಳಾದ ಸತ್ಪಡಿ ಪ್ರಕಾಶ್ ಹಾಗೂ ಹನುಮಂತ ಇಬ್ಬರನ್ನೂ ನ್ಯಾಯಾಂಗ ಬಂಧನಕ್ಕೆ ನೀಡಿ ಆದೇಶಿಸಲಾಗಿದೆ.

# ಶ್ರೀ ಶರಣ ಬಸವೇಶ್ವರರು ಪವಾಡ ಪುರುಷರು

## ಮಹಾಪುರಾಣ ಪ್ರವಚನದ ಸಮಾರೋಪ ಸಮಾರಂಭದಲ್ಲಿ ಓಂಕಾರ ಶಿವಾಚಾರ್ಯ ಶ್ರೀಗಳು



ದಾವಣಗೆರೆ, ಆ.28- ಕಲ್ಬುರ್ಗಿಯ ಶ್ರೀ ಶರಣ ಬಸವೇಶ್ವರರು ನಾಡಿನಾದ್ಯಂತ ಸಂಚರಿಸಿ, ಭಕ್ತರ ಉದ್ಧಾರಕ್ಕಾಗಿ ಪವಾಡ ರೀತಿಯ ಕಾರ್ಯಗಳನ್ನು ಮಾಡಿ ಪವಾಡ ಪುರುಷರಾದರು ಎಂದು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಿಶ್ಲೇಷಿಸಿದರು.

ಶ್ರೀಗಳು ಇಂದು ನಗರಕ್ಕೆ ಸಮೀಪದ ಬಾಡಾ ಕ್ರಾಸ್ ಬಳಿ ಇರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಕಲ್ಬುರ್ಗಿಯ ಶ್ರೀ ಶರಣ ಬಸವೇಶ್ವರರ ಮಹಾಪುರಾಣ ಪ್ರವಚನದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡುತ್ತಿದ್ದರು.

ತ್ರಿವಿಧ ದಾಸೋಹಿ ಶ್ರೀ ಶರಣ ಬಸವೇಶ್ವರರು ಭಕ್ತರಲ್ಲಿ ಧರ್ಮ ಜಾಗೃತಿಯನ್ನು ಮೂಡಿಸಲು ಶ್ರಮಿಸಿದ್ದಾಗಿ ಹೇಳಿದರು.

ಶ್ರಾವಣ ಮಾಸದಲ್ಲಿ ಒಂದು ತಿಂಗಳ ಕಾಲ ಪುರಾಣ ಪ್ರವಚನದ ಮೂಲಕ ವೇ. ಶಿವಬಸಯ್ಯ ಶಾಸ್ತ್ರಿಗಳು ಚರಂತಿ ಮಠ, ಕಾಡಶೆಟ್ಟಿಹಳ್ಳಿ ಅವರು ಶ್ರೀ ಶರಣ ಬಸವೇಶ್ವರರ ಜೀವನ ದರ್ಶನ ಮಾಡಿಕೊಟ್ಟರು.

ಮುಖ್ಯ ಅತಿಥಿಗಳಾಗಿ ಆಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ, ಸಹ ಕಾರ್ಯದರ್ಶಿ ಜೆ.ಎನ್.ಕರಿಬಸಪ್ಪ, ನಿರ್ದೇಶಕರಾದ ಬಸವನಗೌಡ, ಸೇವಾಕಾರ್ಯಕರ್ತರಾದ ಮಂಜಣ್ಣ , ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಆರಂಭದಲ್ಲಿ ಆಶ್ರಮದ ಮಕ್ಕಳಿಂದ ಪ್ರಾರ್ಥನೆಯಾಯಿತು. ಅರ್ಚಕರಾದ ಅಮರಯ್ಯ ಸ್ವಾಗತಿಸಿದರು. ಪುರಾಣ ಪ್ರವಚನಕ್ಕೆ ಭಾಗ್ಯವಂತರಿಂದ ಹಾರ್ಮೋನಿಯಂ ಸೇವೆ, ಯಲಗೂರೇಶ್, ರಾಜು ಮೂಲಗಿ, ಕಿರಣ್ ಇವರಿಂದ ತಬಲಾ ಸೇವೆ ನಡೆಯಿತು. ಹಾಲೇಶ್ ದಂಪತಿ ದಾಸೋಹ ಸೇವೆ ನಡೆಸಿಕೊಟ್ಟರು.

# ಎಲ್ಲ ಸಂಸ್ಕಾರಕ್ಕೂ ಮೂಲ ಕೃಷಿ ಸಂಸ್ಕಾರ

## 'ಮತ್ತೆ ಕಲ್ಯಾಣ'ದಲ್ಲಿ ಚಿತ್ರದುರ್ಗ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದೇಶ್ವರ ಸ್ವಾಮಿಗಳು



ಅರಸೀಕೆರೆ ಆ.28- ವಿಜ್ಞಾನ ಎಷ್ಟೇ ಮುಂದುವರೆದಿದ್ದರೂ ಕೃಷಿಯ ಮುಂದೆ ಅದು ಏನೇನೂ ಅಲ್ಲ. ಜಗತ್ತಿನ ಎಲ್ಲ ಸಂಸ್ಕಾರಕ್ಕೂ ಮೂಲ ಕೃಷಿ ಸಂಸ್ಕಾರವೇ ಆಗಿದೆ ಎಂದು ಚಿತ್ರದುರ್ಗ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧೇಶ್ವರ ಸ್ವಾಮಿಗಳು ನುಡಿದರು.

ಇಲ್ಲಿನ ಮತ್ತೆ ಕಲ್ಯಾಣ ಸಮಿತಿ – ಕಾಮ ಸಮುದ್ರ ಮತ್ತು ಸಾಣೇಹಳ್ಳಿ ಶ್ರೀ ತರಳಬಾಳು ಜಗದ್ಗುರು ಶಾಖಾಮಠದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಮತ್ತೆ ಕಲ್ಯಾಣ' ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಜಗತ್ತಿನ ಮೊದಲ ದೇವರು ಭೂಮಿ ತಾಯಿ. ಮೊದಲ ಪೂಜಾರಿ ಕೃಷಿಕ. ಸ್ವಾರ್ಥವಿಲ್ಲದ ನಿಸ್ವಾರ್ಥಿ ರೈತ, ಎಂದೂ ತನ್ನ ಕಾಯಕದಲ್ಲಿ ಅಸಡ್ಡೆಯನ್ನು ತೋರುವುದಿಲ್ಲ. ಕೆಲ ಪಟ್ಟಭದ್ರರು ದೇವರು, ಧರ್ಮದ ಹೆಸರಿನಲ್ಲಿ ನಂಬಿಕೆಗಳನ್ನು ಮೂಢನಂಬಿಕೆಗಳನ್ನಾಗಿಸಿ, ಜನರನ್ನು ಶೋಷಿಸು ತ್ತಿದ್ದಾರೆ ಎಂದು ಶ್ರೀ ಸಿದ್ಧೇಶ್ವರ ಸ್ವಾಮಿಗಳು ನುಡಿದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ರೈತರು ಕೈ ಎತ್ತಿ ಕೊಡುವ ಹೃದಯ ವೈಶಾಲ್ಯತೆಯುಳ್ಳವರೇ ಹೊರತು, ಕೈ ಚಾಚಿ ಬೇಡುವಂಥವರಲ್ಲ. ಆದರೆ ಅಂಥ ರೈತರ ಸ್ಥಿತಿ ಇಂದು ದುಃಸ್ಥಿತಿಯಲ್ಲಿದೆ. ಇದನ್ನು ನಾವು ಕಣ್ಣಾರೆ ಕಂಡಿದ್ದೇವೆ. ನಮ್ಮ ನಾಡಿನ ಅಧಿಕಾರಿ, ಜನಪ್ರತಿನಿಧಿಗಳಿಗೆ, ವ್ಯಾಪಾರಿಗಳಿಗೆ ಇದು ತಿಳಿಯಬೇಕು ಎಂದರು.

'ಶರಣರ ಕೃಷಿ' ಕುರಿತಂತೆ ಚಿಂತಕ ಚಟ್ನಳ್ಳಿ ಮಹೇಶ್ ಮಾತನಾಡಿದರು. ಶಿವಸಂಚಾರದ ಕೆ.ದಾಕ್ಷಾಯಣಿ, ಹೆಚ್. ಎಸ್. ನಾಗರಾಜ್ ವಚನ ಗೀತೆಗಳನ್ನು ಹಾಡಿದರು. ಶಿಕ್ಷಕಿ ಶೋಭಾ ಸ್ವಾಗತಿಸಿದರು. ರಾಜು ವಂದಿಸಿದರು. ಸಾಣೇಹಳ್ಳಿಯ ಶ್ರೀ ಶಿವಕುಮಾರ ಕಲಾ ಸಂಘದವರು ವೈ. ಡಿ. ಬದಾಮಿ ನಿರ್ದೇಶನದ 'ಮರಣವೇ ಮಹಾನವಮಿ' ನಾಟಕ ಪ್ರದರ್ಶಿಸಿದರು.

# ಸತ್ಸಂಗ ಕೂಡಾ ತಪಸ್ಸು ಇದ್ದಂತೆ: ಶಂಕರಾನಂದ ಶ್ರೀಗಳು



ಮಲೇಬೆನ್ನೂರು, ಆ.28- ಸತ್ಸಂಗ ಮಹತ್ತರ ಹಾಗೂ ಬಲಾಢ್ಯವಾದದ್ದು ಎಂದು ಹೋತನಹಳ್ಳಿಯ ಶ್ರೀ ಗುರು ಸಿದ್ಧಾಶ್ರಮದ ಶ್ರೀ ಶಂಕರಾನಂದ ಸ್ವಾಮೀಜಿ ಹೇಳಿದರು.

ಅವರು ಶನಿವಾರ ರಾತ್ರಿ ಯಲವಟ್ಟಿಯ ಶ್ರೀ ಗುರು ಸಿದ್ಧಾಶ್ರಮದಲ್ಲಿ ಹಮ್ಮಿಕೊಂಡಿದ್ದ ಸದ್ಗುರು ಶ್ರೀ ಸಿದ್ದಾರೂಢರ ಪುರಾಣ ಮುಕ್ತಾಯ ಹಾಗೂ ಅಮಾವಾಸ್ಯೆ ಸತ್ಸಂಗ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಒಂದು ತಾಸು ಸುಮ್ಮನೆ ಒಂದು ಕಡೆ ಕುಳಿತು ಸತ್ಸಂಗ ಕೇಳಿದರೆ ಅದೊಂದು ತಪಸ್ಸು ಇದ್ದಂತೆ. ಸಿದ್ದಾರೂಢರ ಮಠಗಳಲ್ಲಿ ಜಾತಿ, ಮತ, ಪಂಥ ಇಲ್ಲದೇ ಎಲ್ಲರನ್ನೂ ಒಂದೇ ದೃಷ್ಟಿಯಲ್ಲಿ ನೋಡಲಾಗುತ್ತದೆ. ಹಾಗಾಗಿಯೇ ಈ ಸಿದ್ಧಾಶ್ರಮ ಈ ಭಾಗದ ಎಲ್ಲಾ ಜನರ ಮುಕ್ತಿ ಧಾಮವಾಗಿ ಸತ್ಸಂಗ ನಡೆಸುತ್ತಿದ್ದು, 1962 ರಿಂದಲೂ ಇಲ್ಲಿ ಅಧ್ಯಾತ್ಮದ ಜೊತೆಗೆ ದೇವಲೋಕದ ಚಿಂತನೆ ನಡೆಯುತ್ತಾ ಇದೊಂದು ಪುಣ್ಯಕ್ಷೇತ್ರವಾಗಿ ಬೆಳೆದಿದೆ ಎಂದು ಶ್ರೀ ಶಂಕರಾನಂದ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕುಸನೂರಿನ ಶ್ರೀ ಜ್ಯೋತಿರ್ಲಿಂಗ ಸ್ವಾಮೀಜಿ ಮಾತನಾಡಿ, ಮಠ-ಮಾನ್ಯಗಳ ಸೇವೆ ಮಾಡುವುದರಿಂದ ಮತ್ತು ಸತ್ಸಂಗ ಕೇಳುವುದರಿಂದ ಅಂತಃಕರಣ ಶುದ್ದಿ ಆಗುತ್ತದೆ ಎಂದರು.

ದಾಗಿನಕಟ್ಟೆಯ ಶ್ರೀ ಸಿದ್ದಾರೂಢ ಆಶ್ರಮದ ಶ್ರೀ ಕೃಷ್ಣಾನಂದ ಭಾರತಿ ಸ್ವಾಮೀಜಿ ಮಾತನಾಡಿ, ಸಿದ್ದರೂಢರ ಪುರಾಣ ಕೇಳಲೂ ಪುಣ್ಯ ಮಾಡಿರಬೇಕೆಂದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಶ್ರೀ ಯೋಗಾನಂದ ಸ್ವಾಮೀಜಿ ಮಾತನಾಡಿ, ಶ್ರಾವಣ ಎಂದರೆ, ಶ್ರವಣ ಮಾಡುವುದು ಎಂದರ್ಥವಾಗಿದ್ದು, ಬಹಳಷ್ಟು ಹಬ್ಬ-ಆಚರಣೆಗಳು ಶ್ರಾವಣ ಮಾಸದಲ್ಲೇ ಬರುವುದರಿಂದ ಜನರಲ್ಲಿ ಭಕ್ತಿ - ಭಾವ ಹೆಚ್ಚಾಗಿರುತ್ತದೆ. ಉತ್ತರ ಕರ್ನಾಟಕದ ಪ್ರತಿ ಹಳ್ಳಿಯಲ್ಲೂ ಸಿದ್ದಾರೂಢರ ಪುರಾಣ ಹೇಳುವುದನ್ನು ಹಬ್ಬದ ರೀತಿಯಲ್ಲಿ ಆಚರಿಸುತ್ತಾರೆ. ಎಲ್ಲಾ ಸಿದ್ದರೂಢರ ಆಶ್ರಮಗಳಲ್ಲೂ ಸಿದ್ದಾರೂಢರ ಪುರಾಣ ಪರಾಯಣ ಮಾಡುವ ಮೂಲಕ ಜನರಲ್ಲಿ ಭಕ್ತಿ - ಭಾವದ ಜೊತೆಗೆ ತ್ಯಾಗವನ್ನು ಬೆಳೆಸಿಕೊಳ್ಳುವಂತೆ ಹೇಳಲಾಗುತ್ತದೆ ಎಂದರು.

ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಈ ದಿನದ ದಾಸೋಹ ದಾನಿಗಳಾಗಿದ್ದ ಹೊಳೆಸಿರಿಗೆರೆಯ ಮಾಗೋಡ ರೇವಣಸಿದ್ದಪ್ಪ ಅವರನ್ನು ಗೌರವಿಸಲಾಯಿತು.

### ಯಲವಟ್ಟಿ ಶ್ರೀ ಗುರು ಸಿದ್ಧಾಶ್ರಮದಲ್ಲಿ ಸತ್ಸಂಗ ಕಾರ್ಯಕ್ರಮ

ಮಲೇಬೆನ್ನೂರು ಪಿಎಸ್ಐ ರವಿಕುಮಾರ್, ಪ್ರೊಬೇಷನರಿ ಪಿಎಸ್ಐ ಸಾಗರ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಜಿ.ಆಂಜನೇಯ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಗ್ರಾಮದ ಹಿರಿಯರಾದ ಮುರುಗೆಪ್ಪ ಗೌಡ್ರು, ಬಸಪ್ಪ ಮೇಷ್ಟ್ರು, ಹೊಳೆಸಿರಿಗೆರೆಯ ಮಾಗೋಡ ಈಶ್ವರಪ್ಪ, ಪಿಎಸಿಎಸ್ ಸಿಇಓ ಮಲ್ಲೇಶಪ್ಪ, ಎಂ.ರವಿ, ಯಲವಟ್ಟಿಯ ಎ.ಸುರೇಶ್, ಹೊಸಮನಿ ಮಲ್ಲಪ್ಪ, ಜಿಗಳಿಯ ಬಿ. ಸೋಮಶೇಖರಚಾರಿ, ರಂಗಪ್ಪ, ಪತ್ರಕರ್ತ ಪ್ರಕಾಶ್, ಕುಂಬಳೂರಿನ ಕೆ.ಕುಬೇರಪ್ಪ, ಹೆಚ್. ಎಂ.ಸದಾಶಿವ, ಆಂಜನೇಯ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಸಿರಿಗೆರೆ ಸಿದ್ದೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪಿಎಸಿಎಸ್ ಸಿಇಓ ಶೇಖರಪ್ಪ ಸ್ವಾಗತಿಸಿ, ವಂದಿಸಿದರು.



# ಜ್ಞಾನ ವಿಕಾಸ ಕೇಂದ್ರದಲ್ಲಿ ಸಿರಿಧಾನ್ಯ ಬಳಕೆ ಮಾಹಿತಿ

ದಾವಣಗೆರೆ, ಆ.28- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಮಹಿಳಾ ಕಾರ್ಯಕ್ರಮದಡಿ ಸಿರಿಧಾನ್ಯ ಬಳಕೆ ಕುರಿತು ಮಾಹಿತಿ ಕಾರ್ಯಕ್ರಮವನ್ನು ದಾವಣಗೆರೆ ಗ್ರಾಮಾಂತರ ಯೋಜನಾ ಕಚೇರಿ ವ್ಯಾಪ್ತಿಯಲ್ಲಿನ ನಗರದ ಭರತ್ ಕಾಲೋನಿಯಲ್ಲಿನ ಸ್ಪಂದನ ಜ್ಞಾನ ವಿಕಾಸ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ವಿಜಯ್ ಕುಮಾರ್ ನಾಗನಾಳ, ಹೆಣ್ಣು ಮಕ್ಕಳನ್ನು, ಗಂಡು ಮಕ್ಕಳನ್ನು ಸಮಾನವಾಗಿ ಬೆಳೆಸಬೇಕು, ಭೇದವನ್ನು ಮಾಡಬಾರದು. ಮಕ್ಕಳಿಗೆ ಉತ್ತಮ ಸಂಸ್ಕೃತಿ ಸಂಸ್ಕಾರವನ್ನು ನೀಡುವುದು ಕುಟುಂಬದಲ್ಲಿ ಮಹಿಳೆಯ ಜವಾಬ್ದಾರಿಯಾಗಿರುತ್ತದೆ. ಆಧುನಿತೆಗೆ ಮಾರುಹೋಗದೆ ಭವಿಷ್ಯದ ಪ್ರಜೆಗಳನ್ನಾಗಿ ಮಕ್ಕಳನ್ನು ಬೆಳೆಸಬೇಕು ಎಂದರು.

ಸಿರಿಧಾನ್ಯ ಸಮನ್ವಯಾಧಿಕಾರಿ ರಾಘವೇಂದ್ರ ಮಾತನಾಡಿ, ಸಿರಿಧಾನ್ಯ ಬಳಕೆಯಿಂದ ಆರೋಗ್ಯವಂತ ಕುಟುಂಬ ನಿರ್ಮಾಣ ಮಾಡಿಕೊಳ್ಳಬೇಕಾದರೆ 9 ನವ ಧಾನ್ಯಗಳ ಬಳಕೆ ಇವತ್ತಿನ ದಿನಗಳ ಅಗತ್ಯ ಎಂದರು.

ಕಾರ್ಯಕ್ರಮದಲ್ಲಿ ನಗರ ಪಾಲಿಕೆ ಸದಸ್ಯೆ ಮೀನಾಕ್ಷಿ ಜಗದೀಶ್, ತಾಲ್ಲೂಕು ಯೋಜನಾಧಿಕಾರಿ ಯಶೋಧ, ಸಿರಿ ಮಾರುಕಟ್ಟೆ ಮೇಲ್ವಿಚಾರಕ ಸಂತೋಷ್, ವಲಯ ಮೇಲ್ವಿಚಾರಕ ನಾಗರಾಜ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಪ್ರತಿಭಾ, ಸೇವಾ ಪ್ರತಿನಿಧಿ ಮಂಜುಳ ಸೇರಿದಂತೆ, ಕೇಂದ್ರದ ಎಲ್ಲಾ ಸದಸ್ಯರು ಇದ್ದರು.

# ಸೇವಾದಳ ಭವನದಲ್ಲಿ ಡಾ.ಹರ್ಡೀಕರ್ ಪುಣ್ಯ ಸ್ಮರಣೆ



ದಾವಣಗೆರೆ, ಆ. 28- ಭಾರತ ಸೇವಾದಳ ಸ್ಥಾಪಕ, ಪದ್ಮಭೂಷಣ ಡಾ. ನಾ.ಸು. ಹರ್ಡೀಕರ್‌ರವರ 47ನೇ ಪುಣ್ಯ ಸ್ಮರಣೆ ಅಂಗವಾಗಿ ಇಂದು ಭಾರತ ಸೇವಾದಳ, ಶ್ರೀ ಶಿರಡಿ ಸಾಯಿಬಾಬಾ ಯೋಗ ಕೇಂದ್ರ ಹಾಗೂ ಅಮೃತಮಯಿ ಯೋಗ ಕೇಂದ್ರಗಳ ಸಹಯೋಗದಲ್ಲಿ ಸೇವಾದಳ ಭವನದಲ್ಲಿ ಯೋಗಾಸನ ಶಿಬಿರ ಮತ್ತು ಮಾದಕ ದ್ರವ್ಯ ನಿರ್ಮೂಲನೆ ಜಾಗೃತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಹರ್ಡೀಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮವನ್ನು ಸೇವಾದಳ ಜಿಲ್ಲಾಧ್ಯಕ್ಷ ಪ್ರೊ.ಎಚ್. ಚನ್ನಪ್ಪ ಪಲ್ಲಾಗಟ್ಟೆ ಉದ್ಘಾಟಿಸಿದರು. ಯೋಗ ಶಿಕ್ಷಕ ಕೆ. ಕರಿಬಸಪ್ಪ, ಯೋಗದ ಮಹತ್ವವನ್ನು ತಿಳಿಸಿದರು. ಮಾದಕ ದ್ರವ್ಯಗಳಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಕುರಿತು ಡಾ. ಉಷಾ ಮಾಹಿತಿ ನೀಡಿದರು. ಕೆ.ಬಿ. ಪರಮೇಶ್ವರಪ್ಪ ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಿಸಿದರು. ಡಾ. ಹರ್ಡೀಕರ್ ಜೀವನ ಚರಿತ್ರೆಯ ಕುರಿತು ಎಂ. ಅಣ್ಣಯ್ಯ ಮಾಹಿತಿ ನೀಡಿದರು. ಕೆ.ಟಿ. ಜಯಪ್ಪ ಸ್ವಾಗತಿಸಿ, ನಿರೂಪಿಸಿ, ಕೆ. ಪಿ. ಶ್ರೀಕಾಂತ್ ವಂದಿಸಿದರು.

# ಎ.ಆರ್.ಜಿ. ಕಾಲೇಜಿನಲ್ಲಿ ಸ್ವಯಂ ರಕ್ತದಾನ ಶಿಬಿರ



ದಾವಣಗೆರೆ, ಆ. 28- ನಗರದ ಬಾಪೂಜಿ ವಿದ್ಯಾ ಸಂಸ್ಥೆಯ ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಯುವ ರೆಡ್ ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆಯ ಸಹಯೋಗದಲ್ಲಿ ಸ್ವಯಂ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರಾಂಶುಪಾಲ ಪ್ರೊ. ಕೆ.ಎಸ್. ಬಸವರಾಜಪ್ಪ ಅವರು, ಪ್ರತಿಯೊಬ್ಬ ವ್ಯಕ್ತಿಯೂ ಸಹ ದಾನ ಮಾಡುವ ಪ್ರಕ್ರಿಯೆಯನ್ನು ಬೆಳೆಸಿಕೊಳ್ಳಬೇಕು. ನಾವು ಕೊಡುವ ರಕ್ತ ಮತ್ತೊಂದು ಜೀವ ಉಳಿಸಲು ಸಹಾಯವಾಗುತ್ತದೆ. ಹಾಗಾಗಿ ನಾವೆಲ್ಲರೂ ರಕ್ತದಾನ ಶಿಬಿರದಿಂದ ಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು. ರಕ್ತದಾನ ಮಾಡುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆ ಎಂದು ಹೇಳಿದರು.

89 ಬಾರಿ ರಕ್ತದಾನ ಮಾಡಿದ ಶಿವಕುಮಾರ ಅವರು ಭಾಗವಹಿಸಿದ್ದು ವಿದ್ಯಾರ್ಥಿಗಳಿಗೆ ಪ್ರೇರಕ ಶಕ್ತಿಯಾಯಿತು.

ಸಮಾರಂಭದಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಪದಾಧಿಕಾರಿಗಳಾದ ಗೌಡ್ರ ಚನ್ನಬಸಪ್ಪ ಆನಂದ ಜ್ಯೋತಿ, ಶಿವಾನಂದ, ರವಿಕುಮಾರ, ವೈದ್ಯಾಧಿಕಾರಿಯಾದ ಡಾ. ಎಸ್. ಅಪೂರ್ವ, ಯುವ ರೆಡ್‌ಕ್ರಾಸ್ ಘಟಕದ ಸಂಚಾಲಕ ಡಾ. ಜೆ.ಕೆ. ಮಲ್ಲಿಕಾರ್ಜುನಪ್ಪ, ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿಗಳಾದ ಡಾ. ಹೆಚ್. ಆರ್. ತಿಪ್ಪೇಸ್ವಾಮಿ, ವಾಣಿಜ್ಯಶಾಸ್ತ್ರ ಮುಖ್ಯಸ್ಥರಾದ ಪ್ರೊ. ಜೆ. ಅನಿತಾಕುಮಾರಿ, ಪ್ರೊ. ರಶ್ಮಿ ಪಿ. ಡಾ. ಚಮನ್‌ಸಾಬ್, ನಾಗರಾಜ, ಸೌಮ್ಯ, ಮೌಸೀನಾ ಕೌಸರ್ ಹಾಗೂ ಪದವಿ, ಸ್ನಾತಕೋತ್ತರ ವಿದ್ಯಾರ್ಥಿಗಳು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡುವ ಮೂಲಕ ಯಶಸ್ವಿಗೊಳಿಸಿದರು.

# ನೂತನ ಕರಡು: ಗ್ರಾ.ಪಂ. ಸದಸ್ಯರ ಒಕ್ಕೂಟದ ವಿರೋಧ

ದಾವಣಗೆರೆ, ಆ. 28- ರಾಜ್ಯ ಸರ್ಕಾರ ಪ್ರಕಟಿಸಿರುವ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾ.ಪಂ. ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರನ್ನು ತೆಗೆದುಹಾಕುವ ಪ್ರಕ್ರಿಯೆ) ನಿಯಮಗಳ ಕರಡು ಬದಲಾವಣೆ ಗಳನ್ನು ತೀವ್ರವಾಗಿ ವಿರೋಧಿಸುವುದಾಗಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯ್ತಿ ಸದಸ್ಯರ ಮಹಾ ಒಕ್ಕೂಟ ಹೇಳಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಜಿಲ್ಲಾಧ್ಯಕ್ಷ ವೀರೇಶ್ ಡಿ.ಆರ್., ಸಂವಿಧಾನದ ಚೌಕಟ್ಟಿನಡಿ ಆಯ್ಕೆಯಾಗಿ ರುವ ಗ್ರಾ.ಪಂ. ಸದಸ್ಯರ ಮೇಲೆ ಕ್ರಮ ಕೈಗೊಳ್ಳುವ ಈ ಕರಡು ನಿಯಮ ದುರುದ್ದೇಶದಿಂದ ಕೂಡಿದೆ ಎಂದು ಹೇಳಿದರು.

ಈ ಹಿಂದೆ ಇದ್ದಂತೆ ರಾಜ್ಯ ಚುನಾವಣಾಧಿಕಾರಿಗಳಿಗೆ ಮಾತ್ರ ಗ್ರಾ.ಪಂ. ಸದಸ್ಯರ ತನಿಖೆ ನಡೆಸುವ ಅಧಿಕಾರವಿರಬೇಕು.

ಕರಡು ನಿಯಮದಲ್ಲಿ ಪ್ರಸ್ತಾಪಿಸಿರುವ 'ದುರ್ನಡತೆ'ಗೆ ಸೂಕ್ತ ವ್ಯಾಖ್ಯಾನ ನೀಡಬೇಕು ಎಂದು ಒತ್ತಾಯಿಸಿದರು. ನೂತನ ನಿಯಮದಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು. ಕೂಡಲೇ ಈ ಕ್ರಮವನ್ನು ಸರ್ಕಾರ ಕೈ ಬಿಡಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಾರ್ಯದರ್ಶಿ ಮೌಲಾನಾಯ್ಕ ಎಸ್, ಖಜಾಂಚಿ ಪಲ್ಲವಿ ಕಿರಣ್, ಸಂಘಟನಾ ಕಾರ್ಯದರ್ಶಿ ಪ್ರವೀಣ್ ಆರ್.ಬಿ., ಉಪಾಧ್ಯಕ್ಷ ಧನ್ಯಕುಮಾರ್ ಡಿ.ಪಿ. ಉಪಸ್ಥಿತರಿದ್ದರು.

# ರಕ್ತದಾನಿಗಳು ಜೀವರಕ್ಷಕರಿದ್ದಂತೆ

## ಹರಿಹರ: ರಕ್ತಪರೀಕ್ಷೆ ಕಾರ್ಯಕ್ರಮದಲ್ಲಿ ಡಾ.ಸೈಯದ್ ನಾಸಿರುದ್ದೀನ್




ಹರಿಹರ, ಆ.28- ಜನರು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರೆ ಮಾನವೀಯ ಸಮಾಜ ಕಾಣಲು ಸಾಧ್ಯ. ರಕ್ತದಾನ ಮಹಾದಾನವಾಗಿದ್ದು, ಅವಶ್ಯಕತೆ ಇರುವವರಿಗೆ ರಕ್ತ ನೀಡುವವರು ಜೀವರಕ್ಷಕರು ಆಗಿರುತ್ತಾರೆ ಎಂದು ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಭಿವೃದ್ಧಿ ಸಮಿತಿಯ ಸದಸ್ಯ ಡಾ.ಸೈಯದ್ ನಾಸಿರುದ್ದೀನ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೆಡ್‌ಕ್ರಾಸ್ ಸಮಿತಿ ಮತ್ತು ಐಕ್ಯೂಎಸಿ ಅವರುಗಳ ವತಿಯಿಂದ ಆಯೋಜಿಸಲಾಗಿದ್ದ ರಕ್ತ ಪರೀಕ್ಷೆ, ರಕ್ತದಾನ ಮತ್ತು ಕೋವಿಡ್ ಬೂಸ್ಟರ್ ಲಸಿಕಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಪಘಾತ, ಶಸ್ತ್ರಚಿಕಿತ್ಸೆ, ರಕ್ತಹೀನತೆ, ಕ್ಯಾನ್ಸರ್, ಹೆರಿಗೆ ಮತ್ತು ಇನ್ನಿತರೆ ಸಂದರ್ಭಗಳಲ್ಲಿ ರಕ್ತದ ಅಗತ್ಯ ಸಾಕಷ್ಟು ಉದ್ಭವಿಸುತ್ತದೆ ಎಂದು ಅವರು ತಿಳಿಸಿದರು.

ರಕ್ತದಾನ ಮಾಡುವ ಜನರು ಹೃದಯಾಘಾತ ಮತ್ತು ಕ್ಯಾನ್ಸರ್ ಅಪಾಯಕ್ಕೆ ಒಳಗಾಗುವ ಸಾಧ್ಯತೆ ಕಡಿಮೆ. ರಕ್ತದಾನವು ಒತ್ತಡವನ್ನು ಕಡಿಮೆ ಮಾಡಲು, ನಕಾರಾತ್ಮಕ ಆಲೋಚನೆಗಳು ಮತ್ತು ಭಾವನೆಗಳನ್ನು ತೊಡೆದು ಹಾಕಲು ಸಹಾಯ ಮಾಡುತ್ತದೆ. ರಕ್ತದಾನವು ವ್ಯಕ್ತಿಯ ಮಾನಸಿಕ ಆ ರೋ ಗ್ಯ ವ ನ್ನು ಉತ್ತಮಗೊಳಿಸುತ್ತದೆ ಎಂದು ರಕ್ತದಾನದ ಪ್ರಯೋಜನಗಳನ್ನು ಡಾ.ಸೈಯದ್ ನಾಸಿರುದ್ದೀನ್ ವಿ ದ್ಯಾ ರ್ಥಿ ಗ ಳಿ ಗೆ ತಿಳಿಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಪ್ರೊ. ಹೆಚ್.ವಿರುಪಾಕ್ಷಪ್ಪ ಮಾತನಾಡಿ, ಇಂದಿನ ಯುವ ಪೀಳಿಗೆ ರಕ್ತದಾನ ಮತ್ತು ದೇಹದ ಅಂಗಾಂಗಗಳ ದಾನದಂತಹ ಕಾರ್ಯಗಳ ಮಹತ್ವ ಅರಿತುಕೊಳ್ಳಬೇಕು. ಆ ಮೂಲಕ ಸಾಮಾಜಿಕ ಕಳಕಳಿಯನ್ನು ಬೆಳೆಸಿಕೊಳ್ಳಬೇಕು. ವೈದ್ಯಲೋಕ ಸಾಕಷ್ಟು ಮುಂದುವರೆದಿದ್ದು, ಕೃತಕ ಅಂಗಾಂಗಗಳನ್ನು ಕಸಿ ಮಾಡಬಹುದು. ಆದರೆ, ಕೃತಕ ರಕ್ತ ಸೃಷ್ಟಿ ಇನ್ನೂ ಸಾಧ್ಯವಾಗಿಲ್ಲ. ಹೀಗಾಗಿ ರಕ್ತದಾನದ ಮೂಲಕವೇ ರಕ್ತದ ಬೇಡಿಕೆಯನ್ನು ಪೂರೈಸಲು ಸಾಧ್ಯ. ಈ ಹಿನ್ನೆಲೆಯಲ್ಲಿ ಆರೋಗ್ಯವಂತರು ರಕ್ತದಾನ ಮಾಡಿ ಮಾನವೀಯ ಗುಣ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಇಂದು ಸಮಾಜದಲ್ಲಿ ಹರಡುತ್ತಿರುವ ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಡೆಂಗ್ಯೂ ಮತ್ತು ಚಿಕನ್‌ಗುನ್ಯಾ ತಡೆಗಟ್ಟಲು ಸ್ವಚ್ಛತಾ ಕ್ರಮ ಕೈಗೊಳ್ಳುವ ಬಗ್ಗೆ ಆರೋಗ್ಯ ಇಲಾಖೆಯ ಸಿಬ್ಬಂದಿ ಉಮೇಶ್ ಅವರು (5ನೇ ಪುಟಕ್ಕೆ)

# ಪ್ರತಿಫಲಾಪೇಕ್ಷೆ ಇಲ್ಲದ ಸೇವೆ ಅಗತ್ಯ : ಶ್ರೀನಿವಾಸ್

## ಶ್ರೀ ಕೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್‌ನಿಂದ ಸಾಮೂಹಿಕ ವರಮಹಾಲಕ್ಷ್ಮಿ ಪೂಜೆ



ದಾವಣಗೆರೆ, ಆ.28- ಸ್ವಯಂ ಆಗಿ ನಾವೇನು ಸಂಪಾದಿಸಿದ್ದೇವೆ ಎಂಬುದ ಕ್ಕಿಂತ, ಸಮಾಜಕ್ಕಾಗಿ ನಾವೇನು ಕೊಡುಗೆ ನೀಡಿದ್ದೇವೆಂಬ ಉತ್ಸಾಹ, ಇಚ್ಛಾಶಕ್ತಿ ಇದ್ದರೆ ಕಾಯಿಲೆಗಳಿಂದ ದೂರವಾಗಬಹುದಲ್ಲದೇ ಸಂಕಷ್ಟಗಳನ್ನು ಎದುರಿಸಿ ಆರೋಗ್ಯಕರ ಬದುಕನ್ನು ನಮ್ಮದಾಗಿಸಿಕೊಳ್ಳಬಹುದು ಎಂದು ರಾಜ್ಯ ಸಂಪನ್ಮೂಲ ವ್ಯಕ್ತಿ ಹೆಚ್.ವಿ. ಶ್ರೀನಿವಾಸ ತಿಳಿಸಿದರು.

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನ ಸಮೀಪದಲ್ಲಿನ ನಿಮಿಷಾಂಬ ಸಭಾ ಭವನದಲ್ಲಿ ಶ್ರೀ ಕೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ಸಾಮೂಹಿಕ ವರಮಹಾಲಕ್ಷ್ಮಿ ಪೂಜಾ ಸಮಿತಿ ದಾವಣಗೆರೆ ಬಿ ವಲಯ ಹಾಗೂ ಪ್ರಗತಿ ಬಂಧು ಸ್ವ ಸಹಾಯ ಸಂಘಗಳ ಒಕ್ಕೂಟ ಮತ್ತು ಜ್ಞಾನ ವಿಕಾಸ ಕೇಂದ್ರ ದಾವಣಗೆರೆ ಬಿ ವಲಯದ ವತಿಯಿಂದ ಮೊನ್ನೆ ಹಮ್ಮಿಕೊಂಡಿದ್ದ ಸಾಮೂಹಿಕ ಶ್ರೀ ವರಮಹಾಲಕ್ಷ್ಮಿ ಪೂಜೆ ಮತ್ತು ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಅವರು ಧಾರ್ಮಿಕ ಉಪನ್ಯಾಸ ನೀಡಿದರು.

ಸಮಾಜದಿಂದ ಯಾವುದೇ ಪ್ರತಿಫಲಾಪೇಕ್ಷೆ ಬಯಸದೇ ಪ್ರಾಮಾಣಿಕವಾದ ಸೇವೆ ಸಲ್ಲಿಸಬೇಕು. ಜೊತೆಗೆ ನಮ್ಮ ಬದುಕು ಸ್ಪಷ್ಟವಾಗಿದ್ದಾಗ ಒತ್ತಡವಿಲ್ಲದೇ ಉತ್ತಮ ಬದುಕು ಕಂಡುಕೊಳ್ಳಬಹುದು. ಕಷ್ಟದ ವೇಳೆ ದುಡುಕಿದರೆ ಆತ್ಮಹತ್ಯೆ ದಾರಿ, ಆದರೆ ತಿದ್ದಿ ನಡೆದರೆ ಪರಿವರ್ತನೆ ಕಾಣಬಹುದು ಎಂದು ಹೇಳಿದರು.

ಪೂಜೆಯಿಂದ ಮಾನಸಿಕ ಸ್ವಸ್ಥತೆ ಕಾಣಬಹುದು. ವಜ್ರ, ವೈಢೂರ್ಯ, ಐಶ್ವರ್ಯವೇ ಮುತ್ತುರತ್ನ ಎಂಬುದು ಸಾಮಾನ್ಯರ ಕಲ್ಪನೆ. ಆದರೆ ಪೃಥ್ವಿಯಲ್ಲಿನ ನೀರು, ಅನ್ನ, ಶುಭಾಷಿತವೇ ನಿಜವಾದ ಮುತ್ತುರತ್ನಗಳಾಗಿವೆ ಎಂದರು.

ನಾವು ಹೇಗಿರಬೇಕೆಂಬುದನ್ನು ರಾಮಾಯಣ ಕಲಿಸಿದರೆ, ನಾವೇನು ಮಾಡಬಾರದೆಂಬುದನ್ನು ಮಹಾಭಾರತ ಕಲಿಸಲಿದ್ದು, ಜೀವನದಲ್ಲಿನ ಒಳಿತು, ಕೆಡಕುಗಳ ಅರಿತು ಹೇಗೆ ಬಾಳಬೇಕೆಂಬುದನ್ನು ಭಗವದ್ಗೀತೆ ಕಲಿಸಲಿದೆ. ಜೀವನದಲ್ಲಿ ನಾವು ಮಾಡಿದ ಉಪಕಾರವನ್ನು ಮರೆಯಬೇಕು. ಇಲ್ಲದಿದ್ದರೆ ಸೇವಾ ಮನೋಭಾವ ಕುಸಿಯಲಿದೆ. ಅಲ್ಲದೇ ಬೇರೊಬ್ಬರು ನಮಗೇನೇ ಕೆಡಕು ಮಾಡಿದರೂ ಮರೆಯಬೇಕು. ಇನ್ನು ನಾವು ಅಲ್ಪ ಜ್ಞಾನಿಗಳು ಮತ್ತಷ್ಟು ತಿಳಿದು ಕಲಿಯಬೇಕು ಹಾಗೂ ಜೀವನದಲ್ಲಿ ಯಾವುದೂ ಶಾಶ್ವತವಲ್ಲ ಎಂಬುದನ್ನು ಎಂದಿಗೂ ಮರೆಯಬಾರದು ಎಂದರು.

ಕಾರ್ಯಕ್ರಮದಲ್ಲಿ ನಗರ ಪಾಲಿಕೆ ಸದಸ್ಯ ಸೈಯದ್ ಚಾರ್ಲಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್‌ನ ಹಿರಿಯ ಜಿಲ್ಲಾ ನಿರ್ದೇಶಕ ವಿ. ವಿಜಯ ಕುಮಾರ್ ನಾಗನಾಳ, ರೇಷ್ಮಾ ಹಂಸರಾಜ್, ಮಹಿಳಾ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷೆ ರುದ್ರಮ್ಮ ಮಲ್ಲಿಕಾರ್ಜುನಪ್ಪ ಬಿರಾದಾರ್, ಪಂಚಮಸಾಲಿ ಸಮಾಜದ ಜಿಲ್ಲಾ ಉಪಾಧ್ಯಕ್ಷ ಎಂ. ದೊಡ್ಡಪ್ಪ ಸೇರಿದಂತೆ ಇತರರು ಇದ್ದರು.

# ಬನ್ನಿಕೋಡು ಜ್ಞಾನದೀಕ್ಷಾ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿ



ಹರಿಹರ, ಆ.28- ತಾಲ್ಲೂಕಿನ ಬನ್ನಿಕೋಡು ಗ್ರಾಮದ ಜ್ಞಾನದೀಕ್ಷಾ ಸೆಂಟ್ರಲ್ ಸ್ಕೂಲ್ ಆವರಣದಲ್ಲಿ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಮಕ್ಕಳಿಗೆ ಶ್ರೀ ಕೃಷ್ಣ, ರಾಧೆಯರ ವೇಷಭೂಷಣೆ ಸ್ಪರ್ಧೆ ಏರ್ಪಡಿಸಲಾಗಿತ್ತು. ಸಂಸ್ಥೆಯ ಕಾರ್ಯದರ್ಶಿ ಮಂಜುಳಾ ಅಣಬೇರು ಶಿವಮೂರ್ತಿ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯಶಿಕ್ಷಕಿ ನೇತ್ರಮ್ಮ ಕೆ.ಬಿ., ಶಿಕ್ಷಕಿಯರಾದ ನಂದಿನಿ, ದೀಪಾ ಕೆ.ಎಸ್., ಸುಷ್ಮಾ ಡಿ.ಎನ್., ರಂಜಿತಾ ಎನ್.ಬಿ. ಮತ್ತು ಶಾಲಾ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ವೃತ್ತಿಯಲ್ಲಿ ಸೇವಾ ಮನೋಭಾವ, ಬದ್ಧತೆಯಿದ್ದಾಗ ಯಶಸ್ಸು ಸಾಧ್ಯ



**ನಿವೃತ್ತ ಮುಖ್ಯ ಶಿಕ್ಷಕ ಕಮಲಾಪುರದ ಕೆ. ಕರಿಬಸಪ್ಪ ಪ್ರತಿಪಾದನೆ**

ಮಲೇಬೆನ್ನೂರು, ಆ. 28- ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾಗಿದ್ದ ಕಮಲಾಪುರದ ಕೆ. ಕರಿಬಸಪ್ಪ ಅವರು ಕಳೆದ ತಿಂಗಳು ವಯೋ ನಿವೃತ್ತಿ ಹೊಂದಿದರು.

ಗ್ರಾಮದ ಶ್ರೀ ಮಹೇಶ್ವರ ಸ್ವಾಮಿ ಸಮುದಾಯ ಭವನದಲ್ಲಿ ಶಾಲೆಯ ಎಸ್‌ಡಿಎಂಸಿ ಮತ್ತು ಶಿಕ್ಷಕರು ಹಾಗೂ ಗ್ರಾಮಸ್ಥರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಸೇರಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕರಿಬಸಪ್ಪ ಅವರನ್ನು ಸನ್ಮಾನಿಸಿ, ನಿವೃತ್ತ ಜೀವನಕ್ಕೆ ಶುಭ ಕೋರಿ ಬೀಳ್ಕೊಟ್ಟರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕುಂಬಳೂರಿನ ಬಸವ ಗುರುಕುಲದ ಶ್ರೀ ಶರಣ ಸಂಗಮ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಬಸವರಾಜ್ ಗುಂಡಣ್ಣನವರ್ ಅವರು, ಕೇವಲ ಸಂಬಳಕ್ಕಾಗಿ ಕೆಲಸ ಮಾಡದೇ, ಪ್ರಾಮಾಣಿಕ ಸೇವೆ ಸಲ್ಲಿಸಿದರೆ ಎಲ್ಲಾ ಶಿಕ್ಷಕರಿಗೂ, ನೌಕರರಿಗೂ ಇಂತಹ ಅದ್ಧೂರಿ ಹಾಗೂ ಆತ್ಮೀಯ ಬೀಳ್ಕೊಡುಗೆ ಸಿಗುತ್ತದೆ ಎಂದು ಹೇಳಿದರು.

ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಎಕ್ಕೆಗೊಂದಿ ರುದ್ರಗೌಡ, ಜಿ.ಪಿ. ಹನುಮಗೌಡ, ಹಳೇಬಿಸಲೇರಿ ಸ.ಹಿ.ಪ್ರಾ. ಶಾಲೆಯ ಮುಖ್ಯ ಶಿಕ್ಷಕ ಅಶೋಕ್ ಬಿ. ವಾಜಂತ್ರಿ, ಪತ್ರಕರ್ತ ಪ್ರಕಾಶ್ ಮಾತನಾಡಿ, ಕರಿಬಸಪ್ಪನವರ ಸೇವೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್. ಚಂದ್ರಪ್ಪ, ಅಕ್ಷರ ದಾಸೋಹದ ನಿರ್ದೇಶಕ ರಾಮಕೃಷ್ಣಪ್ಪ, ಸಿ.ಆರ್.ಪಿ. ಕೆ.ಪಿ. ನಂಜುಂಡಪ್ಪ ಅವರು ಕರಿಬಸಪ್ಪ ಅವರನ್ನು ಸನ್ಮಾನಿಸಿ, ಶುಭ ಕೋರಿದರು.

ಎಸ್‌ಡಿಎಂಸಿ ಅಧ್ಯಕ್ಷ ಎಂ.ಆರ್. ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು.


ಬೀಳ್ಕೊಡುಗೆ ಸ್ವೀಕರಿಸಿ ಮಾತನಾಡಿದ ಮುಖ್ಯ ಶಿಕ್ಷಕ ಕೆ. ಕರಿಬಸಪ್ಪ ಅವರು, ಹಿರಿಯೂರು ತಾಲ್ಲೂಕು ವೀರನಾಗ್ತಿಹಳ್ಳಿಯ ಸ.ಹಿ.ಪ್ರಾ. ಶಾಲೆಯಲ್ಲಿ ಶಿಕ್ಷಕನಾಗಿ ಸೇವೆ ಆರಂಭಿಸಿದ್ದೆ. ಅಲ್ಲಿಂದ ಹರಿಹರ ತಾಲ್ಲೂಕು ಭಾನುವಳ್ಳಿಯಲ್ಲಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಬಡ್ತಿ ಪ್ರಭಾರ ಮುಖ್ಯ ಶಿಕ್ಷಕನಾಗಿ, ಚಿಕ್ಕ ಬಿದರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ಜಿಗಳಿ ಸ.ಹಿ.ಪ್ರಾ. ಶಾಲೆಯಲ್ಲಿ ಬಡ್ತಿ ಮುಖ್ಯ ಶಿಕ್ಷಕನಾಗಿ ಸೇವೆ ಸಲ್ಲಿಸಿದ್ದೇನೆ ಎಂದು ವಿವರಿಸಿದರು. ಜಿಗಳಿ ಗ್ರಾಮಸ್ಥರ ಸಹಕಾರ ಹಾಗೂ ಈ ಪ್ರೀತಿಯನ್ನು ಎಂದಿಗೂ ಮರೆಯುವುದಿಲ್ಲ ಎಂದು ಕರಿಬಸಪ್ಪ ಭಾವುಕರಾದರು.

ಶಿಕ್ಷಕ ವೃತ್ತಿಯಾಗಲೀ ಅಥವಾ ಇತರೆ ಯಾವುದೇ ವೃತ್ತಿಯಾಗಲೀ ಸೇವಾ ಮನೋಭಾವದಿಂದ ಮತ್ತು ಬದ್ಧತೆಯಿಂದ ಮಾಡಿದಾಗ ಮಾತ್ರ ನಿಜವಾದ ಯಶಸ್ಸು ಸಿಗಲು ಸಾಧ್ಯ ಎಂದು ಕರಿಬಸಪ್ಪ ಅಭಿಪ್ರಾಯಪಟ್ಟರು.

ಗ್ರಾ.ಪಂ. ಉಪಾಧ್ಯಕ್ಷ ಡಿ.ಎಂ. ಹರೀಶ್, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಜಿ.ಆರ್. ಚಂದ್ರಪ್ಪ, ಎಸ್‌ಡಿಎಂಸಿ ಉಪಾಧ್ಯಕ್ಷೆ ಶ್ರೀಮತಿ ಸುನೀತಾ ನಾಗರಾಜ್, ಸದಸ್ಯರಾದ ವಿಜಯಭಾಸ್ಕರ್, ಗಂಗಾಧರಚಾರಿ, ಎ.ಕೆ. ಪ್ರಭಾಕರ್, ಚೌಡಪ್ಪ, ಟಿ. ನಾಗರಾಜ್, ಅಂಜಿನಪ್ಪ, ಶ್ರೀಮತಿ ಪ್ರಿಯಾ, ಶ್ರೀಮತಿ ರತ್ನ, ಶ್ರೀಮತಿ ನೂರ್ ಜಾನ್, ಎನ್.ಹೆಚ್. ಕಲ್ಲೇಶ್, ಶಿವರುದ್ರಪ್ಪ, ಶಿವಾನಂದಪ್ಪ, ಜಗದೀಶಪ್ಪ, ಗ್ರಾಮದ ಜಿ.ಆರ್. ಹಾಲೇಶ್‌ಕುಮಾರ್, ಮುದ್ದಪ್ಪ ಜಗದೀಶ್, ರಾಜಣ್ಣ ಸ್ವಾಮಿ, ಡಿ.ಪಿ. ಚಿದಾನಂದ್, ಮಲೇಬೆನ್ನೂರಿನ ಕೆ.ಪಿ. ಗಂಗಾಧರ್, ಪಿ.ಹೆಚ್. ಶಿವಕುಮಾರ್, ಪಿ.ಆರ್. ರಾಜು, ಎ.ಕೆ. ಲೋಕೇಶ್, ಶಿಕ್ಷಕ ಕರಿಬಸಪ್ಪನವರ ಪತ್ನಿ ಶ್ರೀಮತಿ ರೇಣುಕಮ್ಮ, ಶ್ರೀಮತಿ ದಾಕ್ಷಾಯಿಣಿ ಕುಮಾರ್, ಶಾಲೆಯ ಅಡುಗೆ ಸಹಾಯಕರಾದ ಅನುಸೂಯಮ್ಮ, ಗೀತಾ, ದಾಕ್ಷಾಯಿಣಿ, ನೀಲಮ್ಮ, ಶಿಕ್ಷಕರಾದ ಸಿ. ಲೋಕೇಶ್, ಜಯಶ್ರೀ, ಕುಸುಮಾ, ವೀಣಾ, ದೀಪಾ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಸಿಂಚನ, ಕವನ ಪ್ರಾರ್ಥಿಸಿದರು. ಶಿಕ್ಷಕ ಶ್ರೀನಿವಾಸ್ ರೆಡ್ಡಿ ಸ್ವಾಗತಿಸಿದರು. ಶಿಕ್ಷಕ ಕೆ.ಟಿ. ಗುಡ್ಡಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಬಿ.ಎನ್. ಲಿಂಗರಾಜ್ ನಿರೂಪಿಸಿದರೆ, ಶಿಕ್ಷಕ ಮಲ್ಲಿಕಾರ್ಜುನ್ ವಂದಿಸಿದರು.

# ಅಭಿಮಾನದ ಕಪ್ಪು ಅಕ್ಷರಗಳಲ್ಲಿ 'ಅರಳಿದ ಕೆಂಪು ಹೂ'




ತಳಮಟ್ಟದ ಹೋರಾಟ ಕಟ್ಟಿದ ಎಷ್ಟು ಜನರಿಗೆ ವಿಧಾನಸಭೆ, ಲೋಕಸಭೆಗಳಿಗೆ ಬರಲು ಸಾಧ್ಯವಾಗಿದೆ ಎಂಬ ಲೆಕ್ಕ ನೋಡಿದರೆ ಉಳ್ಳವರ ಹೂರಣ ಬಯಲಾಗುತ್ತದೆ. ಈಗ ಹೋರಾಟ ಗಳೆಂದರೆ ಉಳ್ಳವರ ನಡುವಿನ ಹೋರಾಟಗಳು ಎಂಬಂತೆ ಬಿಂಬಿಸಲಾಗುತ್ತಿದೆ. ಇಂತಹ ಕಾಲಮಾನದಲ್ಲೂ ಕೊನೆಯುಸಿರು ವವರೆಗೂ ತತ್ವ ಸಿದ್ಧಾಂತದ ಮೇಲೆ ಗಟ್ಟಿ ಧ್ವನಿಯಿಂದ ಹೋರಾಟ ಮಾಡಿದ ಕಾಂ। ಹೆಚ್.ಕೆ.ರಾಮಚಂದ್ರಪ್ಪ ಅವರು ಸಮಾಜಕ್ಕೆ ಆದರ್ಶಪ್ರಾಯ ವ್ಯಕ್ತಿ... ಹಿರಿಯ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ 'ಬೆನ್ನುಡಿ' ಯಲ್ಲಿ ವ್ಯಕ್ತಪಡಿಸಿರುವ ಅನಿಸಿಕೆಯ ತುಣುಕು ಇದು.

ಮಾಜಿ ಸಚಿವ, ಹಾಲಿ ಶಾಸಕ ಸತೀಶ್ ಜಾರಕಿಹೊಳಿಯವರ ಅಭಿಮತ ಹೀಗಿದೆ: ಎಚ್.ಕೆ.ಆರ್. ಅವರು ಮಾರ್ಕ್ಸ್‌ವಾದದ ಚಿಂತನೆಯನ್ನು ಮೈಗೂಡಿಸಿಕೊಂಡಿದ್ದ ವಿಶಿಷ್ಟ ವ್ಯಕ್ತಿತ್ವ ಉಳ್ಳವರಾಗಿದ್ದರು. ಯಾವುದೇ ಪಕ್ಷವಾಗಿದ್ದರೂ ಅದರ ಜನ ವಿರೋಧಿ ಧೋರಣೆಗಳನ್ನು ವಿರೋಧಿಸುತ್ತಿದ್ದರು. ರಾಜಕಾರಣದ ಬಗ್ಗೆ ಅಪಾರವಾದ ಪ್ರಜ್ಞೆಯುಳ್ಳವರಾಗಿದ್ದರು. ಅವರ ಹೋರಾಟಗಳು ಬರೀ ಕಾರ್ಮಿಕರ ಪರವಾಗಿಯಷ್ಟೇ ಎನ್ನುವುದು ಸರಿಯಲ್ಲ. ರೈತ ಚಳುವಳಿ, ಭಾಷಾ ಚಳುವಳಿ, ವಿದ್ಯಾರ್ಥಿ ಚಳುವಳಿ, ಮಹಿಳಾ ಪರ ಚಳುವಳಿ, ಭೂ ಹೋರಾಟ, ಪರಿಸರ ಚಳುವಳಿ, ಸಾಹಿತ್ಯ ಚಳುವಳಿ ಹೀಗೆ ಈ ನೆಲದಲ್ಲಿ ನ್ಯಾಯಕ್ಕಾಗಿ ನಡೆಯುವ ಎಲ್ಲಾ ಚಳುವಳಿಗಳಲ್ಲೂ ಅವರದೇ ಮುಖಂಡತ್ವ ಗಮನ ಸೆಳೆಯುವಂತಿರುತ್ತಿತ್ತು.

2021ರ ಮೇ ನಲ್ಲಿ ಕೊನೆಯುಸಿರೆಳೆದ ಕೆಂಪು ಶಾಲಿನ ಕರ್ಮವೀರ ಕಾಂ। ಎಚ್.ಕೆ. ರಾಮಚಂದ್ರಪ್ಪ (79) ಕುರಿತ ಸಂಸ್ಮರಣ ಗ್ರಂಥದಲ್ಲಿ ಕೆಲ ಲೇಖನಗಳ ಪ್ರಸ್ತಾವನೆಯನ್ನು ಮೇಲ್ಕಂಡ ವಿವರಗಳೊಂದಿಗೆ ಉಲ್ಲೇಖಿಸಲಾಗಿದೆ. ಯುವ ಲೇಖಕ ಎಸ್. ಗುರುಬಸವರಾಜ (ಪಾಪು ಗುರು) ಸಂಪಾದಿಸಿರುವ "ಕೆಂಪು ಕಾಂಡದ ಹೂ" ಪುಸ್ತಕದಲ್ಲಿ ಎಚ್ಕೆಆರ್‌ರ ಜೀವನ-ಸಾಧನೆ-ಚಟುವಟಿಕೆಗಳು ಈ ಕೃತಿಯ ಮೂಲಕ ಆಸಕ್ತ ಓದುಗರ ಗಮನ ಸೆಳೆಯುತ್ತವೆ. ಬರೀ ಹೋರಾಟಗಳನ್ನೇ ಮೈಗೆ ಮೆತ್ತಿಕೊಂಡವರಂತೆ ಜೀವನವನ್ನು ಸವೆಯಿಸಿ ಬಹುಮಟ್ಟಿನ ಸಾರ್ಥಕ ಬದುಕನ್ನು ಎಚ್.ಕೆ.ಆರ್. ಕಂಡಿದ್ದರು. ಆದರೆ ವಿಧಿ ಅವರನ್ನು ಕೊರೊನಾಗೆ ಬಲಿ ಕೊಟ್ಟಿದ್ದು ಮಾತ್ರ ಅಸಹನೀಯ ಸಂಗತಿ ಎನಿಸುತ್ತದೆ.

ಸಂಪಾದಕ ಪಾಪುಗುರು ಕೆಲ ತಿಂಗಳುಗಳ ಎಡೆಬಿಡದ ಪ್ರಯತ್ನದೊಂದಿಗೆ ಎಚ್.ಕೆ.ಆರ್.ಸಂಪರ್ಕಿತ ವಲಯವನ್ನು ಜಾಲಾಡಿ ಅವರವರ ಭಾವನೆಗಳನ್ನು ಅಕ್ಷರಕ್ಕಿಳಿಸುವಂತೆ ಮಾಡುವಲ್ಲಿ ಬಹುಮಟ್ಟಿನ ಸಾಫಲ್ಯವನ್ನು ಕಂಡಿದ್ದಾರೆನ್ನಬಹುದು. ಈ ಕೆಲಸ ಸುಲಭವಾಗಿ ಕೈಗೂಡುವಂತಹುದಲ್ಲ ಎಂಬುದು ವಾಸ್ತವ ಸಂಗತಿ. ಆದರೆ ಪಾಪು ಗುರು ತನ್ನೆಲ್ಲಾ ಆಸಕ್ತಿ ಮತ್ತು ಪರಿಶ್ರಮವನ್ನು ಈ ಕೃತಿ ಹೊರ ಬರಲು ಹಾಕಿದ್ದಾರೆಂಬುದಿಲ್ಲಿ ಪ್ರಸ್ತಾಪನಾರ್ಹ ಎನಿಸುತ್ತದೆ. 'ಒಡನಾಟ' ವಿಭಾಗದಲ್ಲಿ ಎಪ್ಪತ್ತೊಂಬತ್ತು ಲೇಖನಗಳಿದ್ದು, ಹಿರಿ-ಕಿರಿಯ ಪರಿಚಿತರು, ಒಡನಾಡಿಗಳು, ಗಣ್ಯರು, ಪೀಠಾಧಿಪತಿಗಳ ಅನಿಸಿಕೆಗಳು ಎಚ್.ಕೆ.ಆರ್. ವ್ಯಕ್ತಿತ್ವದ ವಿವಿಧ ಮಜಲುಗಳನ್ನು ಪರಿಚಯಿಸುತ್ತವೆ. ಇತರೆ ಪಕ್ಷಗಳ ಮುಖಂಡರು ಕೂಡ ಎಚ್.ಕೆ.ಆರ್.ಹೋರಾಟಮಯ ಜೀವನವನ್ನು ಶ್ಲಾಘಿಸಿರುವುದು ಗಮನಾರ್ಹ ವಿಷಯವೆನಿಸುತ್ತದೆ. ಬ್ಯಾಂಕ್‌ನ ನಿವೃತ್ತ ಉದ್ಯೋಗಿ ಎನ್.ಟಿ.ಎರ್ರಿಸ್ವಾಮಿಯವರ ಲೇಖನವು ಕೃತಿಯ 102 ನೇ ಪುಟದಲ್ಲಿದೆ. ಹೆಸರೇ ತಾರಕ ಮಂತ್ರ ಎಂದಿರುವ ಎರಿಸ್ವಾಮಿ. ಜನರ ಪ್ರೀತಿ, ವಿಶ್ವಾಸಗಳೇ ಎಚ್.ಕೆ.ಆರ್. ರವರಿಗೆ ಪ್ರೇರಣೆಯಾಗಿದ್ದವು. ಒಬ್ಬ ವ್ಯಕ್ತಿ ಜೀವಂತವಾಗಿರುವಾಗಲೇ ದಂತಕಥೆಯಾಗುವುದು ಅಷ್ಟು ಸುಲಭವಲ್ಲ. ಅವರು ಸ್ವಾರ್ಥಕ್ಕಿಂತ ಸಮಾಜದ ಹಿತಕ್ಕಾಗಿ ಬದುಕು ಸವೆಯಿಸಿದುದೇ ವಿಶೇಷ. ಅವರ ನೆನಪು ಜನಸಮೂಹಕ್ಕೆ ಒಂದು ತಾರಕಮಂತ್ರವಾಗಿ ಉಳಿಯುತ್ತದೆ.

ಬಹುತೇಕ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಎಚ್.ಕೆ.ಆರ್, ಹೆಸರು ಕೇಳಿದರೆ ಭಯಪಡುತ್ತಿದ್ದರು. ಕಾರಣ ಎಚ್.ಕೆ.ಆರ್. ಅಂದ್ರೆ ಉಡಾ ಇದ್ದಂತೆ. ಪಟ್ಟು ಹಿಡಿದರೆ ಆ ಕೆಲಸ ಆಗುವವರೆಗೂ ಹಿಂದೆ ಸರಿಯುತ್ತಿರಲಿಲ್ಲ. ಅನ್ಯಾಯವಾಗುತ್ತಿದೆ ಎಂಬುದು ಅವರ ಗಮನಕ್ಕೆ ಬಂದರೆ ಸಾಕು, ತಕ್ಷಣ ಹೋರಾಟದ ರಂಗಕ್ಕಿಳಿಯುತ್ತಿದ್ದರು. ಸದಾ ಒಂದಿಲ್ಲೊಂದು ಚಟುವಟಿಕೆಗಳ ಕಾರಣಕ್ಕಾಗಿ ಆಕ್ಟೀವ್ ಹೊಂಡಾ ಮೇಲೆ ಸುತ್ತುತ್ತಲೇ ಇದ್ದರು. ಇದು ಹಿರಿಯ ಪತ್ರಕರ್ತ ಟಿವಿ9 ನ ಬಸವರಾಜ್ ದೊಡ್ಮನಿ ಹಂಚಿಕೊಂಡಿರುವ ಅನುಭವದ ತಿರುಳು. (ಪು:125).

ಪುಟ 96 ರಲ್ಲಿ 'ಸಂಘಟನೆಗಳ ಸರದಾರ' ಲೇಖನಕ್ಕೆ ಹಿರಿಯ ಪತ್ರಕರ್ತ ವಿ.ಹನುಮಂತಪ್ಪ ಜೀವ ತುಂಬಿದ್ದಾರೆ. ವಿಪುಲ ಸಂಖ್ಯೆಯ ಸಂಘಟನೆಯ ರೂವಾರಿಯಾಗಿದ್ದ ಎಚ್.ಕೆ.ಆರ್.ಬಹುಮಟ್ಟಿಗೆ ಎಲ್ಲಾ ಕ್ಷೇತ್ರಗಳ ಸಂಘಟನಾ ಶಕ್ತಿಯ ಪ್ರೇರಕರಾಗಿದ್ದರು. ಅತ್ಯಂತ ಸಾಹಸಮಯಿ ಹಾಗೂ ಸಂಘಟಣೆಗಳ ಸೂತ್ರಧಾರನ ಕಣ್ಮರೆ ಒಂದರ್ಥದಲ್ಲಿ ತುಂಬಲಾಗದ ನಷ್ಟವೇ ಸರಿ. ಎಚ್.ಕೆ.ಆರ್. ಹೋರಾಟದ ಬಿರುಸನ್ನು ಮುಂದುವರೆಸಲು ಯಾರಾದರೂ ಇದ್ದಾರೆಯೇ? ಎಂಬ ಪ್ರಶ್ನೆಯೊಂದಿಗೆ ಈ ಲೇಖನ ಪೂರ್ಣಗೊಳ್ಳುತ್ತದೆ.

ಎಚ್.ಕೆ.ಆರ್, ಜಮಾನದ ಅವಧಿಯಲ್ಲೇ ರಾಜಕಾರಣದ ಪ್ರವೇಶವನ್ನು ಕಂಡ ಹಿರಿಯ ಕಾಂಗ್ರೆಸ್ ಧುರೀಣ ಎಚ್.ಆಂಜನೇಯ ಅವರ ಅನಿಸಿಕೆ ಹೀಗಿದೆ. ಎಚ್.ಕೆ.ಆರ್. ಬಹಳ ಸೆಕ್ಯೂಲರ್ ಆಗಿದ್ದರು. ಧರ್ಮಾತೀತವಾಗಿದ್ದರು. ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದ ಬಿಜೆಪಿ ವಿರುದ್ಧ ಅವರದು ಸದಾ ವಿರೋಧದ ದನಿಯಾಗಿತ್ತು. ನಾನು ಚುನಾವಣೆಗೆ ಸ್ಪರ್ಧಿಸಿದಾಗ ಎರಡು ಸಂದರ್ಭಗಳಲ್ಲಿ ನನ್ನ ಪರ ಪ್ರಚಾರ ಮಾಡಿದರು. ನಾನು ಸೋತಾಗಲೂ ಹುರುಪು ತುಂಬಿದ ಸಂದರ್ಭಗಳಿದ್ದವು. ನನ್ನ ಬಗ್ಗೆ ಅವರಿಗೆ ಅಪಾರ ಗೌರವಿದ್ದಂತೆ, ನಾನು ಕೂಡ ಅವರಿಗೆ ಅಷ್ಟೇ ಗೌರವ ಕೊಡುವುದನ್ನು ರೂಢಿಸಿಕೊಂಡಿದ್ದೆನು (ಪು.36).

ಕಿರಿಯ ಮಗ ಎಚ್.ಆರ್. ರವೀಂದ್ರನಾಥ್‌ರ ನೆನಹು ಹೀಗಿದೆ: ನಾನು ನಮ್ಮ ತಂದೆಗೆ ಕೊನೆಯ ಮಗನಾಗಿದ್ದುದರಿಂದಲೇನೋ ಅಪ್ಪನಿಗೆ ನನ್ನ ಮೇಲೆ ತುಸು ಪ್ರೀತಿ ಜಾಸ್ತಿಯಿತ್ತು. ಅಪ್ಪ ಮನೆಯಲ್ಲಿ ಮಕ್ಕಳಿಗೆ ಸಮಯ ಮೀಸಲಿಟ್ಟಿದ್ದು, ಕಡಿಮೆ ಎನಿಸುವ ಮನಸ್ಸಿಗೆ, ಅಪಾರ ಸಂಖ್ಯೆಯ ಜನರಿಗೆ ನನ್ನಪ್ಪ ದಾರಿದೀಪವಾದರಲ್ಲ ಎನ್ನುವ ಆದರ್ಶವಾದ ನನ್ನನ್ನು ಸಮಾಧಾನಿಸುತ್ತದೆ. ನನಗೆ ತಿಳಿದ ಮಟ್ಟಿಗೆ ಅಪ್ಪನ ಬಸ್ಸಿನ ಪ್ರಯಾಣವೇ ಬಹುಶಃ ಎರಡು ಲಕ್ಷ ಕಿ.ಮೀ.ಗಳಿರಬಹುದು. ಅಷ್ಟೊಂದು ಊರುಗಳನ್ನು ಸುತ್ತುತ್ತಿದ್ದ ಅಪ್ಪನಿಗೆ ದಣಿವಾಗುತ್ತಿರಲಿಲ್ಲ. ಅಪ್ಪನ ಕೊನೆಯ ಉಸಿರಿನ ತನಕವೂ ಅವರ ಜೊತೆಗಿದ್ದ ನನಗೆ ಅವರ ಕ್ರಿಯಾಶೀಲತೆ, ಸದಾ ಚಟುವಟಿಕೆ, ಪರೋಪಕಾರ ಮನೋಭಾವವನ್ನು ಅವರಷ್ಟು ತೊಡಗಿಸಿಕೊಳ್ಳುವುದು ಬಹಳ ಕಷ್ಟ.



ಪೂರಕ ಅಧ್ಯಾಯವು ಹದಿನೆಂಟು ಲೇಖನಗಳನ್ನು ಒಳಗೊಂಡಿದೆ. ಬರಗೂರು ರಾಮಚಂದ್ರಪ್ಪ, ರಹಮತ್ ತರೀಕೆರೆ, ರಂಜಾನ್ ದರ್ಗಾ, ಪುರುಷೋತ್ತಮ ಬಿಳಿಮಲೆಯಂತಹ ಅನುಭವೀ ಲೇಖಕರ ಸಾಂದರ್ಭಿಕ ಲೇಖನಗಳನ್ನು ಈ ಗ್ರಂಥಕ್ಕೆ ಬಳಸಿಕೊಳ್ಳಲಾಗಿದೆ. ಕವನ, ಕಮ್ಯೂನಿಸ್ಟ್ ವಿಚಾರಧಾರೆಯ ಲೇಖನಗಳಿಗೂ ಇಲ್ಲಿ ಅವಕಾಶ ಮಾಡಿಕೊಂಡಿರುವುದುಂಟು. ಸುಮಾರು ಮೂವತ್ತಕ್ಕೂ ಹೆಚ್ಚಿನ ಪುಟಗಳಲ್ಲಿ ರಾಮಚಂದ್ರಪ್ಪನವರ ಬದುಕು-ಕುಟುಂಬ ಹಾಗೂ ಚಟುವಟಿಕೆಗಳನ್ನು ದೃಶ್ಯ ಮಾಲಿಕೆ ಮೂಲಕ ಪರಿಚಯಿಸಲಾಗಿದೆ.

ನಗರಸಭೆಯ ಆಡಳಿತದ ಚುಕ್ಕಾಣಿ ಹಿಡಿದ ರಾಮಚಂದ್ರಪ್ಪನವರಿಗೆ ವಿಧಾನ ಸಭೆಯ ಪ್ರಾಂಗಣದಲ್ಲೂ ಶೋಷಿತರ ಪರ ದನಿ ಹೂಂಕರಿಸುವ ಮಹತ್ವಾಕಾಂಕ್ಷೆ ಇತ್ತು ಎಂಬುದು ಉತ್ಪ್ರೇಕ್ಷೆಯ ಸಂಗತಿಯೇನಲ್ಲ. ಆದರೆ ಬದುಕಿದ್ದಷ್ಟು ಕಾಲ ಇಡೀ ಪ್ರಕೃತಿಯೇ ಪರರ ಸೇವೆಯಲ್ಲಿ ತೊಡಗಿರುವಾಗ ಮಾನವರಾಗಿ, ಬೇರೆಯವರ ಒಳಿತಿಗಾಗಿ ಬದುಕ ಸವೆಸಬೇಡವೇ ಎನ್ನುವ ನಿಲುವು ಹೊಂದಿದ್ದ ಎಚ್.ಕೆ.ಆರ್. ಇಲ್ಲದ ದಾವಣಗೆರೆಯಲ್ಲಿ ಹೋರಾಟದ ಪದಕ್ಕೆ ಇನ್ನು ಮುಂದೆ ಅಷ್ಟೊಂದು ಅರ್ಥ ಸಿಗಲಾರದು ಎಂದು ಸಂಪಾದಕ ತನ್ನ ಮನದಾಳದ ಅಭೀಪ್ಸೆಯನ್ನು ವ್ಯಕ್ತಪಡಿಸಿರುವುದು ಕೂಡ ಚಿಂತನಾರ್ಹ ಸಂಗತಿ.

ಉಷಾ ಪ್ರಕಾಶನ, ದಾವಣಗೆರೆ ಇವರಿಂದ ಪ್ರಕಾಶನವಾಗಿರುವ ಈ ಪುಸ್ತಕವು 52 ವರ್ಣ ಪುಟಗಳ ಸಹಿತ 396ರ ಪುಟಗಳನ್ನು ಹೊಂದಿದ್ದು.ಆಕರ್ಷಕ ಮುದ್ರಣ ಮತ್ತು ಮುಖಪುಟದೊಂದಿಗೆ ಪ್ರಕಟಗೊಂಡಿದೆ. ಪುಸ್ತಕವು ಪಿ.ಬಿ. ರಸ್ತೆಯಲ್ಲಿರುವ ನವಕರ್ನಾಟಕ ಮಾರಾಟ ಮಳಿಗೆಯಲ್ಲಿ ದೊರೆಯುತ್ತದೆ.

**-ವಿ.ಹನುಮಂತಪ್ಪ**, ಸಂಪಾದಕರು, 'ಜಿಲ್ಲೆ ಸಮಾಚಾರ', ದಾವಣಗೆರೆ.

# ಕನ್ನಡ ಕುವರ - ಕನ್ನಡ ಕುವರಿ ಪ್ರಶಸ್ತಿ ಪ್ರದಾನ



ದಾವಣಗೆರೆ, ಆ. 28- 'ಕಲಾಕುಂಚ' ಸಾಂಸ್ಕೃತಿಕ ಸಂಸ್ಥೆ ಹಾಗೂ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಜಿಲ್ಲಾಮಟ್ಟದ 'ಕನ್ನಡ ಕುವರ, ಕನ್ನಡ ಕುವರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮಕ್ಕೆ ಜ್ಯೋತಿ ಬೆಳಗುವ ಮೂಲಕ ಚಾಲನೆ ನೀಡಿದ ಸಿದ್ಧಗಂಗಾ ವಿದ್ಯಾಸಂಸ್ಥೆ ಮುಖ್ಯಸ್ಥರಾದ ಜಸ್ಟಿನ್ ಡಿಸೋಜ ಮಾತನಾಡಿ, ಸರ್ಕಾರ ಮಾಡಬಹುದಾದ ಕೆಲಸವನ್ನು ಕಳೆದ 32 ವರ್ಷಗಳಿಂದ ಕಲಾಕುಂಚ ಸಂಸ್ಥೆ ಮಾಡುತ್ತಿದೆ. ಜಿಲ್ಲೆಗೆ ಸೀಮಿತವಾಗಿದ್ದ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ರಾಜ್ಯಮಟ್ಟಕ್ಕೂ ವಿಸ್ತರಿಸಿರುವುದು ಶ್ಲಾಘನೀಯ ಎಂದು ಹೇಳಿದರು.

ಕನ್ನಡ ಕುವರ-ಕುವರಿ ಪ್ರಶಸ್ತಿ ಪ್ರದಾನ ಸಮಾರಂಭ ಎಲ್ಲರಿಗೂ ಮಾದರಿಯಾಗಿದೆ. ಇದೂವರೆಗೂ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಲಾಗಿದೆ. ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿಯನ್ನು ಬಿಂಬಿಸುವ ಅನೇಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಾ ಬಂದಿರುವ ಕಲಾಕುಂಚ ಸಂಸ್ಥೆ ಕಾರ್ಯ ಅವಿಸ್ಮರಣೀಯ ಎಂದರು.

ಕಲಾಕುಂಚ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಸಾಲಿಗ್ರಾಮ ಗಣೇಶಶೆಣೈ, ಅಧ್ಯಕ್ಷ ಕೆ.ಹೆಚ್. ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಜಿ.ಬಿ. ಲೋಕೇಶ್, ಮಹಿಳಾ ಘಟಕದ ಅಧ್ಯಕ್ಷೆ ಹೇಮಾ ಶಾಂತಪ್ಪ ಪೂಜಾರಿ, ಜ್ಯೋತಿ ಗಣೇಶ ಶೆಣೈ, ನಲ್ಲೂರು ಲಕ್ಷ್ಮಣರಾವ್, ಸಂತೋಷ್ ಕುಮಾರ್ ಬೇಳೂರು, ವಾಸಂತಿ ಮಂಜುನಾಥ್ ಮತ್ತಿತರರು ಭಾಗವಹಿಸಿದ್ದರು.

ಲಲಿತಾ ಕಲ್ಲೇಶ್ ಪ್ರಾರ್ಥಿಸಿದರು. ಕುಸುಮಾ ಲೋಕೇಶ್ ಸ್ವಾಗತಿಸಿದರು.

ಇದೇ ವೇಳೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯಲ್ಲಿ 125 ಕ್ಕೆ 120 ರಿಂದ 125 ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

# ಜಗಳೂರು : ಕಟ್ಟಿಗೆಹಳ್ಳಿ ಗ್ರಾಮದಲ್ಲಿ ಮನೆ ಬೀಗ ಮುರಿದು ಕಳ್ಳತನ

ಜಗಳೂರು, ಆ.28- ತಾಲ್ಲೂಕಿನ ಕಟ್ಟಿಗೆಹಳ್ಳಿ ಗ್ರಾಮದಲ್ಲಿ ಕೆ.ಎಚ್. ಚಂದ್ರಶೇಖರಪ್ಪ ಎಂಬುವರ ಮನೆಯಲ್ಲಿ ಕಳೆದ ಎರಡು ದಿನಗಳ ಹಿಂದೆ ಕಳ್ಳರು ಮನೆಯ ಬಾಗಿಲು ಮುರಿದು ಕಳ್ಳತನ ಮಾಡಿದ್ದು ಶನಿವಾರ ಪ್ರಕರಣ ಬೆಳಕಿಗೆ ಬಂದಿದೆ.

ಬೆಂಗಳೂರಿನ ಮಲ್ಲತ್ತಹಳ್ಳಿಯಲ್ಲಿ ನೆಲೆಸಿರುವ ಸಿವಿಲ್ ಕಂಟ್ರಾಕ್ಟರ್ ಕೆ.ಎಚ್. ಚಂದ್ರಶೇಖರಪ್ಪ ಕಟ್ಟಿಗೆಹಳ್ಳಿ ಗ್ರಾಮದಲ್ಲಿ ವಾಸಕ್ಕೆಂದು ಕಳೆದ ವರ್ಷವಷ್ಟೇ ಬೃಹತ್ ಮನೆ ನಿರ್ಮಿಸಿದ್ದರು. ಆಗಾಗ್ಗೆ ಬೆಂಗಳೂರಿನಿಂದ ಹಳ್ಳಿಯಲ್ಲಿರುವ ತಮ್ಮ ಮನೆಗೆ ಬಂದು ಹೋಗುತ್ತಿದ್ದರು.

ಭಾನುವಾರ ಗ್ರಾಮಕ್ಕೆ ಬರುತ್ತೇನೆ. ಮನೆ ಸ್ವಚ್ಛಗೊಳಿಸಿ ಎಂದು ಸಂಬಂಧಿಕರಿಗೆ ಕರೆ ಮಾಡಿದ್ದಾರೆ. ಭಾನುವಾರ ಬೆಳಿಗ್ಗೆ ಸ್ವಚ್ಛಗೊಳಿಸಲು ಮನೆ ಕೆಲಸದ ಮಹಿಳೆ ಬಂದು ನೋಡಿದಾಗ ಮನೆಯ ಬಾಗಿಲು ತೆರೆದಿತ್ತು. ತಕ್ಷಣ ಮಾಲೀಕರಾದ ಚಂದ್ರಶೇಖರಪ್ಪ ಅವರಿಗೆ ಕರೆ ಮಾಡಿ ಕಳ್ಳತನದ ಬಗ್ಗೆ ಮಾಹಿತಿ ನೀಡಿದ್ದಾರೆ. ಮನೆಯಲ್ಲಿದ್ದ ಬೆಳ್ಳಿಯ ಬಸವಣ್ಣನ ವಿಗ್ರಹಗಳು ಸೇರಿದಂತೆ ಅಂದಾಜು ಎರಡು ಕೆಜಿ ತೂಕದ ಎರಡು ಲಕ್ಷ ರೂ. ಮೌಲ್ಯದ ವಸ್ತುಗಳು, ರೇಷ್ಮೆ ಸೀರೆಗಳು, ಬೆಲೆ ಬಾಳುವ ವಸ್ತುಗಳನ್ನು ಖದೀಮರು ಕಳ್ಳತನ ಮಾಡಿ ಪರಾರಿಯಾಗಿದ್ದಾರೆ.

ಈ ಸಂಬಂಧ ಜಗಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪಿಎಸ್‌ಐ ಮಹೇಶ್ ಹೊಸಪೇಟೆ ಸೇರಿದಂತೆ, ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ತನಿಖೆ ಆರಂಭಿಸಿದ್ದಾರೆ.

# ಮಲೇಬೆನ್ನೂರು : ಮನೆಗಳಿಗೆ ನುಗ್ಗಿದ ಮಳೆ ನೀರು



ಮಲೇಬೆನ್ನೂರು, ಆ. 28 - ಶನಿವಾರ ಸಂಜೆ ಸುರಿದ ಭಾರೀ ಮಳೆಯಿಂದಾಗಿ ಮಲೇಬೆನ್ನೂರು ಸಮೀಪದ ಯಲವಟ್ಟಿ ಗ್ರಾಮದಲ್ಲಿ ಹತ್ತಾರು ಮನೆಗಳಿಗೆ ನೀರು ನುಗ್ಗಿದ ಪರಿಣಾಮ ಜನಜೀವನ ಅಸ್ತವ್ಯಸ್ತವಾಗಿದೆ.


**ಮನೆ ಬಾಡಿಗೆಗೆ ದೊರೆಯುತ್ತವೆ**
ಗ್ರೌಂಡ್ ಫ್ಲೋರ್ 3 ಬೆಡ್ ರೂಂ ಮನೆ, 2 ಬೆಡ್ ರೂಂ ಮನೆಗಳು ಆಂಜನೇಯ ಬಡಾವಣೆಯಲ್ಲಿ, ಸಿದ್ದವೀರಪ್ಪ ಬಡಾವಣೆಯಲ್ಲಿ
**ದಕ್ಷಿತ್ ಐನಳ್ಳಿ ಏಜೆಂಟ್**
**77955 06795**

**ಬಾಡಿಗೆ ಬರುವಂತ ಮನೆಗಳು ದೊರೆಯುತ್ತವೆ**
30x35 East ಮೂರು ಫ್ಲೋರ್ ಮನೆ, ನಿಜಲಿಂಗಪ್ಪ ಬಡಾವಣೆಯಲ್ಲಿ 30x50 West ಹೊಸ ಮನೆ ವಿವೇಕಾನಂದ ಬಡಾವಣೆಯಲ್ಲಿ
**ಐನಳ್ಳಿ ಚನ್ನಬಸಪ್ಪ ಏಜೆಂಟ್**
**99166 12110**

**ಸೈಟ್ ಮಾರಾಟಕ್ಕಿದೆ**
30x40 ಪೂರ್ವ Good Location, M.N.K ಮಹಾಲಕ್ಷ್ಮಿ ಬಡಾವಣೆ ಉತ್ತಮ್ ಬಡಾವಣೆ ಪಕ್ಕ ಆವರಗೆರೆ ದಾವಣಗೆರೆ
**98452 95326**

**WANTED**
1. Recepionist
2. Staff Nurses
3. Lab Technician
**SHILPA DIAGNOSTICS**
MCC B Block Near Swimming Pool, Davangere.
**98440 65638**

**ಮನೆ ಲೀಜ್‌ಗೆ ಇದೆ**
ಕುಂದುವಾಡ ರೋಡ್ ಜೈನ್ ಲೇಔಟ್, 2ನೇ ಮೇನ್, 2ನೇ ಕ್ರಾಸ್, DR/1885/81 ರಲ್ಲಿ ಬರುವ ಪೂರ್ವ ಪೇಸ್, 3ನೇ ಫ್ಲೋರ್‌ನಲ್ಲಿ ಸಿಂಗಲ್ ಬೆಡ್ ರೂಂ ಮನೆ ಲೀಜ್‌ಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
**97392 04631, 88673 58631**

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
**ಹುಲ್ಲುಮನೆ ಪ್ರಾಪರ್ಟೀಸ್**
**ಫೋ.: 95135 03000**

**ಬಾಡಿಗೆಗೆ / ಲೀಸ್‌ಗೆ**
ದಾವಣಗೆರೆಯ ವಿದ್ಯಾನಗರದಲ್ಲಿ ದೇವಸ್ಥಾನ, ಪಾರ್ಕ್ ಹಾಗು ಬಸ್ ಸ್ಟಾಪ್‌ಗೆ ಹತ್ತಿರ ಮನೆಗಳು ಬಾಡಿಗೆಗೆ ಅಥವಾ ಲೀಸ್‌ಗೆ ಇವೆ.
**96322 74557**

**Required**
Sales Executives to sell pharmaceutical products only on profit sharing basis. Interested 2nd PU Science passed candidates may contact :
**99642 79238**
Please call to this number only between 11.30 Am to 5.30 Pm.

**ಕಮರ್ಷಿಯಲ್ ಸೈಟು ಮಾರಾಟಕ್ಕಿದೆ**
ದಾವಣಗೆರೆಯ ಬನಶಂಕರಿ ಬಡಾವಣೆಯಲ್ಲಿ ಸಣ್ಣ ಅಳತೆಯ ಕಮರ್ಷಿಯಲ್ ಕಾರ್ನರ್ ಸೈಟ್ (ಒಟ್ಟು 1278 ಅಡಿಗಳು) ಮಾರಾಟಕ್ಕಿದೆ. ಸಂಪರ್ಕಿಸಿ
**Mohan Real Estate Agencies.**
**Mob : 9742434049**

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
**ಕೆಲಸ / JOB**
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
**91084 18233, 97432 17566**

**ಸೈಟ್‌ಗಳು ಮಾರಾಟಕ್ಕಿವೆ**
30x50 East, 30x50 West 40 ಅಡಿ ರೋಡಿಗೆ, 30x40 West, 30x40 ಅಕ್ಕ ಪಕ್ಕ, M.B City ಯಲ್ಲಿ ಶನೇಶ್ವರ್ ದೇವಸ್ಥಾನ ಹಿಂಭಾಗದಲ್ಲಿ. Rate - 1750/-
**ಐನಳ್ಳಿ ಚನ್ನಬಸಪ್ಪ ಏಜೆಂಟ್**
**99166 12110**

**ಬಾಡಿಗೆಗೆ ಇದೆ**
1. 2BHK ಗ್ರೌಂಡ್ ಫ್ಲೋರ್ ಮನೆ ಈಶ್ವರ್-ಗಣಪತಿ ದೇವಸ್ಥಾನದ ಹಿಂದೆ ವಿದ್ಯಾನಗರ.
2. 30x50 ಗ್ರೌಂಡ್ ಫ್ಲೋರ್ ಕಮರ್ಷಿಯಲ್ ಹಾಲ್, ಕಾಫೀ ಡೇ ಪಕ್ಕ ವಿದ್ಯಾನಗರ.
**99725 77991**

**ಗೌರಿ ಗಣೇಶ ಹಬ್ಬದ ಕೊಡುಗೆ**
FULLY AUTO MATIC ಗ್ಯಾಸ್ ಗೀಸರ್ ಎಕ್ಸ್‌ಚೇಂಜ್ ಆಫರ್ : 1000 /- OFF
ಸೇಲ್ಸ್, ಸರ್ವೀಸ್‌ಗಾಗಿ ಸಂಪರ್ಕಿಸಿ
**ಮರುತ್ ಎಂಟರ್‌ಪ್ರೈಸಸ್**
ವೈ.ಎಂ.ಸಿ ಕಾಂಪ್ಲೆಕ್ಸ್, ಹದಡಿ ರಸ್ತೆ ಸ್ಟೇಡಿಯಂ ಎದುರು, ದಾವಣಗೆರೆ.
**98868 96574, 98458 67574**

**ಮನೆ ಬಾಡಿಗೆ ಇದೆ**
ವಿನೋಬನಗರ 1ನೇ ಮೇನ್, 15ನೇ ಅಡ್ಡ ರಸ್ತೆಯಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 2 ಬೆಡ್ ರೂಂ ಮನೆ ಬಾಡಿಗೆ ಇದೆ. ಬೋರ್, ಮುನಿಸಿಪಲ್ ನೀರಿನ ವ್ಯವಸ್ಥೆ ಇದೆ ಸಂಪರ್ಕಿಸಿ:
**95382 89617, 83293 91817**

**ಮನೆ ಬಾಡಿಗೆಗೆ**
ವಾಸ್ತು ಪ್ರಕಾರದ, ಪೂರ್ವ ಮುಖದ, ಹೌಸಿಂಗ್ ಬೋರ್ಡ್ ಕಾಲೋನಿ, ಮೆಡಿಕಲ್ ಹಾಸ್ಟೆಲ್ ಪಕ್ಕ, Extended MCC 'B' Block, ಕಾರ್ಪೊರೇಷನ್ ನೀರು, ಬೋರ್, ಕಾರ್ ಪಾರ್ಕಿಂಗ್, ಸ್ವತಂತ್ರವಾದ 3 BHK ಮನೆ (ಸಸ್ಯಹಾರಿಗಳಿಗೆ ಮಾತ್ರ)
**63015 58346**

**E-BIKE 0% INTEREST EMI**
ಎಲೆಕ್ಟ್ರಿಕ್ ಬೈಕ್ ಕೇವಲ 10 ರೂ ನಲ್ಲಿ 100 KM ಓಡಿಸಿ.
**ಮರುತ್ ಎಂಟರ್‌ಪ್ರೈಸಸ್**
ವೈ.ಎಂ.ಸಿ ಕಾಂಪ್ಲೆಕ್ಸ್, ಹದಡಿ ರಸ್ತೆ ಸ್ಟೇಡಿಯಂ ಎದುರು ದಾವಣಗೆರೆ.
**98868 96574 (T&C)**

**ಗ್ರೌಂಡ್ ಫ್ಲೋರ್ ಮನೆ ಲೀಸ್‌ಗೆ**
ಶಕ್ತಿನಗರದಲ್ಲಿ ಗ್ರೌಂಡ್ ಫ್ಲೋರ್ ನಲ್ಲಿ 2 ಬೆಡ್ ರೂಮ್ ನ 2 ಮನೆಗಳು ಲೀಸ್ ಗೆ ಇವೆ. ಸಂಪರ್ಕಿಸಿ
**90711 06106**
**90607 77686**

**ಸೈಟ್‌ಗಳು ಮಾರಾಟಕ್ಕಿವೆ**
ಎಸ್.ಎಸ್ ಲೇಔಟ್ 40x60, 30x50 ಎಮ್‌ಸಿಸಿ 'ಬಿ' ಬ್ಲಾಕ್ 40x60, ಶಿವ-ಪಾರ್ವತಿ 30x40, 30x40
**ರಿಯಲ್ ಎಸ್ಟೇಟ್ ಏಜೆಂಟ್ ಪ್ರಶಾಂತ್**
**99726 70257**

**Commercial Site for Sale**
B. I. E. T. Road, Corner Site, opposite Hemavathi Hostel, total measurement **3200/sq. Feets.**
contact no.
**97424 34049**

**ಬೇಕಾಗಿದ್ದಾರೆ**
HPCL ಕಂಪನಿ ವತಿಯಿಂದ ಪೆಟ್ರೋಲ್ ಬಂಕ್‌ಗಳಲ್ಲಿ ಕೆಲಸ ಮಾಡಲು ಬೈಕ್ ಮೆಕ್ಯಾನಿಕ್ ಬೇಕಾಗಿದ್ದಾರೆ. ಸಂಬಳ 10,000 ರೂ. ಸಂಪರ್ಕಿಸಿ :
**81235 06863, 74831 76531**

**ಮನೆ ಬಾಡಿಗೆ/ಭೋಗ್ಯಕ್ಕೆ ಇದೆ**
ಎರಡು ಬೆಡ್ ರೂಂ ಹೊಂದಿರುವ ಮೊದಲ ಮಹಡಿಯ ಮನೆ ಬಾಡಿಗೆ/ ಭೋಗ್ಯಕ್ಕೆ ಇರುತ್ತದೆ. (ಸಸ್ಯಹಾರಿಗಳಿಗೆ ಮಾತ್ರ)ಪೂಜಾ ಇಂಟರ್‌ನ್ಯಾಷನಲ್ ಹೋಟೆಲ್ ಹಿಂಭಾಗ ವಿಳಾಸ: ಮನೆ ನಂ.164, 10ನೇ ತಿರುವು ಎ ಬ್ಲಾಕ್, ದೇವರಾಜ ಅರಸ್ ಬಡಾವಣೆ, ದಾವಣಗೆರೆ.
**90351 09371**

**2 BHK HOUSE FOR RENT**
Shakunthala Grand Appartment MCC B Block, Near Water Tank, Davangere
**98440 64565**

**ಮನೆಗಳು ಬಾಡಿಗೆಗೆ ದೊರೆಯುತ್ತವೆ**
1BHK ಮನೆಗಳು ಬಾಡಿಗೆಗೆ ದೊರೆಯುತ್ತವೆ. #1674/A1, 4th ಕ್ರಾಸ್, ಶ್ರೀನಿವಾಸ ನಗರ ದಾವಣಗೆರೆ
**97425 52737**

**ಮನೆ ಬಾಡಿಗೆಗೆ ಇದೆ**
#641/15, ಉತ್ತಮ ಲೇಔಟ್, ಆವರಗೆರೆ, ದಾವಣಗೆರೆ ಮೊದಲನೇ ಮಹಡಿ ಹಾಗೂ ಎರಡನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಎಲ್ಲಾ ಸೌಕರ್ಯವಿದೆ.
**99644 90568, 70196 32334**

**ಬೇಕಾಗಿದ್ದಾರೆ**
ಸನ್ನಿಧಿ ಟ್ರೇಡಿಂಗ್ ಕೋ ಚಿತ್ರದುರ್ಗ ಮತ್ತು ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ.
* ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್ ಮ್ಯಾನೇಜರ್ಸ್
* ಡಾಟಾ ಎಂಟ್ರಿ ಎಕ್ಸಿಕ್ಯೂಟಿವ್ಸ್
* ಟೆಲಿಕಾಲಿಂಗ್ ಎಕ್ಸಿಕ್ಯೂಟಿವ್ಸ್.
**76767 62286, 76767 62216**

**ಜಮೀನು ಮಾರಾಟಕ್ಕೆ ಬೇಕಾಗಿದೆ**
ದಾವಣಗೆರೆಯಿಂದ ಕೊಂಡಜ್ಜಿ-ಕಕ್ಕರಗೊಳ್ಳ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ 4 ರಿಂದ 6 ಎಕರೆ ಜಮೀನು ಬೇಕಾಗಿದೆ. ಸಂಪರ್ಕಿಸಿ :
**91085 21680**
**87226 06008**

**ಬೋರ್‌ವೆಲ್ ಮಷಿನ್ ಮಾರಾಟಕ್ಕೆ ಇದೆ**
ಶಾಮನೂರು ದೇವರ ಬೆಳಕೆರೆ ರಸ್ತೆ 5ಹೆಚ್.ಪಿ 10 ಸ್ಟೇಜ್, 5 ಹೆಚ್.ಪಿ 5 ಸ್ಟೇಜ್, 2" ಜಿ.ಐ ಪೈಪು 195 ಅಡಿ, L&T ಸ್ಟಾರ್ಟರ್. 40 ಸಾವಿರ ರೇಟ್‌ನಲ್ಲಿ ಮಾರಾಟಕ್ಕಿದೆ.
**94828 18253**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**LADIES PG BUILDING FOR RENT**
ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
S.N. Layout Davangere.
**Mobi.: 95351 14063**
**96203 71544 97428 35642**

**ಸೈಟು ಮಾರಾಟಕ್ಕಿದೆ**
ಸುಬ್ರಮಣ್ಯ ನಗರ ಹೈಟೆಕ್ ಆಸ್ಪತ್ರೆ ಹತ್ತಿರ, ಪುನೀತ್ ಬಡಾವಣೆ ಪಶ್ಚಿಮ ಮುಖದ ಅಪ್ರೂವ್ಡ್ ಎರಡು ಸೈಟ್‌ಗಳು ಮಾರಾಟಕ್ಕಿವೆ.
**98443 04848**

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶಾಪ್‌ನಲ್ಲಿ ಅನುಭವವಿರುವ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
**ವೀರ್ ಕ್ರಿಯೇಷನ್ಸ್**
ವಿಜಯಲಕ್ಷ್ಮೀ ರೋಡ್, ಗುಪ್ತ ಗೋಲ್ಡ್‌ಪ್ಯಾಲೇಸ್ ಎದುರು, ದಾವಣಗೆರೆ.
**98447 36261, 96630 08996**

**ಬೇಕಾಗಿದ್ದಾರೆ**
ಕಂಪ್ಯೂಟರ್ ಆಪರೇಟರ್ ಲೇಡಿಸ್ ಬೇಕಾಗಿದ್ದಾರೆ
**94838 62779**

**ಸೈಟ್‌ಗಳು ಮಾರಾಟಕ್ಕಿವೆ**
ಜಯನಗರ 'ಬಿ' ಬ್ಲಾಕ್‌ನಲ್ಲಿ ಸೈಟ್ ಮಾರಾಟಕ್ಕಿದೆ. ನೂತನ್ ಕಾಲೇಜ್ ಹಿಂಭಾಗ ಮತ್ತು ಆಂಜನೇಯ ಬಡಾವಣೆಯಲ್ಲಿ ಸೈಟ್ ಮಾರಾಟಕ್ಕಿದೆ. ಮನೆ, ಸೈಟ್ ಹಾಗೂ ಜಮೀನು ಖರೀದಿಗಾಗಿ ಮತ್ತು ಮಾರಾಟಕ್ಕಾಗಿ ಸಂಪರ್ಕಿಸಿ:
**88675 15890, 72592 22590**

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್ ನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಕಂಪ್ಯೂಟರ್ ಜ್ಞಾನ ಉಳ್ಳವರಾಗಿರಬೇಕು. ಇಂಗ್ಲೀಷ್ ಓದಲು, ಬರೆಯಲು ಬರಬೇಕು. ಈ ಫೋನ್ ನಂಬರಿಗೆ ಸಂಪರ್ಕಿಸಿ
**98800 42597, 89711 19130**

**ಹೊಸ ಮನೆ & ಪ್ಲಾಟ್ ಬಾಡಿಗೆಗೆ ಇದೆ**
2 BHK (1st Floor) ಪೂರ್ವ, ಆಂಜನೇಯ ಬಡಾವಣೆಯಲ್ಲಿ ಬಾಡಿಗೆಗೆ ಇದೆ. (Veg Only). 2 BHK ಪ್ಲಾಟ್ MCC 'B' ಬ್ಲಾಕ್‌ನಲ್ಲಿ ಬಾಡಿಗೆಗೆ ಇದೆ. ಸಂಪರ್ಕಿಸಿ:
Agent
**95385 65909**

**ADMISSION OPEN 2022**
**MBBS**
India & Abroad - NEET Required
MCC Screening test must be practice in India
**Pharma. D, BSc. Nursing P.B. BSc (N) D. Pharma BPT, B.Pharm**
B.Sc., MLT, Cardiac, Perfusion, Agri, Radiology
Conditions Apply
**99160 67627, 80501 08120**

**KSS SOLUTION CSC**
Computer Operator Bekagidare. 4 to 6 thousand Salary. 20-25 years. Female Candidate Bekagidare.
**72045 42910**
10 am to 6 pm time, SS Layout 'B' Block, Davangere.

**ಮಾಂತ್ರಿಕ ಮೋಡಿ ಬೆಟ್ಟಪ್ಪ**
**ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
**89716 99826**

**ಪ್ರವೇಶ ಪ್ರಕಟಣೆ**
**ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ**
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
**ಮಾನಸ ಕಮ್ಯೂನಿಟಿ ಕಾಲೇಜ್ (ರಿ)**
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
**97402 58276**

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
**80955 09025**
ಕೆಲಸ 100% ಗ್ಯಾರಂಟಿ.

**Wanted**
1.Delivery Boy 2 post
2.Accounts with Computer Knowledge (Ladies Preferred) 1 post
**AK TRADERS**
Ashirwad
Bapuji Hospital Road, PJ Extension Davangere 577004




## ಭಾರೀ ಮಳೆ : ಮನೆ ಕುಸಿತ, ಗದ್ದೆ ಜಲಾವೃತ

ಮಲೇಬೆನ್ನೂರು, ಆ.28- ಶನಿವಾರ ರಾತ್ರಿ ಸುರಿದ ಭಾರೀ ಮಳೆಯಿಂದಾಗಿ ಯಲವಟ್ಟಿಯಲ್ಲಿ ಮನೆಗಳಿಗೆ ನೀರು ನುಗ್ಗಿದ್ದರೆ, ಹಾಲಿವಾಣದಲ್ಲಿ ರೂಪಾ - ಸುರೇಶ್ ಮತ್ತು ಎಸ್.ಜಿ.ಕಾವ್ಯ ಅವರ ಮನೆಗಳು ಕುಸಿದು ಬಿದ್ದಿವೆ.

ಲಕ್ಕಶೆಟ್ಟಿಹಳ್ಳಿಯಲ್ಲಿ ನೂರಾರು ಎಕರೆ ಭತ್ತ ನಾಟಿ ಮಾಡಿದ ಗದ್ದೆ ಜಲಾವೃತಗೊಂಡಿವೆ ಎಂದು ಕಂದಾಯ ನಿರೀಕ್ಷಕ ಆನಂದ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ನುಡಿ ಸ್ವರಾಜ್ಯ-75 ಕಾರ್ಯಕ್ರಮ

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಜಿಲ್ಲಾ ಸಮಿತಿಯಿಂದ ನುಡಿ ಸ್ವರಾಜ್ಯ-75 ಕಾರ್ಯಕ್ರಮವನ್ನು ಇಂದು ಸಂಜೆ 5.30ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಸಂಸ್ಮರಣೆ, ಗೌರವ ಸಮರ್ಪಣೆ ಹಾಗೂ ಪುಸ್ತಕಗಳ ಲೋಕಾರ್ಪಣೆ ನಡೆಯಲಿದ್ದು, 'ಸ್ವಾತಂತ್ರ್ಯಾಗ್ನಿ ಹವಿಸ್ಸು ಶ್ರೀ ಮೆಣಸಿನಹಾಳ ತಿಮ್ಮನಗೌಡ' ಅವರ ಕುರಿತು ಶಿಕ್ಷಕ, ಲೇಖಕ ಪಂಚಾಕ್ಷರಯ್ಯ ವಿಷಯ ಮಂಡನೆ ಮಾಡಲಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಾದ ಹದಡಿ ನಿಂಗಪ್ಪ ಮತ್ತು ತಿಪ್ಪೇಸ್ವಾಮಿ ಅವರ ಕುರಿತು ಕವಯತ್ರಿ ವೀಣಾ ಕೃಷ್ಣಮೂರ್ತಿ ಪ್ರಬಂಧ ಮಂಡಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ವಹಿಸಿಕೊಳ್ಳುವರು.

# ಮಕ್ಕಳ ಭವಿಷ್ಯದ ಜತೆಗೆ ಶರಣರ ವ್ಯಕ್ತಿತ್ವ ಕೂಡ ಅಷ್ಟೇ ಮುಖ್ಯ

**ಮುರುಘಾ ಶರಣರ ಮೇಲಿನ ಆರೋಪದ ಬಗ್ಗೆ ಜಾಗತಿಕ ಲಿಂಗಾಯತ ಹೋರಾಟದ ಮುಖಂಡರಾದ ಶಿವಾನಂದ ಜಾಮದಾರ, ಮಹಾಂತೇಶ್ ಅಗಡಿ**

ಚಿತ್ರದುರ್ಗ, ಆ.28-ಚಿತ್ರದುರ್ಗದ ಮುರುಘಾ ಶ್ರೀಗಳ ಮೇಲೆ ಕೇಳಿ ಬಂದಿರುವ ಆರೋಪದ ಬಗ್ಗೆ ಸರ್ಕಾರ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ರಾಜ್ಯದ ಲಿಂಗಾಯತ ಸಮುದಾಯದ ಮುಖಂಡರು ಒತ್ತಾಯಿಸಿದ್ದಾರೆ.

ಈ ದಿನ.ಕಾಮ್ ಜತೆಗೆ ನಿವೃತ್ತ ಐಎಎಸ್ ಅಧಿಕಾರಿ, ಜಾಗತಿಕ ಲಿಂಗಾಯತ ಹೋರಾಟದ ಮುಖಂಡ ಶಿವಾನಂದ ಜಾಮದಾರ ಮಾತನಾಡಿ, ಮಕ್ಕಳ ಕಲ್ಯಾಣ ಸಮಿತಿ ಆದೇಶದ ಮೇರೆಗೆ ಪೊಲೀಸರು ಎಫ್ಐಆರ್ ದಾಖಲಿಸಿದ್ದಾರೆ. ಎಫ್ಐಆರ್ ದಾಖಲಾಗಿರುವುದು ಕ್ರಿಮಿನಲ್ ಪ್ರಕರಣದ ಆಧಾರದಲ್ಲಿ, ಅದರಲ್ಲೂ 'ಪೋಕ್ಸೋ' ಪ್ರಕರಣ ಗಂಭೀರವಾದದ್ದು. ಆದ್ದರಿಂದ ಪೊಲೀಸರು ಕಾನೂನಿನ ಪ್ರಕಾರ ನಡೆದು ಕೊಂಡು, ಪ್ರಕರಣದ ಸತ್ಯಾಸತ್ಯತೆಯ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಹೇಳಿದರು.

ಹಾಸ್ಟೆಲ್ ವಾರ್ಡನ್ ರಶ್ಮಿ ಅವರು ಆಡಳಿತಾಧಿಕಾರಿ ಬಸವರಾಜನ್ ಮೇಲೆ ದೂರು ದಾಖಲಿಸಿದ್ದಾರೆ. ಅವರೂ ಕೂಡ ಪ್ರಭಾವಿಯಾಗಿದ್ದಾರೆ. ಆಡಳಿತಾಧಿಕಾರಿ ಹುದ್ದೆಯಿಂದ ಬಸವರಾಜನ್ ಅವರನ್ನು ತೆಗೆದು ಹಾಕಿ, ನಂತರ ಸ್ವಾಮೀಜಿ ವಾಪಸ್ ಕರೆದುಕೊಂಡಿದ್ದಾರೆ. ವಾಪಸ್ ಬಂದ ನಂತರ ಎರಡನೇ ಆರೋಪಿ ರಶ್ಮಿ ಅವರು ಬಸವರಾಜನ್ ಮೇಲೆ ಪ್ರತಿ ದೂರು ದಾಖಲಿಸಿದ್ದಾರೆ. ಈಗ ಯಾಕೆ ಅವರ ಮೇಲೆ ದೂರು ದಾಖಲಿಸಬೇಕಿತ್ತು ಎಂದು ಅನುಮಾನ ವ್ಯಕ್ತಪಡಿಸಿದರು.

ಸ್ವಾಮೀಜಿ, ಎರಡನೇ ಆರೋಪಿ ರಶ್ಮಿ ಮತ್ತು ಬಸವರಾಜ್ ನಡುವಿನ ತಿಕ್ಕಾಟದ ಬಗ್ಗೆಯೂ ತನಿಖೆಯಾಗಬೇಕು. ಪೋಕ್ಸೋ ಪ್ರಕರಣದಲ್ಲಿ ರಾಜೀ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಸಂಧಾನ ಮಾಡಿಕೊಳ್ಳುವುದಕ್ಕೆ ಇದು ಆಸ್ತಿ ವ್ಯಾಜ್ಯವಲ್ಲ ಎಂದರು.

**ಆರೋಪದಿಂದ ಶರಣರು ಹೊರಬರಲಿ :** ಲಿಂಗಾಯತ ಮುಖಂಡರೂ, ಕುವೆಂಪು ಹೋರಾಟ ಸಮಿತಿ ಅಧ್ಯಕ್ಷರೂ ಆದ ಜಿ.ಬಿ ಪಾಟೀಲ್ ಮಾತನಾಡಿ, ಚಿತ್ರದುರ್ಗದ ಪೂಜ್ಯರು ಈ ವಿವಾದದಲ್ಲಿ ಸಿಲುಕಿರುವುದು ದುರ್ದೈವದ ಸಂಗತಿ.

ಈ ಘಟನೆಯಿಂದ ನಾಡಿನ ಲಿಂಗಾಯತರಿಗೆ ದಿಗ್ಭ್ರಮೆಯಾಗಿದೆ. ಸ್ವಾಮೀಜಿಗಳು ಪ್ರಕರಣದಿಂದ ಹೊರಗೆ ಬರಬೇಕು, ಬಾಲಕಿಯರಿಗೂ ಕೂಡ ನ್ಯಾಯ ಸಿಗಬೇಕು ಎಂದು ಹೇಳಿದರು.

**ಮಕ್ಕಳ ಭವಿಷ್ಯದ ಜತೆಗೆ ಶರಣರ ವ್ಯಕ್ತಿತ್ವ ಕೂಡ ಅಷ್ಟೇ ಮುಖ್ಯ :** ನಾವು ಬಸವಣ್ಣನವರ ತತ್ವದಲ್ಲಿ ನಂಬಿಕೆ ಇಟ್ಟ ಸಮುದಾಯದವರು, ಶ್ರೀಗಳು ಕೂಡ ಅದೇ ದಾರಿಯಲ್ಲಿ ನಡೆಯುತ್ತಿದ್ದಾರೆ. ನಮ್ಮ ಸಮುದಾಯ ಯಾವಾಗಲೂ ನ್ಯಾಯದ ಪರವಾಗಿರುತ್ತದೆ, ಅನ್ಯಾಯದ ಪರವಾಗಲ್ಲ. ಶರಣರ ಮೇಲೆ ಬಂದಿರುವ ಆರೋಪದಲ್ಲಿ ಮಕ್ಕಳಿಗೆ ಅನ್ಯಾಯ ಆಗಿದೆ ಎನ್ನಲಾಗಿದೆ. ಮಕ್ಕಳೇ ಜಗತ್ತಿನ ಭವಿಷ್ಯ, ಮಕ್ಕಳಿಗೆ ಅನ್ಯಾಯವಾಗಬಾರದು ಎಂದು ಜಾಗತಿಕ ಲಿಂಗಾಯತ ಮಹಾಸಭಾದ ರಾಜ್ಯ ಕಾರ್ಯದರ್ಶಿ ಮಹಾಂತೇಶ್ ಅಗಡಿ ಹೇಳಿದರು.

**ಶರಣರು ತನಿಖೆಗೆ ಸಹಕರಿಸಲಿ :** ಲಿಂಗಾಯತ ಯುವ ಮುಖಂಡ ಸಿದ್ದಪ್ಪ ಮೂಲಗೆ ಮಾತನಾಡಿ, ಮುರುಘಾ ಶರಣರು ದಿಟ್ಟವಾಗಿ ತನಿಖೆಯನ್ನು ಎದುರಿಸಬೇಕು. ಅವರು ತಮ್ಮ ಮೇಲೆ ಪಿತೂರಿ ನಡೆದಿದೆ ಎಂದು ಆರೋಪಿಸಿದ್ದಾರೆ. ತನಿಖೆಗೆ ಶರಣರು ಸಹಕರಿಸಬೇಕು. ಅವರು ಸ್ವಚ್ಛಂದವಾಗಿ ಹೊರಗೆ ಬಾರದೇ ಇದ್ದಲ್ಲಿ, ಇಡೀ ಲಿಂಗಾಯತ ಸಮುದಾಯ ಮತ್ತು ನಾಡಿನ ಎಲ್ಲ ಮಠಗಳು ತಲೆ ತಗ್ಗಿಸಬೇಕಾಗುತ್ತದೆ ಎಂದು ಹೇಳಿದರು.

## ಮಲೇಬೆನ್ನೂರಿನಲ್ಲಿ ನಾಳೆ ಬೃಹತ್ ಗುಗ್ಗಳ



ಮಲೇಬೆನ್ನೂರು, ಆ.28- ಪಟ್ಟಣದ ಹೊರವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರೀ ವೀರಭದ್ರೇಶ್ವರ ದೇವರ ಜಯಂತ್ಯೋತ್ಸವದ ಅಂಗವಾಗಿ ನಾಡಿದ್ದು ದಿನಾಂಕ 30ರ ಮಂಗಳವಾರ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಟ್ರಸ್ಟ್ ಉಪಾಧ್ಯಕ್ಷ ಬಿ.ಚಿದಾನಂದಪ್ಪ ತಿಳಿಸಿದ್ದಾರೆ. ನಾಳೆ ಮಂಗಳವಾರ ಬೆಳಿಗ್ಗೆ 6.30 ರಿಂದ ಕಣ್ವಕುಪ್ಪಿ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ 5 ಜೊತೆ ಶರಬಿ ಗುಗ್ಗಳ ಕೊಡಗಳಿಂದ 200 ಜನ ಪುರವಂತರಿಂದ ಹಾಗೂ 25 ಸಮಾಳ ವಾದ್ಯಗಳೊಂದಿಗೆ ಗುಗ್ಗಳ, ವೀರಗಾಸೆ ನಡೆಯಲಿದೆ ಎಂದು ಚಿದಾನಂದಪ್ಪ ವಿವರಿಸಿದ್ದಾರೆ.

## ಅಂಡರ್‌ಪಾಸ್‌ಗೆ ಕಾಂಕ್ರೀಟ್ ಚೌಕಟ್ಟು

**(1ನೇ ಪುಟದಿಂದ) ರೈಲುಗಳ ಮಾರ್ಗ ಬದಲು :** ಅಂಡರ್‌ಪಾಸ್ ಕಾಮಗಾರಿಯ ಹಿನ್ನೆಲೆಯಲ್ಲಿ, 12 ರೈಲುಗಳ ವೇಳಾಪಟ್ಟಿ ಬದಲಿಸಲಾಗಿತ್ತು. ಎರಡು ರೈಲುಗಳನ್ನು ಪೂರ್ಣ ರದ್ದುಗೊಳಿಸಿದ್ದರೆ, ನಾಲ್ಕು ರೈಲುಗಳ ಸಂಚಾರ ಭಾಗಶಃ ರದ್ದಾಗಿತ್ತು. ಮೂರು ರೈಲುಗಳ ವೇಳಾಪಟ್ಟಿ ಬದಲಿಸಿದ್ದರೆ, ಮೂರು ರೈಲುಗಳ ಮಾರ್ಗ ಬದಲಿಸಲಾಗಿತ್ತು.

ಮೊದಲ ಹಂತದಲ್ಲಿ ನಿರ್ಮಾಣವಾಗುತ್ತಿರುವ ಅಂಡರ್‌ಪಾಸ್, 10 ಅಡಿ ಎತ್ತರದ್ದಾಗಿದೆ. ಕಾರು, ಬೈಕ್, ಟ್ರ್ಯಾಕ್ಟರ್ ಸೇರಿದಂತೆ ಸಣ್ಣ ವಾಹನಗಳು ಈ ಅಂಡರ್‌ಪಾಸ್ ಬಳಸಲು ಸಾಧ್ಯವಾಗಲಿದೆ. ಇಡೀ ಯೋಜನೆ 7.2 ಕೋಟಿ ರೂ. ವೆಚ್ಚದ್ದಾಗಲಿದೆ.

## ಜಗಳೂರಿನಲ್ಲಿ ಇಂದು ಅಮೃತ ವನಿತಾ ಉಚಿತ ಸಮರ ಕಲೆ ಶಿಬಿರ

ಜಗಳೂರು,ಆ.28- ಸ್ವಾತಂತ್ರ್ಯ ಬಂದು 75 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಮಹಿಳಾ ಸಬಲೀಕರಣಕ್ಕಾಗಿ ಜಗಳೂರು ಪಟ್ಟಣದಲ್ಲಿ ಅಮೃತ ವನಿತಾ ಸಮರ ಕಲೆ ಉಚಿತ ಸಮರ ಕಲೆ ಶಿಬಿರವನ್ನು ನಾಳೆ ದಿನಾಂಕ 29 ರಿಂದ ಸೆಪ್ಟೆಂಬರ್ 3 ವರೆಗೆ ಆಯೋಜಿಸಲಾಗಿದೆ.

ಜಿಲ್ಲಾ ಪೊಲೀಸ್ ಇಲಾಖೆ, ತಾಲ್ಲೂಕು ಆಡಳಿತ, ತಾಪಂ, ಸಮಾಜ ಕಲ್ಯಾಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಸರ್ಕಾರಿ ಆಸ್ಪತ್ರೆ, ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ದಾವಣಗೆರೆಯ ಕರಾಟೆ ಕೇಸರಿ ಮಾರ್ಷಲ್ ಆರ್ಟ್ಸ್ ಅಸೋಸಿಯೇಷನ್ ಸಹಭಾಗಿತ್ವದಲ್ಲಿ ನಡೆಯಲಿದೆ ಎಂದು ಆಯೋಜಕರಾದ ಪತ್ರಕರ್ತ ಎಂ.ಲೋಕೇಶ್ ಐಹೊಳೆ, ಎಸ್.ಎಂ.ಸೋಮನ ಗೌಡ ತಿಳಿಸಿದ್ದಾರೆ.

ಪಟ್ಟಣದ ವಿವಿಧ ಶಾಲಾ-ಕಾಲೇಜುಗಳ ಒಂದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿನಿಯರಿಗೆ ಪ್ರತಿನಿತ್ಯ 8 ರಿಂದ 9ಗಂಟೆಯವರೆಗೆ ಉಚಿತ ಕರಾಟೆ ಮತ್ತು ಆತ್ಮ ರಕ್ಷಣೆ ಕಲೆಯ ಬಗ್ಗೆ ತರಬೇತಿಯನ್ನು ನೀಡಲಿದೆ.

ಸೋಮವಾರ (ಆ.29) ಕಾರ್ಯಕ್ರಮ ಉದ್ಘಾಟನೆಯಿದ್ದು, ಶಾಸಕ ಎಸ್.ವಿ.ರಾಮಚಂದ್ರ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎಸ್ಪಿ ಸಿ.ಬಿ.ರಿಷ್ಯಂತ್, ತಹಶೀಲ್ದಾರ್ ಜಿ.ಸಂತೋಷ್‌ಕುಮಾರ್, ತಾಪಂ. ಇ.ಒ ವೈ.ಎಚ್. ಚಂದ್ರಶೇಖರ್, ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಮಹೇಶ್ವರಪ್ಪ, ಕರಾಟೆ ಕೇಸರಿ ಅಸೋಸಿಯೇಷನ್ ಕಾರ್ಯದರ್ಶಿ ಕುಬೇರ್ ನಾಯ್ಕ್, ವೈದ್ಯಾಧಿಕಾರಿ ಡಾ.ನೀರಜ್, ಸಿಪಿಐ ಕೆ.ಸತ್ಯನಾರಾಯಣ, ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ್ ಪಂಡಿತ್, ಪ್ರಾಂಶುಪಾಲ ಜಗದೀಶ್, ಪ.ಪಂ ಅಧ್ಯಕ್ಷರಾದ ಸಿ.ವಿಶಾಲಾಕ್ಷಿ, ಪ.ಪಂ ಚೀಫ್ ಆಫೀಸರ್ ಲೋಕ್ಯಾನಾಯ್ಕ್, ಪತ್ರಕರ್ತರ ಸಂಘದ ತಾಲ್ಲೂಕು ಅಧ್ಯಕ್ಷ ಜಿ.ಎಸ್. ಚಿದಾನಂದ, ಶಿಕ್ಷಣ ಇಲಾಖೆ ಸಮನ್ವಯಾಧಿಕಾರಿ ಡಿ.ಡಿ. ಹಾಲಪ್ಪ ಭಾಗವಹಿಸಲಿದ್ದಾರೆ.

ಶನಿವಾರ (ಸೆ.3)ಸಮಾರೋಪ ಸಮಾರಂಭ ನಡೆಯಲಿದ್ದು, ಮಾಜಿ ಶಾಸಕ ಎಚ್.ಪಿ.ರಾಜೇಶ್, ಮಾಜಿ ಮೇಯರ್ ಬಿ.ಜಿ. ಅಜಯ್‌ಕುಮಾರ್, ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಭಾರತಿ, ಕೆ.ಪಿ.ಪಾಲಯ್ಯ, ಕಾಂಗ್ರೆಸ್ ಮುಖಂಡ ಚಿಕ್ಕಮ್ಮನಹಟ್ಟಿ ದೇವೇಂದ್ರಪ್ಪ, ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಬಿ. ಕಲ್ಲೇರುದ್ರೇಶ್, ಪಿಎಸ್ಐ ಮಹೇಶ್ ಹೊಸಪೇಟೆ, ಹಿರಿಯ ಪತ್ರಕರ್ತ ಅಣಬೂರು ಮಠದ ಕೊಟ್ರೇಶ್, ಡಿ. ಶ್ರೀನಿವಾಸ್, ಬಿ.ಪಿ.ಸುಭಾನ್ ಸಾಬ್, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಬಿ.ಆರ್. ಚಂದ್ರಪ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

## ಮುರುಘಾ ಶರಣರ ಬಂಧನಕ್ಕೆ ಆಗ್ರಹ

ದಾವಣಗೆರೆ, ಆ. 28- ಲೈಂಗಿಕ ದೌರ್ಜನ್ಯದ ಆರೋಪದ ಹಿನ್ನೆಲೆಯಲ್ಲಿ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿರುವ ಕಾರಣ ಶ್ರೀ ಶಿವಮೂರ್ತಿ ಮುರುಘಾ ಶರಣರು ಮತ್ತು ಇತರರನ್ನು ಬಂಧಿಸಬೇಕು ಎಂದು ವಕೀಲರಾದ ಗುಮ್ಮನೂರು ಮಲ್ಲಿಕಾರ್ಜುನ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ಮಠವನ್ನು ತನ್ನ ಸುಪರ್ದಿಗೆ ಪಡೆಯಬೇಕು. ಶ್ರೀಮಠದಲ್ಲಿರುವ ವಿದ್ಯಾರ್ಥಿನಿಯರಿಗೆ ರಕ್ಷಣೆ ನೀಡಬೇಕು. ಲೈಂಗಿಕ ಶೋಷಣೆಗೆ ಒಳಗಾದವರಿಗೆ ತಲಾ 1 ಕೋಟಿ ರೂ. ಪರಿಹಾರದ ಜೊತೆಗೆ ಅವರಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಎಂದು ಒತ್ತಾಯಿಸಿದರು.

## ಊಟದ ಶಾಲೆಯೋ, ಪಾಠದ ಶಾಲೆಯೋ?

**(1ನೇ ಪುಟದಿಂದ)** ದಾಖಲೆಗಳನ್ನು ಒದಗಿಸುವುದರಲ್ಲೇ ಸಾಕಷ್ಟು ಸಮಯ ಹೋಗುತ್ತದೆ ಎಂದವರು ಹೇಳಿದ್ದಾರೆ.

ಮಕ್ಕಳಿಗೆ ಏನೆಲ್ಲ ಉಚಿತ ಕೊಡುಗೆ ಕೊಡುತ್ತೇವೆ ಎಂದರೂ, ಪ್ರತಿ ವರ್ಷ ಸರ್ಕಾರಿ ಶಾಲೆಗಳಿಗೆ ಸೇರುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಸರ್ಕಾರವೇ ಈಗ ಸಾವಿರಾರು ಶಾಲೆಗಳ ವಿಲೀನಕ್ಕೆ ಮುಂದಾಗಿದೆ. ಒಂದು ರೀತಿ ಪೋಷಕರು ಸರ್ಕಾರಿ ಶಾಲೆಗಳ ವಿರುದ್ಧ ಅವಿಶ್ವಾಸ ನಿಲುವಳಿ ಮಂಡಿಸಿದಂತಿದೆ. ಹಣ ಇಲ್ಲದವರು, ಇಲ್ಲವೇ ಗ್ರಾಮೀಣ ಭಾಗದಲ್ಲಿರುವವರು ಮಾತ್ರ ಸರ್ಕಾರಿ ಶಾಲೆಗಳಿಗೆ ಅನಿವಾರ್ಯವಾಗಿ ಹೋಗುತ್ತಿದ್ದಾರೆ ಎಂಬ ಭಾವನೆ ಮೂಡುತ್ತಿದೆ.

ದೇಶದ ಸಾಕಷ್ಟು ಮಕ್ಕಳು ಅಪೌಷ್ಟಿಕತೆಗೆ ಸಿಲುಕಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಸಿಗುವ ಉಚಿತ ಸೌಲಭ್ಯಗಳು ಮಕ್ಕಳನ್ನು ಶಾಲೆಗೆ ತರಲು ನೆರವಾಗಬಹುದು. ಆದರೆ, ಇದೆಲ್ಲವನ್ನೂ ಮೀರಿ ಪಾಠಕ್ಕಾಗಿಯೇ ಮಕ್ಕಳನ್ನು ಶಾಲೆಗೆ ಕಳಿಸುವ ದೊಡ್ಡ ವರ್ಗವೂ ಇದೆ. ಆದರೆ, ಆ ವರ್ಗದವರು ಸರ್ಕಾರಿ ಶಾಲೆ ಕಡೆ ಬರುತ್ತಿಲ್ಲ ಅಷ್ಟೇ.

ಹೀಗಾಗಿ ಸರ್ಕಾರಿ ಶಾಲೆ ಹಾಗೂ ಖಾಸಗಿ ಶಾಲೆಗಳ ನಡುವೆ ದೊಡ್ಡ ವರ್ಗ ಭೇದವಾಗಿದೆ. ಸರ್ಕಾರಿ ಶಾಲೆಗಳೆಂದರೆ ಊಟದ ಶಾಲೆ, ಖಾಸಗಿ ಶಾಲೆಗಳೆಂದರೆ ಪಾಠದ ಶಾಲೆ ಎಂಬ ಭಾವನೆ ಜನರಲ್ಲಿ ಬೇರೂರುವಂತಾಗಿದೆ. ಇನ್ನಾದರೂ ಸರ್ಕಾರ ಶಿಕ್ಷಕರ ಮೇಲಿನ ಪಠ್ಯೇತರ ಹೊರೆ ಕಡಿಮೆ ಮಾಡಲು ಮುಂದಾಗಬೇಕಿದೆ. ಕೊರೊನಾದಿಂದ ತತ್ತರಿಸಿರುವ ಕಲಿಕೆಯನ್ನು ಸರಿ ದಾರಿಗೆ ತರಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕಿದೆ. ಇಲ್ಲವಾದರೆ, ಮುಂದೊಂದು ದಿನ ಸರ್ಕಾರಿ ಶಾಲೆಗಳು ಆಟ - ಊಟಕ್ಕುಂಟು, ಪಾಠಕ್ಕಿಲ್ಲ ಎಂಬ ಶಾಶ್ವತ ಹಣೆಪಟ್ಟಿ ಹೊರಬೇಕಾಗುತ್ತದೆ.

## ಮೂಲಭೂತ ಸೌಕರ್ಯಕ್ಕೆ ಆಗ್ರಹಿಸಿ ನಗರದಲ್ಲಿ ಇಂದು ಪ್ರತಿಭಟನೆ

ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.1ರ ಗಾಂಧಿನಗರ ಮತ್ತು ಸುತ್ತಮುತ್ತಲಿನ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳಿಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಆದಿಜಾಂಬವ ಸಂಘದ ಸಂಯುಕ್ತಾಶ್ರಯದಲ್ಲಿ ವಾರ್ಡ್‌ನ ಕಾಂಗ್ರೆಸ್ ಕಾರ್ಯಕರ್ತರು ಇಂದು ಬೆಳಿಗ್ಗೆ 11 ಗಂಟೆಗೆ ಪಾಲಿಕೆಗೆ ಬೀಗ ಹಾಕುವ ಮೂಲಕ ಪ್ರತಿಭಟನೆ ನಡೆಸಲಿದ್ದಾರೆ ಎಂದು ಸಂಘದ ಅಧ್ಯಕ್ಷ ಟಿ. ರಮೇಶ್ ತಿಳಿಸಿದ್ದಾರೆ.

## ಓದುಗರ ಪತ್ರಗಳು

### ರೈಲ್ವೇ ಗೇಟ್‌ನಲ್ಲಿ ದುರ್ವಾಸನೆ ತಪ್ಪಿಸಿ



**ಮಾನ್ಯರೇ,**

ನಗರದ ಅರುಣ ವೃತ್ತದಿಂದ ಹೊಂಡದ ವೃತ್ತಕ್ಕೆ ಹೋಗುವ ಸಂದರ್ಭದಲ್ಲಿ ರೈಲ್ವೇ ಗೇಟ್ ಹಾಕಿದ್ದಾಗ ಸಾರ್ವಜನಿಕರು ಕಾಯಬೇಕಾಗುತ್ತದೆ. ಆ ಸ್ಥಳದ ಎಡಬದಿಯಲ್ಲಿ ಕೊಳಚೆ ತ್ಯಾಜ್ಯಗಳನ್ನು ಎಸೆದಿರುವ ಕಾರಣದಿಂದಾಗಿ ದುರ್ವಾಸನೆಯಿಂದ ಕೂಡಿದ್ದು ಜನರು ಮೂಗು ಮುಚ್ಚಿಕೊಂಡು ಗೇಟ್ ತೆರೆಯುವುದನ್ನು ಕಾಯಬೇಕಾದ ಪರಿಸ್ಥಿತಿ ಇದೆ. ಮಹಾನಗರ ಪಾಲಿಕೆಯವರು ಅಲ್ಲಿ ತ್ಯಾಜ್ಯಗಳನ್ನು ಎಸೆಯದ ಹಾಗೆ ಮತ್ತು ಆ ಸ್ಥಳದಲ್ಲಿ ತೆರೆದ ವಾಚನಾಲಯವನ್ನು ಮಾಡಿದರೆ ಸಾರ್ವಜನಿಕರಿಗೆ ಅನುಕೂಲವಾಗಲಿದೆ.

**- ವೈ.ವಿ. ಭಟ್,** ವಕೀಲರು, ದಾವಣಗೆರೆ

### ಗುಂಡಿ, ಕೆಸರು ತುಂಬಿದ ರಸ್ತೆಗಳು...

**ಮಾನ್ಯರೇ,**

ದಾವಣಗೆರೆ ತಾಲ್ಲೂಕು ಯರಗುಂಟೆ ಹಾಗೂ ಅಶೋಕ ನಗರದ ಒಳರಸ್ತೆಗಳು ಗುಂಡಿಮಯ ಮತ್ತು ಕೆಸರುಮಯವಾಗಿವೆ. ಜನ-ವಾಹನಗಳಿಗೆ ತೀವ್ರ ತೊಂದರೆಯಾಗಿದೆ. ದಯಮಾಡಿ ಸಂಬಂಧ ಪಟ್ಟ ಶಾಸಕರು ಮತ್ತು ಮಹಾನಗರಪಾಲಿಕೆಯವರು ಈ ರಸ್ತೆಗಳಿಗೆ ಟಾರ್ ಅಥವಾ ಕಾಂಕ್ರೀಟ್ ಹಾಕಬೇಕೆಂದು ವಿನಂತಿಸುತ್ತೇನೆ.

**ಜಿ.ನರೇಂದ್ರರಾವ್,** ಅಶೋಕನಗರ, ದಾವಣಗೆರೆ.

### ಮಹಾ ನಗರಪಾಲಿಕೆ ಕಚೇರಿಯಲ್ಲಿ ಪುಗಸಟ್ಟೆ ವಿದ್ಯುತ್ ಉರಿಸುವ ಭಾಗ್ಯ !

**ಮಾನ್ಯರೇ,**

ವಿದ್ಯುತ್ ಉರಿಸುವ ಭಾಗ್ಯ ನಾ ? ಇದ್ಯಾವ ರೀತಿ ಭಾಗ್ಯ , ಹೌದು ಓದುಗರೇ, ಕೇಳುಗರೇ ನೀವು ಎಂದೂ ಕೇಳರಿಯದ ಭಾಗ್ಯ ಇದು. ಅನೇಕ ಜನರು ಕೇಳಿದ ತಕ್ಷಣ ತುಂಬಾ ವಿಶೇಷ ಎನಿಸುವ ಭಾಗ್ಯ, ಈ ಭಾಗ್ಯಕ್ಕೆ ಸರ್ಕಾರದಿಂದ ಯಾವುದೇ ಆದೇಶವಿಲ್ಲ, ಬದಲಾಗಿ ಅಧಿಕಾರಿಗಳೇ ತಮ್ಮ ಸ್ವ-ಇಚ್ಛೆಯಿಂದ ಮಾಡಿಕೊಂಡಿರುವ ಭಾಗ್ಯ. ಅದಕ್ಕೇ ಪುಗಸಟ್ಟೆ ವಿದ್ಯುತ್ ಉರಿಸುವ ಭಾಗ್ಯ ಎಂದು ಕರೆಯಬಹುದು ?

ಹೌದು ನಮಗೆಲ್ಲ ತಿಳಿದಿರುವ ಹಾಗೆ ಸರ್ಕಾರಿ ಕಛೇರಿಗಳು ಮತ್ತು ಅದಕ್ಕೆ ಸಂಬಂಧಪಟ್ಟ ಪ್ರತಿಯೊಂದು ಖರ್ಚು, ವೆಚ್ಚಗಳು ಜನರ ತೆರಿಗೆ ಹಣದಿಂದ ನಡೆಯುತ್ತಿವೆ. ನಗರದ ಮಹಾನಗರಪಾಲಿಕೆ ಮುಖ್ಯ ಕಚೇರಿಯಲ್ಲಿ ತಮಗಿಷ್ಟ ಬಂದಂತೆ ವಿದ್ಯುತ್ ದುಂದು ವೆಚ್ಚ ಮಾಡಲಾಗುತ್ತಿದೆ. ಈ ಕಚೇರಿಯ ಕೊಠಡಿಗಳಲ್ಲಿ ಅಧಿಕಾರಿಗಳು / ಸಿಬ್ಬಂದಿಗಳು ಇರಲಿ, ಬಿಡಲಿ ಅಲ್ಲಿನ ಲೈಟ್ ಮತ್ತು ಫ್ಯಾನ್ ಸದಾ ಉರಿಯುತ್ತಲೇ ಇರುತ್ತವೆ, ಬೆಳಗಿನ ಸಮಯದಲ್ಲಿ ಅಧಿಕಾರಿಗಳು ಕೊಠಡಿಗೆ ಬರುವ 1 ಗಂಟೆ ಮುಂಚೆಯಿಂದಲೇ ಲೈಟ್ ಮತ್ತು ಫ್ಯಾನ್ ಉರಿಯುತ್ತಲೇ ಇರುತ್ತವೆ, ಸಂಜೆ ಪಾಲಿಕೆ ಮುಚ್ಚುವ ಹೊತ್ತಿಗೆ ಆಫ್ ಆಗಬಹುದು ಅಥವಾ ರಾತ್ರಿಯೆಲ್ಲ ಹಾಗೆ ಉರಿಯುತ್ತದೋ ತಿಳಿಯದು. ಪಾಲಿಕೆಯ ಈ ಪುಗಸಟ್ಟೆ ಭಾಗ್ಯ ಇದೆ ರೀತಿ ಮುಂದುವರೆಯುತ್ತದೆಯೋ ಅಥವಾ ಅರಿತು ಸರಿ ಪಡಿಸಿಕೊಳ್ಳುತ್ತಾರೋ ಕಾದು ನೋಡಬೇಕಿದೆ.

**- ನಾಗಾರ್ಜುನ್ ಗುಜ್ಜರ್,** ತರಳಬಾಳು ಬಡಾವಣೆ, ದಾವಣಗೆರೆ.

## ರಕ್ತದಾನಿಗಳು ಜೀವರಕ್ಷಕರಿದ್ದಂತೆ

**(3ನೇ ಪುಟದಿಂದ)** ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಟಿ.ನಾಗೇಶ್, ಐಕ್ಯೂಎಸಿ ಸಂಯೋಜಕ ಪ್ರೊ. ಜೆ.ಎಸ್.ಸುರೇಶ್, ರೆಡ್‌ಕ್ರಾಸ್ ಸಂಸ್ಥೆಯ ಅಧಿಕಾರಿಗಳಾದ ಶಿವಕುಮಾರ್, ಡಾ.ಪಾರ್ವತಿ, ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ.ಕುಮಾರ್, ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ತಿಪ್ಪೇಸ್ವಾಮಿ, ಪ್ರೊ. ಸಂತೋಷ ಆರ್. ಮನ್ನೋಪಂತರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಹೆಚ್.ಎಂ.ಐಶ್ವರ್ಯ ಪ್ರಾರ್ಥಿಸಿ ದರು. ರೆಡ್‌ಕ್ರಾಸ್ ಸಮಿತಿ ಸಂಯೋಜಕ ಡಾ. ಮಂಜುನಾಥ್ ಅವರು ಪ್ರಾಸ್ತಾವಿಕವಾಗಿ ಮಾತ ನಾಡಿದರು. ಸಮಾಜ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ತಿಪ್ಪೇಸ್ವಾಮಿ ಸ್ವಾಗತಿಸಿದರು. ವಿದ್ಯಾರ್ಥಿನಿ ಭವಾನಿ ಕಾರ್ಯಕ್ರಮ ನಿರ್ವಹಿಸಿದರು. ವಿದ್ಯಾರ್ಥಿನಿ ಸುಮಲತ ವಂದಿಸಿದರು.

## ಕನ್ನಡ ಅಸ್ಮಿತೆ ಮರೀಚಿಕೆ: ಹೆಗಡೆ

**(1ನೇ ಪುಟದಿಂದ)** ಮರ್ಯಾದೆ ಹೋಗಲಿದೆ. ಕನ್ನಡ ಉದಾರವಾದ ಸಂಸ್ಕೃತಿ ಹೊಂದಿದೆ. ಕನ್ನಡಕ್ಕೆ ಉದಾರತೆ ತುಂಬಾ ಇದೆ. ಮಾತ್ರವಲ್ಲ ಔದಾರ್ಯತೆ ಇದೆ. ಅದನ್ನು ಕೆಲವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಆಕ್ಷೇಪಿಸಿದರು.

ಇಂದಿನ ದಿನಮಾನಗಳಲ್ಲಿ ಅನೇಕರ ಮನೆಗಳಲ್ಲಿ ಅದರಲ್ಲೂ ಬೆಂಗಳೂರಂತಹ ನಗರಗಳಲ್ಲಂತೂ ಕನ್ನಡ ನಶಿಸಿ ಹೋಗುತ್ತಿದೆ. ನಮ್ಮಲ್ಲಿ ಮಾತೃಭಾಷೆಯ ಪ್ರಭುತ್ವ ಇದ್ದರೆ, ಯಾರಿಗೂ ಹೆದರಬೇಕಾಗಿಲ್ಲ. ಇಂಗ್ಲಿಷ್ ಎಂದರೆ ಕಿರೀಟ ಎನ್ನುವ ಭ್ರಮೆ ಇದೆ. ಈ ಹಿಂದೆ ನಾವು ಓದುತ್ತಿದ್ದ ಇತಿಹಾಸದಲ್ಲಿ ಬೇಡವಾದುದನ್ನು ಸೇರಿಸಿ, ನಮ್ಮಗಳಿಗೆ ಹೇಳಲಾಗುತ್ತಿತ್ತು. ನಮ್ಮ ದೇಶವನ್ನು ಲೂಟಿ ಮಾಡಿದವರನ್ನೇ ನಾಯಕರೆಂದು ಬಿಂಬಿಸಲಾಗುತ್ತಿತ್ತು ಎಂದರು.

ಈ ದೇಶ ಸಂತರ ನಾಡು. ಆದರೆ ಇಂದಿನ ಜನಕ್ಕೆ ಶರಣರ ಸಂಸ್ಕೃತಿ ಬಗ್ಗೆ ಮಾಹಿತಿ ಇಲ್ಲದಂತಾಗಿದೆ. ವಚನಗಳನ್ನು ಅರ್ಥೈಸಿಕೊಳ್ಳಲು ಮುಂದಾಗಬೇಕಿದೆ. ಅಧ್ಯಯನಶೀಲರಾಗಬೇಕಿದೆ. ನಮಗೆ ಗೊತ್ತಾಗದ ವಿಷಯಗಳ ಬಗ್ಗೆ ಪ್ರಶ್ನಿಸಿ ಉತ್ತರ ಕಂಡುಕೊಳ್ಳುವ ಮನೋಭಾವ ಬರಬೇಕಿದೆ. ಅದುವೇ ನಮ್ಮ ಕನ್ನಡದ ಪರಂಪರೆ. ಕನ್ನಡವನ್ನು ಉದಾಸೀನತೆ ಮಾಡದೇ ಎಲ್ಲರೂ ಕನ್ನಡವನ್ನು ಬಳಸಬೇಕೆಂದು ಕರೆ ನೀಡಿದರು.

## ಹರಿಹರದಲ್ಲಿಂದು ದತ್ತಿ ಉಪನ್ಯಾಸ

ಹರಿಹರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಹರಿಹರ ಹಾಗೂ ಸರ್ಕಾರಿ ಪ್ರೌಢಶಾಲೆ ಬಿಳಸನೂರು ಇವರ ಸಹಯೋಗದಲ್ಲಿ ಇಂದು ಮಧ್ಯಾಹ್ನ 2-30 ಕ್ಕೆ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ ಮತ್ತು ದತ್ತಿ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ.

ಚಂದ್ರಶೇಖರ ಶೆಟ್ಟಿ ಹರಿಹರ ದತ್ತಿ, ದತ್ತಿ ದಾನಿಗಳು ಚಂದ್ರಶೇಖರ್ ಶೆಟ್ಟಿ ಹಿಂದಿ ಪ್ರಚಾರಕರು ಹರಿಹರ, ಶ್ರೀಮತಿ ಲಲಿತಮ್ಮ ಡಾ ಚಂದ್ರಶೇಖರ್, ದತ್ತಿ ದಾನಿಗಳು ಶ್ರೀಮತಿ ಲಲಿತಮ್ಮ ಡಾ ಚಂದ್ರಶೇಖರ್, ಜಿ.ಎಂ. ಮಲ್ಲಿಕಾರ್ಜುನ ಸ್ವಾಮಿ ದತ್ತಿ ದಾನಿಗಳು ಜಿ.ಎಂ.ಮಲ್ಲಿಕಾರ್ಜುನ ಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಉದ್ಘಾಟನೆಯನ್ನು ನಂದಿಗಾವಿ ಗ್ರಾಪಂ ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ಎ.ಎನ್. ರಾಜಣ್ಣ ನೆರವೇರಿಸಲಿದ್ದಾರೆ..

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಉಪನ್ಯಾಸ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಸ್.ಹೆಚ್. ಹೂಗಾರ್ ಪ್ರಾಸ್ತಾವಿಕ ನುಡಿ ನಡೆಸಿಕೊಡಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಬಿಳಸನೂರು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕ ಕೆ.ಆರ್. ವಿಶ್ವನಾಥ್ ವಹಿಸಲಿದ್ದಾರೆ.

ಹವ್ಯಾಸಿ ಬರಹಗಾರ ಸಿರಿಗೆರೆ ಕುಂದೂರು ಮಂಜಪ್ಪ ಅವರನ್ನು ಸನ್ಮಾನಿಸಲಾಗುವುದು. ಮುಖ್ಯ ಅತಿಥಿಗಳಾಗಿ ಬಿಳಸನೂರು ಸರ್ಕಾರಿ ಪ್ರೌಢಶಾಲಾ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಬಿ. ನಾಗರಾಜಚಾರಿ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ ಎಂದು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿಗಳಾದ ಬಿ.ಬಿ. ರೇವಣ್ಣನಾಯ್ಕ್, ಎಂ. ಚಿದಾನಂದ ಕಂಚಿಕೇರಿ ತಿಳಿಸಿದ್ದಾರೆ.

# ಸಮಾಜವು ಪುರಸ್ಕರಿಸುವ ಸಾಧಕರು ನೀವಾಗಬೇಕು

**ವಿದ್ಯಾರ್ಥಿಗಳಿಗೆ ಜಯಲಕ್ಷ್ಮಿ ಕಾರಂತ್ ಕಿವಿಮಾತು**

ದಾವಣಗೆರೆ, ಆ.28- ಸಾಧನೆ ಗುರುತಿಸಿ ಸಮಾಜವು ಓಡಿಬಂದು ಪುರಸ್ಕರಿಸುವಂತಹ ಸಾಧಕರು ನೀವಾಗಬೇಕು ಎಂದು ಕೇರಳದ ಮಂಗಲ್ಪಾಡಿಯ ಹಿರಿಯ ಯಕ್ಷಗಾನ ಸಾಹಿತಿ ಜಯಲಕ್ಷ್ಮಿ ಕಾರಂತ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಅವರು, ಇಂದು ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿದ್ದ 'ಕನ್ನಡ ಕೌಸ್ತುಭ ಸರಸ್ವತಿ ಪುರಸ್ಕಾರ' ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಸಾಧಕರು ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಲ್ಲರು. ಮೊದಲ ಬಾರಿಯ ಪುರಸ್ಕಾರ ಒಂದನೇ ಮೆಟ್ಟಿಲಾಗಿದ್ದು, ಅದಕ್ಕಷ್ಟೇ ಸೀಮಿತರಾಗದೇ ಬಹಳ ಎತ್ತರವಾಗಿರುವ ಸಾಧನೆಯ ಶಿಖರವೇರಬೇಕು ಎಂದು ಸಲಹೆ ನೀಡಿದರು.

ನೀವು ವೈದ್ಯರು, ಶಿಕ್ಷಕರು ಹೀಗೆ ಏನೇ ವೃತ್ತಿ, ಸೇವೆ ಮಾಡಿದರೂ ಸಹ ಎಲ್ಲರಲ್ಲೊಬ್ಬರು ನೀವಾಗದೇ ಎಲ್ಲರಿಗಿಂತ ಪ್ರಥಮರಾಗಬೇಕು. ನೀವು ಎಲ್ಲೇ ಇರಿ, ಏನೇ ಆಗಿರಿ. ಕನ್ನಡಮ್ಮನ ಮಕ್ಕಳು ಎಂಬುದನ್ನು ಮರೆಯಬೇಡಿ ಎಂದು ಕರೆ ನೀಡಿದರು.

ಕನ್ನಡವನ್ನು ಇಂಗ್ಲಿಷ್ ಎಂಬ ಇಟ್ಟಿಗೆಯಲ್ಲಿ ಕಟ್ಟುವ ಆತಂಕದ ಕೆಲಸವಾಗುತ್ತಿದ್ದು, ಕನ್ನಡ ಕಷ್ಟ, ಇಂಗ್ಲಿಷ್ ಸುಲಭ. ಇಂಗ್ಲಿಷ್ ಭಾಷೆಯಲ್ಲಿ ಮಾತನಾಡಿದರೆ ನಮ್ಮ ಮಕ್ಕಳು ಯೋಗ್ಯರು ಎನ್ನುವ ಮನೋಭಾವ ಪೋಷಕರಲ್ಲಿದೆ. ಇದಲ್ಲದೇ ಕೆಲವು ಪೋಷಕರಿಗೆ ಕನ್ನಡದ ಅಕ್ಷರಗಳನ್ನು ಹೇಳಲು ಕಷ್ಟ ಪಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡ ಕೇವಲ ಅನ್ನದ ಭಾಷೆ ಆಗದೇ ಹೃದಯದ ಭಾಷೆ ಆಗಬೇಕಿದೆ. ನಮಗೆ ನೋವಾದಾಗ ನಾವು ಮೊದಲು ಹೇಳುವುದು ಅಮ್ಮ ಎಂದು, ಅಂತೆಯೇ ಆ ವೇಳೆ ನಮ್ಮ ಎರಡನೇ ಪದವೇ ಕನ್ನಡ ಎನ್ನುವಂತಾಗಲಿ. ಇದು ಪ್ರತಿಭಾನ್ವಿತ ಸಾಧಕ ವಿದ್ಯಾರ್ಥಿಗಳಿಂದ ಸಾಧ್ಯವಾಗಬೇಕು. ಅದೇ ನೀವು ಕನ್ನಡಕ್ಕೆ ಕೊಡುಗೆ ನೀಡಿದಂತೆ ಎಂದು ಆಶಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಈ ಹಿಂದೆ ಕನ್ನಡದಲ್ಲಿ ಹೆಚ್ಚು ಅಂಕ ಗಳಿಸುವುದು ಕಷ್ಟ ಎನ್ನಲಾಗುತ್ತಿತ್ತು. ಆದರೆ, ಇದೀಗ ಪರಿಸ್ಥಿತಿ ಬದಲಾಗಿದೆ. ಸಂಸ್ಕೃತ, ಇಂಗ್ಲಿಷ್ ಭಾಷೆಗಳೇ ಶ್ರೇಷ್ಠ ಎನ್ನುವ ಕಾಲ ಹೋಗಿ ಇವೆಲ್ಲವನ್ನೂ ಮೀರಿ ಇಂದು ಕನ್ನಡ ಬೆಳೆದಿದೆ ಎಂದರು.

ಕನ್ನಡ ಭಾಷೆ ನಶಿಸುತ್ತಿದೆ ಎಂಬ ಮಾತಿಗೆ ಅಳಿವಿದೆಯೇ ಹೊರತು 2 ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆಗೆ ಎಂದಿಗೂ ಅಳಿವಿಲ್ಲ. ಮಾತೃಭಾಷೆ ಕಲಿತವರು ಶ್ರೇಷ್ಠತೆ ಮೆರೆಯುತ್ತಾರೆ. ಆದ್ದರಿಂದ ಮಾತೃ ಭಾಷೆ ಕನ್ನಡವನ್ನು ಮರೆಯಬಾರದೆಂದರು.

ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ನಿರ್ದೇಶಕ ಡಾ. ಡಿ.ಎಸ್. ಜಯಂತ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಡಾ. ಜಿ.ಎಲ್. ಹೆಗಡೆ ಅಧ್ಯಕ್ಷತೆ ವಹಿಸಿದ್ದರು. ಕಲಾಕುಂಚ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಸೇರಿದಂತೆ ಇತರರಿದ್ದರು.

## ಮಾಗನೂರು ಬಸಪ್ಪ, ಸರ್ವಮಂಗಳಮ್ಮ ಸ್ಮರಣೆ

**ನಗರದಲ್ಲಿ ಇಂದು**

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ದಾವಣಗೆರೆ ಜಿಲ್ಲಾ ಘಟಕ, ಕದಳಿ ಮಹಿಳಾ ವೇದಿಕೆ, ಮಾ.ಸ.ಬ. ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಇವರ ಜಂಟಿ ಆಶ್ರಯದಲ್ಲಿ ಇಂದು ಬೆಳಿಗ್ಗೆ 11.30 ಕ್ಕೆ ಎವಿಕೆ ಕಾಲೇಜಿನ ಶ್ರೀಮತಿ ಪಾರ್ವತಮ್ಮ ಡಾ. ಶಾಮನೂರು ಶಿವಶಂಕರಪ್ಪ ಸಭಾಂಗಣದಲ್ಲಿ ಮಹಾಶರಣ ಲಿಂ. ಮಾಗನೂರು ಬಸಪ್ಪ ಮತ್ತು ಲಿಂ. ಸರ್ವಮಂಗಳಮ್ಮ ಸ್ಮರಣೆ, ಸಂಸ್ಥಾಪಕರ ದಿನಾಚರಣೆ ನಡೆಯಲಿದೆ.

ಎಂ.ಬಿ. ಸಂಗಮೇಶ್ವರ ಗೌಡ್ರು ಕಾರ್ಯಕ್ರಮ ಉದ್ಘಾಟಿಸುವರು. 'ಶರಣರ ವೈಚಾರಿಕೆ ನಡೆ' ಕುರಿತು ಡಾ. ನಾ. ಲೋಕೇಶ ಒಡೆಯರ್ ಮಾತನಾಡಲಿದ್ದಾರೆ. ಡಾ.ಎಂ.ಜಿ. ಈಶ್ವರಪ್ಪ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದು, ಕುಸುಮಾ ಲೋಕೇಶ್ ನುಡಿ ನಮನ ಸಲ್ಲಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ. ಬಿ.ಪಿ. ಕುಮಾರ್, ಜಿ.ಸಿ. ನೀಲಾಂಬಿಕೆ, ಕೆ.ಬಿ. ಪರಮೇಶ್ವರಪ್ಪ ಭಾಗವಹಿಸಲಿದ್ದಾರೆ.

## ಮರಾಠ ಯುವಜನತೆಗೆ ಅಲ್ಪಾವಧಿ ಕೌಶಲ್ಯ ತರಬೇತಿ

ದಾವಣಗೆರೆ, ಆ.22- ಮರಾಠ ಸಮುದಾಯದ ಯುವ ಜನತೆಯ ಕೌಶಲ್ಯ ಅಭಿವೃದ್ಧಿಪಡಿಸಿ, ಉದ್ಯೋಗ ಮುಖಿಯನ್ನಾಗಿಸಲು ಅಲ್ಪಾವಧಿ ಕೋರ್ಸುಗಳ ಮೂಲಕ ಕೌಶಲ್ಯ ತರಬೇತಿ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಫಲಾನುಭವಿಗಳು ಸೆಪ್ಟೆಂಬರ್ 05 ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ, ಕುರುಬರ ಹಾಸ್ಟೆಲ್ ಕಟ್ಟಡ, ದಾವಣಗೆರೆ ದೂರವಾಣಿ: 08192 230934ನ್ನು ಸಂಪರ್ಕಿಸಬಹುದು.

**IN THE COURT OF THE HON'BLE III ADDITIONAL SENIOR CIVIL JUDGE AT DAVANAGERE**

O.S. No.99/2021

Plaintiff : **Sri Dr. Mallikarjuna C.M**

Versus

Defendants No. x5 [c] : **Smt. Saraswathi D/o Late Manjunath** Aged About 27 years, R/o Naraganahalli Village, Davanagere Tq, & District.

Defendants No. 5 [d] : **Asha D/o Late Manjunath** Aged about 27 Years, R/o Naraganahalli Village, Davanagere Tq., & District.

**SUIT SUMMONS U/O V RULE 20 OF C.P.C To DEFENDANTS No.5 [c] & [d].**

Whereas plaintiffs have filed a suit against you and others for the relief of declaration, permanent injunction and also such other reliefs. You being Defendant No.5 [c] & [d] are hereby directed to appear in this court in person or through an advocate on 01.10.2022 Dated at 11.00 A.M to defend yourself failing which the suit will be heard and determined exparte.

Given under my hand and seal of this court on 23rd day of August 2022.

**K.G.K. Swamy**
S.G Mahaveer Advocate for Petitioner LAW Solutions #417/4A, 4B, 1st Floor, Benakesh Plaza, Opp : Old janatavani Office, Dixith Road, K.B Extension, Davanagere.

**By Order of Court**
Chief Miniserial officer, Prl. Senior Civil Judge Court Davanagere.

**ಸಾರ್ವಜನಿಕರ ತಿಳುವಳಿಕೆಗಾಗಿ**

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರುಗಳಾದ ಶ್ರೀ. ಶಿವಕುಮಾರಸ್ವಾಮಿ ಜಿ.ಎಂ. ಬಿನ್ ಜಿ. ಮಹೇಶ್ವರಪ್ಪ ಮತ್ತು ಜಿ.ಎಂ. ವಿದ್ಯಾಧರ ಪಾಟೀಲ್ ಬಿನ್ ಜಿ.ಮಹೇಶ್ವರಪ್ಪ, ವಾಸ # 1391/34, 3ನೇ 'ಬಿ' ಕ್ರಾಸ್, 2ನೇ ಹಂತ ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ. ಮೊ. 9590621959, ಇವರು ಷೆಡ್ಯೂಲ್ ಸ್ವತ್ತನ್ನು ದಾವಣಗೆರೆ ತಾಲ್ಲೂಕು, ಬಸವಾಪಟ್ಟಣ-2ನೇ ಹೋಬಳಿ, ಕಬ್ಬಳ ಗ್ರಾಮದ ವಾಸಿಯಾದ ಶ್ರೀಮತಿ ಜಿ. ಮನೋರಮ ಕೋಂ ಬಿ.ಬಸವರಾಜ ಇವರಿಂದ ನೋಂದಾಯಿತ ಶುದ್ಧ ಕ್ರಪತ್ರವನ್ನು ಮಾಡಿಕೊಳ್ಳಲು ಇಚ್ಛಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಾದರೂ ಯಾವುದೇ ರೀತಿಯಲ್ಲಾದರೂ ಹಕ್ಕು, ಹಿತಾಸಕ್ತಿಗಳಿದ್ದಲ್ಲಿ ಅಥವಾ ಯಾವುದೇ ರೀತಿಯ ತಕರಾರು ಇದ್ದಲ್ಲಿ ಈ ಸಾರ್ವಜನಿಕ ತಿಳುವಳಿಕೆ ಪತ್ರದ ಮುದ್ರಣದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಈ ಕೆಳಗೆ ತಿಳಿಸಿದ ವಕೀಲರಿಗಾಗಲೀ ಅಥವಾ ಅವರ ಪಕ್ಷಗಾರರಿಗಾಗಲೀ ಲಿಖಿತವಾಗಿ ದಾಖಲೆಗಳ ಸಮೇತ ತಿಳಿಸತಕ್ಕದ್ದು. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಮೇಲ್ಕಂಡ ಮಾಲೀಕರಿಂದ ಶುದ್ಧ ಕ್ರಯಪತ್ರವನ್ನು ಮಾಡಿಕೊಳ್ಳಲು ಯಾರದೂ, ಯಾವುದೇ ರೀತಿಯ ತಕರಾರು ಇಲ್ಲ ಎಂದು ಪರಿಗಣಿಸಿ, ಶುದ್ಧ ಕ್ರಯಪತ್ರವನ್ನು ಮಾಡಿಸಿಕೊಳ್ಳುತ್ತಾರೆ. ಸಾರ್ವಜನಿಕ ತಿಳುವಳಿಕೆ ಪತ್ರದ ಮುದ್ರಣದ ದಿನಾಂಕದಿಂದ ಏಳು ದಿನಗಳ ನಂತರ ಈ ಕ್ರಯಪತ್ರದ ಮೇಲೆ ಯಾವುದೇ ತಕರಾರು, ಯಾವುದೇ ವ್ಯಕ್ತಿಗಳಿಂದ ಬಂದರೆ ಅವುಗಳು ನನ್ನ ಕಕ್ಷಿದಾರರಿಗೆ ಬಾಧಕವಾಗುವುದಿಲ್ಲ.

**ಷೆಡ್ಯೂಲ್ ಸ್ವತ್ತಿನ ವಿವರ**

ದಾವಣಗೆರೆ ತಾಲ್ಲೂಕು ಹಿರಿಯ ಉಪನೋಂದಣಾಧಿಕಾರಿಗಳವರ ಕಛೇರಿಯ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶಿರಮಗೊಂಡನಹಳ್ಳಿ ಗ್ರಾಮದ ರಿ. ಸರ್ವೆನಂ 265, ಹಳೇ ಖಾನೇಷುಮಾರಿ ನಂಬರ್ 535 ಇದ್ದು, ಮಹಾನಗರ ಪಾಲಿಕೆಯ ಖಾತೆ ವಿಭಾಗದಲ್ಲಿ ಕಂಡ ಪ್ರಕಾರ ಎಸ್.ಜಿ.ಹಳ್ಳಿ ವಿಭಾಗದ ಡೋರ್ ನಂ.535/265, ಅಳತೆ ಪೂರ್ವ-ಪಶ್ಚಿಮ : 60 ಅಡಿ, ಉತ್ತರ-ದಕ್ಷಿಣ : 30 ಅಡಿ ಅಳತೆಯ ಖಾಲಿ ಜಾಗಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ಸೈಟ್ ನಂಬರ್ 268 ಪಶ್ಚಿಮಕ್ಕೆ : ರೋಡು, ಉತ್ತರಕ್ಕೆ ಸೈಟ್ ನಂಬರ್ 264, ದಕ್ಷಿಣಕ್ಕೆ : ಸೈಟ್ ನಂಬರ್ 266

ಸ್ಥಳ : ದಾವಣಗೆರೆ
ದಿನಾಂಕ : 27.8.2022

**ಗಂಗಾಧರ ಪಾಟೀಲ್,** ವಕೀಲರು,
#2337, 9ನೇ ಮೇನ್, ಎಂ.ಸಿ.ಸಿ 'ಎ' ಬ್ಲಾಕ್,
ದಾವಣಗೆರೆ. **ಮೊ : 98447 16044**

# ಎಸ್ಸೆಸ್ಸೆಂ ಜನ್ಮ ದಿನ ಅರ್ಥಪೂರ್ಣ ಆಚರಣೆಗೆ ಅಭಿಮಾನಿಗಳ ತೀರ್ಮಾನ



ದಾವಣಗೆರೆ, ಆ.28- ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ 55ನೇ ವರ್ಷದ ಹುಟ್ಟು ಹಬ್ಬವನ್ನು ಬರುವ ಸೆಪ್ಟೆಂಬರ್ 22ರಂದು ಅದ್ಧೂರಿಯಾಗಿ ಆಚರಿಸಲು ಶಾಮನೂರಿನ ಶ್ರೀ ಆಂಜನೇಯ ದೇವಸ್ಥಾನದ ಸಮುದಾಯ ಭವನದಲ್ಲಿ ಇಂದು ನಡೆದ ಎಸ್.ಎಸ್. ಮಲ್ಲಿಕಾರ್ಜುನ್ ಅಭಿಮಾನಿ ಬಳಗದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಮಲ್ಲಿಕಾರ್ಜುನ್ ಅವರು ಜಾತ್ಯತೀತ ನಾಯಕರಾಗಿದ್ದು, ಅವರ ಜನ್ಮ ದಿನವನ್ನು ಸರ್ವಧರ್ಮ ಸಭೆ ನಡೆಸುವ ಮೂಲಕ ಈ ರಾಜ್ಯಕ್ಕೆ ಸಂದೇಶ ರವಾನಿಸಬೇಕು, ಇದಕ್ಕೆ ಕಾಂಗ್ರೆಸ್ ಪಕ್ಷದ ರಾಜ್ಯ ನಾಯಕರನ್ನು ಕರೆಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ದಾಖಲೆ ರೂಪದಲ್ಲಿ ರಕ್ತದಾನ ಶಿಬಿರ, ಪ್ರತಿಭಾ ಪುರಸ್ಕಾರ, ಕೊರೊನಾ ವಾರಿಯರ್ಸ್‌ಗೆ ಸನ್ಮಾನ ಸೇರಿದಂತೆ ಅನೇಕ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳು ವುದರ ಜೊತೆಗೆ, ಮಲ್ಲಿಕಾರ್ಜುನ್ ಅವರು ಎರಡು ಬಾರಿ ಸಚಿವರಾಗಿದ್ದ ವೇಳೆ ದಾವಣಗೆರೆ ನಗರದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪುಸ್ತಕ ಮತ್ತು ಕಿರುಚಿತ್ರ ರೂಪದಲ್ಲಿ ಹೊರತಂದು ಅವನ್ನು ಮನೆ ಮನೆಗೆ ತಲುಪಿಸುವ ಕೆಲಸವಾಗಬೇಕು ಎಂದು ಸಭೆಯಲ್ಲಿ ಮಾತನಾಡಿದ ಅನೇಕರು ಸಲಹೆ - ಸೂಚನೆ ನೀಡಿದರು.

ಸಭೆಯಲ್ಲಿ ಶಾಮನೂರು ರಾಮಚಂದ್ರಪ್ಪ, ಕುಕ್ಕುವಾಡ ಮಲ್ಲೇಶಪ್ಪ, ಸೈಯದ್ ಸೈಫುಲ್ಲಾ, ಕಕ್ಕರಗೊಳ್ಳದ ಕೆ.ಜಿ.ಬಸವನಗೌಡ್ರು, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಎಪಿಎಂಸಿ, ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು ಮತ್ತು ಸದಸ್ಯರು, ಮಹಾನಗರ ಪಾಲಿಕೆ, ಡಿಸಿಸಿ ಬ್ಯಾಂಕ್, ಗ್ರಾಮ ಪಂಚಾಯಿತಿ ಹಾಲಿ ಮತ್ತು ಮಾಜಿ ಸದಸ್ಯರು ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್ ಅಭಿಮಾನಿಗಳು ಭಾಗವಹಿಸಿದ್ದರು.

# ಸ್ವಾರ್ಥ, ದುಷ್ಟತನಕ್ಕೊಳಗಾಗಿ ಬದುಕನ್ನು ಕಳೆದುಕೊಳ್ಳಬೇಡಿ

## ಲಕ್ಷ್ಮಿಸಾಗರದ 'ನಿತ್ಯ ಕಲ್ಯಾಣ..' ಕಾರ್ಯಕ್ರಮದಲ್ಲಿ ಶ್ರೀ ಶಿವಮೂರ್ತಿ ಮುರುಘಾ ಶರಣರು



ಚಿತ್ರದುರ್ಗ ಆ. 28 - ಕಲ್ಯಾಣದ ಕಾರ್ಯಕ್ಕಾಗಿ ಮಾನವ ಜನ್ಮ ಬಂದಿದೆ. ಸ್ವಾರ್ಥ, ದುಷ್ಟತನಕ್ಕೆ ಒಳಗಾಗಿ ಬದುಕನ್ನು ಕಳೆದುಕೊಳ್ಳದೆ, ಸತ್ಕಾರ್ಯಗಳಿಂದ ಉತ್ತಮ ಜೀವನ ಸಾಗಿಸಬೇಕು ಎಂದು ಶ್ರೀ ಶಿವಮೂರ್ತಿ ಮುರುಘಾ ಶರಣರು ಹಿತ ನುಡಿದರು.

ತಾಲ್ಲೂಕಿನ ಲಕ್ಷ್ಮಿ ಸಾಗರದಲ್ಲಿ ನಡೆದ 'ನಿತ್ಯ ಕಲ್ಯಾಣ; ಮನೆ ಮನೆಗೆ ಚಿಂತನ' 23ನೇ ದಿನದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾನವನ ಬದುಕಿನಲ್ಲಿ ಲೌಕಿಕತೆ ಇದೆ. ಸಾಸಿವೆಯಷ್ಟು ದುಃಖಕ್ಕೆ ಸಾಗರದಷ್ಟು ದುಃಖ ನೋಡಾ ಎಂದಿದ್ದಾರೆ ಪ್ರಭುದೇವರು. ಲೌಕಿಕ ಜೀವನ ಉಪ್ಪಿನಂತೆ ಕರಗುತ್ತದೆ. ಆದರೆ ಬೌದ್ಧಿಕ ಜೀವನ ಮುತ್ತು ಇದ್ದಂತೆ. ಅದು ಕರಗುವುದಿಲ್ಲ. ಇದು ಪರೋಪಕಾರದ ಜೀವನ. ಯಾರು ಸಹಕಾರದ ಜೀವನ ನಡೆಸುತ್ತಾರೋ ಅವರು ಮುತ್ತಿನಂತೆ ಕರಗದೆ ಇರುತ್ತಾರೆ. ಜಗತ್ತಿಗೆ ಬಂದ ಎಲ್ಲ ದಾರ್ಶನಿಕರು ಸತ್ಕಾರ್ಯಗಳನ್ನು ಮಾಡುತ್ತಾ ಹೋದರು. ಬ್ರಹ್ಮಾಂಡ ಅದ್ಭುತ ಶಕ್ತಿ ಕೊಟ್ಟಿದೆ.

ದೊಡ್ಡತನಕ್ಕೆ ನಮ್ಮ ಬುದ್ಧಿಯನ್ನು ಬಳಸಬೇಕು. ನಾಲ್ಕು ಜನರಿಗೆ ಉಪಕಾರ ಮಾಡಿದರೆ, ರಾಷ್ಟ್ರದ ಅಭಿವೃದ್ಧಿಗಾಗಿ ತಮ್ಮ ಬುದ್ಧಿ ಬಳಸಿದರೆ ಅವರ ಬದುಕು ಮುತ್ತಿನಂತೆ ಹೊಳೆಯುತ್ತದೆ. ಕಲ್ಯಾಣ ಪರಿಕಲ್ಪನೆ ಮಠಾಧೀಶರಿಗೆ ಮಾತ್ರವಲ್ಲ, ಸನ್ಯಾಸಿ ಮತ್ತು ಸಂಸಾರಿಕನೂ ಕಲ್ಯಾಣ ಸಾಧಿಸಬಹುದು ಎಂದು ಶ್ರೀಗಳು ಪ್ರತಿಪಾದಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಉಪನ್ಯಾಸಕ ಕೆರೆಯಾಗಳಹಳ್ಳಿ ತಿಪ್ಪೇಸ್ವಾಮಿ ಮಾತನಾಡಿ, 12ನೇ ಶತಮಾನದಲ್ಲಿ ರಾಜಕೀಯ, ಧಾರ್ಮಿಕ, ಆರ್ಥಿಕ ಅಸಮಾನತೆ ಇದ್ದಾಗ ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಸಮಾನತೆ ತರುವ ಪ್ರಯತ್ನ ಮಾಡಿದರು. ಏಕದೇವೋಪಾಸನೆಗೆ ಹೆಚ್ಚು ಒತ್ತು ಕೊಟ್ಟು, ಅಂತರ್ಜಾತಿ ವಿವಾಹ ಮಾಡಿ, ದೊಡ್ಡ ಕ್ರಾಂತಿ ಮಾಡುತ್ತಾರೆ.

ಬಸವಣ್ಣನವರ ಕಾಲದಲ್ಲಿ ಬಿತ್ತಿದ ಆ ಕಲ್ಯಾಣ ಪ್ರಜ್ಞೆಯನ್ನು ಮುರುಘಾ ಶರಣರು 21ನೇ ಶತಮಾನದಲ್ಲಿ ಮಾಡುತ್ತಿದ್ದಾರೆ ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಂಪತ್‌ಕುಮಾರ್ ಮಾತ ನಾಡಿ, ಮನುಷ್ಯತ್ವವನ್ನು ಮೀರಿದ್ದು ಕಲ್ಯಾಣ. ನಾವು ಮಾಡುವ ಕೆಲಸಗಳು ಇತರರಿಗೆ ಮಾದರಿಯಾಗಬೇಕು. ಸಮಾಜ ಕಲ್ಯಾಣ ಪ್ರಜ್ಞೆ ಉಂಟಾಗಬೇಕೆಂದರು.

ಕಾರ್ಯಕ್ರಮದ ಸಮ್ಮುಖ ವಹಿಸಿದ್ದ ಕುಂಬಾರ ಗುರುಪೀಠದ ಶ್ರೀ ಬಸವ ಕುಂಬಾರ ತಿಪ್ಪೇಸ್ವಾಮಿ ಶ್ರೀಗಳು, ಹೆಚ್.ಎನ್. ತಿಪ್ಪೇಸ್ವಾಮಿ ಮಾತನಾಡಿದರು. ದಾವಣಗೆರೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ, ನಗರಸಭೆ ಅಧ್ಯಕ್ಷೆ ಶ್ರೀಮತಿ ತಿಪ್ಪಮ್ಮ ವೆಂಕಟೇಶ್, ವೆಂಕಟೇಶ್ ವೇದಿಕೆಯಲ್ಲಿದ್ದರು.

ಜಮುರಾ ಕಲಾವಿದರು ವಚನ ಪ್ರಾರ್ಥನೆ ಮಾಡಿದರು. ಕಾರ್ಯಕ್ರಮ ದಾಸೋಹಿ ಬಸವನಗೌಡ್ರು ಸ್ವಾಗತಿಸಿದರು. ಶ್ರೀಮತಿ ಶೈಲಜ ಶಿವಕುಮಾರ್ ನಿರೂಪಿಸಿದರು.

# ಹರಿಹರ : 16 ಮನೆ, 85 ಎಕರೆ ಭತ್ತಕ್ಕೆ ಹಾನಿ



ಹರಿಹರ, ಆ. 28 - ಕಳೆದ ನಾಲ್ಕು, ಐದು ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ 16 ಮನೆಗಳಿಗೆ ಮತ್ತು 85 ಎಕರೆ ಭತ್ತದ ಬೆಳೆಗೆ ಹಾನಿ ಸಂಭವಿಸಿದ ಪರಿಣಾಮ 18 ಲಕ್ಷ ರೂಪಾಯಿ ಹಾನಿ ಸಂಭವಿಸಿದೆ ಎಂದು ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಹೇಳಿದರು.

ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ತಾಲ್ಲೂಕಿನ ಗಂಗನಹರಸಿ, ಷಂಷೀಪುರ, ಬೆಳ್ಳೂಡಿ, ನಂದಿಗುಡಿ, ಹರಳಹಳ್ಳಿ, ಯಲವಟ್ಟಿ, ಹಾಲಿವಾಣ, ಭಾನುವಳ್ಳಿ ಈ ಗ್ರಾಮಗಳಲ್ಲಿ ಒಂದೊಂದು ಮನೆ ಮತ್ತು ಹರಿಹರ ನಗರದ ಮೂರು ಮನೆಗಳು ವಾಸವಿಲ್ಲದೆ ಇರುವಂತಹ ಮನೆಗಳು ಮತ್ತು ವಾಸಕ್ಕೆ ಇರುವಂತಹ ಆರು ಮನೆಗಳು ಸೇರಿದಂತೆ ಒಟ್ಟು 18 ಮನೆಗಳಿಗೆ ಹಾಗೂ ತಾಲ್ಲೂಕಿನ ಹರ್ಲಾಪುರ, ಗುತ್ತೂರು ಗ್ರಾಮದಲ್ಲಿ 25 ಎಕರೆ ಮತ್ತು ಯಕ್ಕೆಗೊಂದಿ ಗ್ರಾಮದಲ್ಲಿ 60 ಎಕರೆ ಭತ್ತದ ನಾಟಿಗೆ ಹಾನಿಯಾಗಿದೆ ಎಂದವರು ಹೇಳಿದರು.

ಮಳೆ ಹಾನಿಯಾದ ಸ್ಥಳಕ್ಕೆ ಸ್ಥಳೀಯ ಮಟ್ಟದ ಅಧಿಕಾರಿಗಳು ಭೇಟಿ ಕೊಟ್ಟು ವರದಿಯನ್ನು ಸಿದ್ದತೆ ಮಾಡುವುದಕ್ಕೆ ಸೂಚನೆ ನೀಡಲಾಗಿದೆ. ಈಗಾಗಲೇ ಹಾನಿಯಾದ ಮನೆಯವರ ಕುಟುಂಬದ ಸದಸ್ಯರಿಂದ ಮತ್ತು ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು, ಅವರಿಗೆ ಸೂಕ್ತ ಪರಿಹಾರವನ್ನು ನೀಡಲು ಇಲಾಖೆ ಸನ್ನದ್ಧವಾಗಿದೆ ಎಂದು ಅವರು ತಿಳಿಸಿದರು.

# ಹರಿಹರದ ಬಿ.ಹೆಚ್.ಕಿರಣ್‌ಗೆ ಕುಸ್ತಿಯಲ್ಲಿ ಕಂಚಿನ ಪದಕ



ಹರಿಹರ, ಆ. 28 - ಇತ್ತೀಚೆಗೆ ಹರಿಯಾಣದಲ್ಲಿ ನಡೆದ 82 ಕೆಜಿ ಗ್ರೀಕೋ ರೋಮನ್ ವಿಭಾಗದ ಕುಸ್ತಿ ಸ್ಪರ್ಧೆಯಲ್ಲಿ ಹರಿಹರದ ಬಿ.ಹೆಚ್. ಕಿರಣ್ ಕಂಚಿನ ಪದಕ ಪಡೆದಿದ್ದಾರೆ. ಇವರಿಗೆ ತರಬೇತುದಾರರಾದ ಅಂತರರಾಷ್ಟ್ರೀಯ ತರಬೇತುದಾರ ವಿನೋದ್ ಕುಮಾರ್ ಹಾಗೂ ನಾಡ ಬಂದ್ ಷಾವಲಿ ಗರಡಿ ಮನೆಯ ಪೈಲ್ವಾನ್ ಚಂದ್ರಶೇಖರ್ ಎಂ.ಹೆಚ್.ಬಿ, ಮಾರುತಿ ಪೈಲ್ವಾನ್ ಪೂಜಾರ್, ರೇವಣಪ್ಪ ಪೈಲ್ವಾನ್, ಜಗದೀಶ್ ಪೈಲ್ವಾನ್ ಚೂರಿ, ಸುರೇಶ್ ಪೈಲ್ವಾನ್ ಚಂದಾಪೂರ್, ಶಿವ ವೈ ಪೈಲ್ವಾನ್, ಪಾಲಾಕ್ಷಿ ಪೈಲ್ವಾನ್, ನಾಗಣ್ಣ ಗುತ್ತೂರು ಅಭಿನಂದಿಸಿದ್ದಾರೆ.

# ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಟೊಮೊಥೆರಪಿ ಚಿಕಿತ್ಸೆ ಲಭ್ಯ

ದಾವಣಗೆರೆ, ಆ. 28- ನಗರದ ಹೊರ ವಲಯದಲ್ಲಿನ ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಅತ್ಯಾಧುನಿಕ ಟೊಮೊ ಥೆರಪಿ ಚಿಕಿತ್ಸೆ ಲಭ್ಯವಿರುವುದಾಗಿ ಡಾ.ಜಗದೀಶ್ ತುಬಚಿ ಹೇಳಿದ್ದಾರೆ.

ಆಸ್ಪತ್ರೆಯಲ್ಲಿ ನಿನ್ನೆ ಪತ್ರಿಕಾಗೋಷ್ಠಿ ನಡೆಸಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಇಲ್ಲಿಯವರೆಗೆ ಸರ್ಜರಿ ಹಾಗೂ ಕೀಮೋಥೆರಪಿ ಚಿಕಿತ್ಸೆ ಮಾತ್ರ ಲಭ್ಯವಿತ್ತು. ಟೊಮಾಥೆರಪಿಗೆ ಬೇರೆ ನಗರಗಳಿಗೆ ಕಳುಹಿಸಿಕೊಡಲಾಗುತ್ತಿತ್ತು ಎಂದು ಹೇಳಿದರು.

ಸುಮಾರು 25 ಕೋಟಿ ರೂ. ವೆಚ್ಚದಲ್ಲಿ Radiaxct Tomotherapy ಯಂತ್ರವನ್ನು ಕ್ಯಾಲಿಫೋರ್ನಿಯಾದಿಂದ ಖರೀದಿಸಲಾಗಿದೆ. ರಾಜ್ಯದಲ್ಲಿಯೇ ಇದು ಅತ್ಯಾಧುನಿಕ ಯಂತ್ರವಾಗಿದೆ. ದಾವಣಗೆರೆ ಸೇರಿದಂತೆ, ಸುತ್ತ ಮುತ್ತಲಿನ ಕ್ಯಾನ್ಸರ್ ರೋಗಿಗಳು ಸದ್ಬಳಕೆ ಮಾಡಿಕೊಳ್ಳುವಂತೆ ಅವರು ಹೇಳಿದರು. ಇತ್ತೀಚೆಗೆ ಪ್ರತಿ ಕುಟುಂಬದಲ್ಲೂ ಒಬ್ಬರೂ ಕ್ಯಾನ್ಸರ್ ರೋಗಿಗಳಿದ್ದಾರೆ. ದಾವಣಗೆರೆ ಜಿಲ್ಲೆಯಲ್ಲಿ ಪ್ರತಿ ತಿಂಗಳು 250 ರಿಂದ 300 ಜನರಲ್ಲಿ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಇದೀಗ ಆಸ್ಪತ್ರೆಯಲ್ಲಿ ಸಮಗ್ರ ಕ್ಯಾನ್ಸರ್ ಚಿಕಿತ್ಸಾ ಸೌಲಭ್ಯ ದೊರತಿರುವುದು ಅನುಕೂಲವಾಗಲಿದೆ. ಆಯುಷ್‌ಮಾನ್ ಭಾರತ ಯೋಜನೆಯ ಸೌಲಭ್ಯವೂ ದೊರೆಯಲಿದೆ ಎಂದು ವಿವರಿಸಿದರು. ಟೊಮಾಥೆರಪಿಯನ್ನು ವಾರದಲ್ಲಿ ಐದು ದಿನದಂತೆ ಕನಿಷ್ಟ 7 ವಾರು ನೀಡಬೇಕಾಗುತ್ತದೆ. ಬೇರೆ ನಗರಗಳಲ್ಲಿ ಚಿಕಿತ್ಸೆ ಪಡೆಯಲು ತೆರಳಿದಾಗ ಸಾರಿಗೆ ವೆಚ್ಚ, ವಸತಿ, ಊಟದ ವೆಚ್ಚ ಸೇರಿ ಖರ್ಚು ಹೆಚ್ಚಾಗುತ್ತಿತ್ತು. ಇದರಿಂದ ಅನೇಕರು ಚಿಕಿತ್ಸೆ ಪಡೆಯದೇ ಮರಣ ಹೊಂದುತ್ತಿದ್ದರು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಡಾ.ರಾಜೀವ್ ಎ.ಜಿ., ಡಾ.ಚನ್ನಬಸಪ್ಪ ಕೋರಿ, ಡಾ.ತೇಜಸ್ ಎ.ಯಳಮನಿ, ಡಾ.ಪ್ರಜ್ವಲ್, ಡಾ.ಮಹಾಂತೇಶ್ ಉಪಸ್ಥಿತರಿದ್ದರು.



## ಶಾಮನೂರಿನಲ್ಲಿ ಇಂದು ಶ್ರೀ ಈಶ್ವರ ಸ್ವಾಮಿ ಪರವು

ಶಾಮನೂರಿನ ಶ್ರೀ ಈಶ್ವರ ಸ್ವಾಮಿ ಪರವು ಇಂದು ನಡೆಯಲಿದೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

# ಸ್ವಾತಿಮುತ್ತಿನಂತೆ ಜನಮಾನಸದಲ್ಲಿ ಉಳಿದವರು ಅಥಣಿ ಶಿವಯೋಗಿಗಳು



ದಾವಣಗೆರೆ, ಆ. 28- ನೀರಿನಲ್ಲೇ ತಯಾರಾದ ಉಪ್ಪು ಲೌಕಿಕ ಜೀವನ ಸೂಚಿಸಿದರೆ, ವಾರಿಕಲ್ಲು (ಮಂಜುಗಡ್ಡೆ) ಭೌತಿಕ ಜೀವನ ಸೂಚಿಸುತ್ತದೆ. ಆದರೆ ನೀರಿನಲ್ಲಿರುವ ಸ್ವಾತಿಮುತ್ತು ಕರಗುವುದಿಲ್ಲ. ಅದರಂತೆ ಸ್ವಾತಿಮುತ್ತಿನಂತೆ ಶಾಶ್ವತವಾಗಿ ಜನಮಾನಸದಲ್ಲಿ ಉಳಿದವರು ಅಥಣಿ ಮುರುಘೇಂದ್ರ ಶಿವಯೋಗಿಗಳು. ಪರೋಪಕರ ಜೀವನ ನಡೆಸಿದವರಿಗೆ ಸಾವಿಲ್ಲ. ಅವರು ಮಾಡಿದ ಸತ್ಕಾರ್ಯಗಳಿಗೆ ಎಂದಿಗೂ ಸಾವಿಲ್ಲ ಎಂಬುದಕ್ಕೆ ಶಿವಯೋಗಿಗಳೇ ಸಾಕ್ಷಿ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ನುಡಿದರು.

ನಗರದ ವಿರಕ್ತಮಠದ ಆವರಣದಲ್ಲಿ ಬಸವಕೇಂದ್ರ ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ಇವರ ಸಂಯುಕ್ತಾಶ್ರಯದಲ್ಲಿ 112 ನೇ ಶ್ರಾವಣ ಮಾಸದ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಡಾ. ಶಿವಮೂರ್ತಿ ಮುರುಘಾ ಶರಣರ 'ದಿವ್ಯಪಥ ಲೋಕಹಿತ' ಪ್ರವಚನ ಮಂಗಲ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು. ಜೀವನ ಉಪ್ಪಿನಂತಾಗಬಾರದು. ಲೌಕಿಕ ಮತ್ತು ಭೌತಿಕ ಜೀವನ ಶಾಶ್ವತವಲ್ಲ. ಆದರೆ ಅಥಣಿ ಶಿವಯೋಗಿಗಳವರು ಸಮಾಜಮುಖಿ, ಲೋಕಹಿತ ಜೀವನ ನಡೆಸುವ ಮೂಲಕ ಸಮಾಜಕ್ಕೆ ಒಳಿತನ್ನು ಮಾಡುವ ಮೂಲಕ ಸ್ವಾತಿಮುತ್ತಿನಂತೆ ಅಜರಾಮರರಾಗಿ ಉಳಿದಿದ್ದಾರೆ ಎಂದು ಹೇಳಿದರು.

ದೇವರು ದೇವಾಲಯದಲ್ಲಿ ಇಲ್ಲ. ಮನುಷ್ಯನ ದೇಹದಲ್ಲಿ ದೇವರಿದ್ದಾನೆ ಎಂದು ತೋರಿಸಿಕೊಟ್ಟವರು ವಿಶ್ವ ಗುರು ಬಸವಣ್ಣನವರು. ಉಣಲಾರದ ದೇವರಿಗೆ ನೈವೇದ್ಯ ಮಾಡುತ್ತೇವೆ. ಆದರೆ ಹಸಿದು ಬಂದ ವ್ಯಕ್ತಿಗೆ ಉಣಬಡಿ ಸುವುದಿಲ್ಲ. ಹಸಿದವನಿಗೆ ಅನ್ನ ಹಾಕಿದರೆ ಶಿವ ಸಂತೃಪ್ತಿಯಾ ಗುತ್ತಾನೆ ಎಂಬುದು ಬಸವಣ್ಣನವರ ಆಶಯವಾಗಿತ್ತು ಎಂದರು.

'ದಿವ್ಯಪಥ ಲೋಕಹಿತ' ಪ್ರವಚನ ನಡೆಸಿಕೊಟ್ಟ ಬ್ಯಾಡಗಿ ತಾಲ್ಲೂಕು ಕಲ್ಲೇದೇವರ ಕ್ಷೇತ್ರದ ಕುಮಾರ ಶಾಸ್ತ್ರಿಗಳು ಮಾತನಾಡಿ, ಮಹಾತ್ಮರಿಗೆ ಸಾವಿಲ್ಲ. ಅವರು ಸದಾ ಜಾಗೃತರಾಗಿರುತ್ತಾರೆ ಎಂಬುದಕ್ಕೆ ಅಥಣಿ ಮುರುಘೇಂದ್ರ ಶಿವಯೋಗಿಗಳು ತಾಜಾ ಉದಾಹರಣೆ. ಸಮಾಜಮುಖಿ, ಲೇಸಾದ, ಸಾರ್ಥಕ ಬದುಕು ಬದುಕಿದವರು ಎಂದು ಸ್ಮರಿಸಿದರು.

ಮಾಜಿ ಉಪರಾಷ್ಟ್ರಪತಿ ಬಿ.ಡಿ. ಜತ್ತಿಯನ್ನು ಮೊದಲ್ಗೊಂಡು ಅನೇಕ ರಾಜಕಾರಣಿಗಳು, ಕವಿಗಳು, ಸಂತರು, ಶರಣರು ಅಥಣಿ ಮುರುಘೇಂದ್ರ ಶಿವಯೋಗಿಗಳ ಕೃಪೆಗೆ ಪಾತ್ರರಾಗಿದ್ದರು. ಅವರ ಪಾದ ಸ್ಪರ್ಷದಿಂದ ಜೀವನವನ್ನು ಪಾವನ ಮಾಡಿಕೊಂಡವರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಿವಯೋಗಾಶ್ರಮ ಮತ್ತು ವಿರಕ್ತಮಠ ಟ್ರಸ್ಟ್ ಪದಾಧಿಕಾರಿಗಳು ಉಪಸ್ಥಿತರಿದ್ದರು. ಬಸವ ಕಲಾ ಲೋಕದ ಅರುಣ್ ಮತ್ತು ವಾಗೀಶ್ ತಂಡದವರು ವಚನಗೀತೆ ಹಾಡಿದರು.

# ಆಜಾದ್ ರಾಜೀನಾಮೆ ವಿಷಾದನೀಯ: ಸಿದ್ದರಾಮಯ್ಯ

ಬೆಂಗಳೂರು, ಆ. 28 - ಕಾಂಗ್ರೆಸ್ ಹಿರಿಯ ನಾಯಕ ಗುಲಾಂ ನಬೀ ಆಜಾದ್ ಅವರು ಪಕ್ಷಕ್ಕೆ ರಾಜೀನಾಮೆ ನೀಡಿರುವುದು ವಿಷಾ ದನೀಯ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಸುಮಾರು ಐದು ದಶಕಗಳ ಕಾಲ ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯರಾಗಿದ್ದ ಆಜಾದ್ ಅವರು ಪಕ್ಷವನ್ನು ಕಟ್ಟಿ ಬೆಳೆಸಲು ನೀಡಿರುವ ಕೊಡುಗೆಯನ್ನು ಸ್ಮರಿಸುತ್ತಲೇ, ಅವರ ಈ ದಿಢೀರ್ ನಿರ್ಧಾರವನ್ನು ಖಂಡಿಸಬೇಕಾಗಿ ಬಂದಿದೆ ಎಂದಿದ್ದಾರೆ.

ಇತ್ತೀಚಿನ ಚುನಾವಣೆಗಳಲ್ಲಿನ ಹಿನ್ನಡೆಯಿಂದಾಗಿ ಕಾಂಗ್ರೆಸ್ ಪಕ್ಷ ಕಷ್ಟದ ದಿನಗಳಲ್ಲಿದೆ. ಇದಕ್ಕಿಂತಲೂ ಮುಖ್ಯವಾಗಿ ಸರ್ವಾಧಿಕಾರಿ ಪ್ರಭುತ್ವದಿಂದಾಗಿ ದೇಶ ನಲುಗುತ್ತಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆ ಗಂಡಾಂತರದಲ್ಲಿದೆ. ಇಂತಹ ಸಂದರ್ಭದಲ್ಲಿ ಅವರು ಪಕ್ಷ ತೊರೆದಿರುವುದು ಸರಿಯಲ್ಲ ಎಂದಿದ್ದಾರೆ.

# ಮೀಸಲಾತಿ ಹೆಚ್ಚಳ : ಅಕ್ಟೋಬರ್ 9ಕ್ಕೆ ಬೆಂಗಳೂರು ಚಲೋ



(1ನೇ ಪುಟದಿಂದ) ನಾನು ಮಳೆ-ಚಳಿಯಲ್ಲಿ ಹೋರಾಟ ಮಾಡುತ್ತಿರು ವುದಕ್ಕೆ ನಿಮಗೆ ಸಮಾಜಕ್ಕೆ ಅನುಕಂಪ ಇರಬಹುದು. ಆದರೆ, ನನ್ನ ಜನ ಗುಡಿಸಲಲ್ಲಿ ಇದ್ದಾರೆ. ಸಮುದಾಯದ ಮಕ್ಕಳು ಶಿಕ್ಷಣ ಮತ್ತು ಉದ್ಯೋಗ ಪಡೆಯಬೇಕಾ ದರೆ ಮೀಸಲಾತಿ ಹೆಚ್ಚಳ ಅನಿವಾ ರ್ಯವಾಗಿದೆ. ಸರ್ಕಾರ ವಿಳಂಬ ಮಾಡುತ್ತಿದೆ. ವಿಳಂಬ ಮಾಡಿದ್ದ ರಿಂದಲೇ ನಾವು ಒಂದಾಗಲು ಕಾರಣವಾಗಿದ್ದು, ಯಾವುದೇ ಹೋರಾಟವನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳಬೇಕು ಎಂದರು.

ಇವತ್ತಿನಿಂದ ಸರ್ಕಾರಕ್ಕೆ ಒಂದು ತಿಂಗಳ ಗಡುವು ನೀಡುತ್ತೇವೆ. ಅಲ್ಲಿ ತನಕ ಪ್ರತಿ ಹಳ್ಳಿ ಮತ್ತು ಗ್ರಾಮಗಳಲ್ಲಿ ಜಾಗೃತಿ ನಡೆಯುತ್ತದೆ. ಈ ಸಲದ ಮಹರ್ಷಿ ವಾಲ್ಮೀಕಿ ಜಯಂತಿ ದಿನದಂದು 'ನಮ್ಮ ನಡಿಗೆ ಗುರುಗಳ ಕಡೆಗೆ' ಅನ್ನುವ ಕರೆಯನ್ನು ನೀಡಲಾಗು ವುದು. ಅಕ್ಟೋಬರ್ 9 ರಂದು ಬೆಂಗಳೂರು ಚಲೋ ಕರೆ ನೀಡಲಾ ಗುವುದು ಎಂದು ವಾಲ್ಮೀಕಿ ಪ್ರಸನ್ನಾ ನಂದ ಸ್ವಾಮೀಜಿ ತಿಳಿಸಿದರು.

ಮೈಸೂರಿನ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಹೋರಾಟದ ದಿಕ್ಸೂಚಿ ಭಾಷಣ ಮಾಡಿ, ಎಸ್ಸಿ - ಎಸ್ಟಿ ಜನರು ಒಂದಾಗಬೇಕು ಹಾಗೂ ಮೀಸಲಾತಿ ಹೆಚ್ಚಳ ಆಗುವ ತನಕ ಸಾತ್ವಿಕ ಹೋರಾಟ ಮಾಡಬೇಕು ಎಂದು ಸಲಹೆ ನೀಡಿದರು.

ವಿವಿಧ ಮಠಗಳ ಮಠಾಧೀಶರು ಸಾನ್ನಿಧ್ಯ ವಹಿಸಿದ್ದರು. ಸಭೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ವೆಂಕಟಸ್ವಾಮಿ, ಮಾರಸಂದ್ರ ಮುನಿಯಪ್ಪ, ಪಿ.ಮೂರ್ತಿ, ಎಲ್.ಮುನಿಸ್ವಾಮಿ, ಚನ್ನಕೃಷ್ಣಪ್ಪ, ಹೆಣ್ಣೂರು ಶ್ರೀನಿವಾಸ, ಮಾರೆಪ್ಪ ನಾಯಕ ಯಾದಗಿರಿ, ಬಸವರಾಜ ನಾಯಕ, ಸಿರಿಗೆರೆ ತಿಪ್ಪೇಶ್, ರಾಜಶೇಖರ ತಳವಾರ ಬೆಳಗಾವಿ, ಶ್ರವಣಕುಮಾರ ನಾಯಕ ಜೇವರ್ಗಿ, ಡಾ.ಶಾರದಾ ಹುಲಿನಾಯಕ, ನಿವೃತ್ತ ಅಧಿಕಾರಿಗಳಾದ ಬಿ.ಶಿವಪ್ಪ, ಮೃತ್ಯುಂಜಯಪ್ಪ, ಹರ್ತಿಕೋಟೆ ವೀರೇಂದ್ರಸಿಂಹ, ಗೋವಿಂದಸ್ವಾಮಿ, ಹೊಸಪೇಟೆ ಜಂಬಯ್ಯ ಹರಪನಹಳ್ಳಿಯ ಹುಚ್ಚೆಂಗಪ್ಪ, ಚಿತ್ರದುರ್ಗದ ಶ್ರೀನಿವಾಸ್ ನಾಯಕ ಸೇರಿದಂತೆ ಇನ್ನೂ ಅನೇಕರು ಮಾತನಾಡಿದರು.

ಮಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ದಾವಣಗೆರೆಯ ಬಿ. ವೀರಣ್ಣ, ಎನ್.ಎಂ. ಆಂಜನೇಯ ಗುರೂಜಿ, ಶ್ಯಾಗಲೆ ಮಂಜುನಾಥ್, ಜಿಗಳಿಯ ಜಿ.ಆನಂದಪ್ಪ, ಕೆ. ಆರ್.ರಂಗಪ್ಪ, ಹೆಚ್.ಟಿ.ರಂಗನಾಥ್, ಜಿ. ಆರ್.ನಾಗರಾಜ್, ಡಿ.ಮಂಜುನಾಥ್ ಸೇರಿದಂತೆ ಇನ್ನೂ ಅನೇಕರು ಸಭೆಯಲ್ಲಿದ್ದರು.

# ಹೊನ್ನಾಳಿಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ, ರಕ್ಷಾಬಂಧನ



ಹೊನ್ನಾಳಿ, ಆ. 28- ಇಲ್ಲಿನ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಿಂದ ಶ್ರೀ ಕೃಷ್ಣ ಜನ್ಮಾಷ್ಟಮಿ ಹಾಗೂ ರಕ್ಷಾಬಂಧನ ಕಾರ್ಯಕ್ರಮವು ಕಳೆದ ವಾರ ನಡೆಯಿತು.

ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ರಾಜಯೋಗಿನಿ ಬ್ರಹ್ಮಾಕುಮಾರಿ ವಿಜಯ ಅವರು ಸಮಾರಂಭವನ್ನು ಉದ್ಘಾಟಿಸಿ, ಕೃಷ್ಣನ ಸಂದೇಶ ಹಾಗೂ ಲೀಲೆಗಳು ಹಾಗೂ ರಕ್ಷಾಬಂಧನದ ಮಹತ್ವ ವಿವರಿಸಿದರು.

ಈಶ್ವರೀಯ ವಿದ್ಯಾಲಯದ ವ್ಯಾಪ್ತಿಯ ಸಾಸ್ವೆಹಳ್ಳಿ, ಬಿದರಗಡ್ಡಿ, ಬೆನಕನಹಳ್ಳಿ, ಹುಣಸಘಟ್ಟ, ದಾಗಿನಕಟ್ಟೆ ವಿದ್ಯಾಲಯದ ಸಿಬ್ಬಂದಿಗಳಿಗೆ ರಕ್ಷಾಬಂಧನ ಕಾರ್ಯ ನೆರವೇರಿಸಿದರು. ಹೊನ್ನಾಳಿ ಕೆಎಸ್ಆರ್‌ಟಿಸಿ ಡಿಪೋ ಮ್ಯಾನೇಜರ್ ಕೆ. ಮಹೇಶ್ವರಪ್ಪ, ಹೊನ್ನಾಳಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ಬ್ರಹ್ಮಾಕುಮಾರಿ ಜ್ಯೋತಿ, ಬಸವಾಪಟ್ಟಣದ ನೀಲಮ್ಮ, ರೇಖಾ ಉಮೇಶ್ ಇನ್ನಿತರರಿದ್ದರು.

## 8ನೇ ವರ್ಷದ ಚಿರಸ್ಮರಣೆ



**ಶ್ರೀ ಸೋಮರಾಯ ನಾರಾಯಣ ಕುರ್ಡೇಕರ್ (ಪಲ್ಲಾಗಟ್ಟಿ)**

**ಶ್ರೀ ಸೋಮೇಶ್ವರ ಜ್ಯೂಯಲರಿ ಮಾರ್ಟ್**
ಚೌಕಿಪೇಟೆ, ದಾವಣಗೆರೆ.

**ಶ್ರೀ ಓಂಕಾರ ಗಣಪತಿ ಜ್ಯೂಯಲರಿ ಮಾರ್ಟ್**
ಚೌಕಿಪೇಟೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ 8 ವರ್ಷಗಳು ಕಳೆದವು. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ತೋರಿಸಿದ ಹಾದಿಯಲ್ಲಿ ಮುನ್ನಡೆಯುತ್ತಿರುವ,

ಪತ್ನಿ : ಶ್ರೀಮತಿ ರಾಧಾಬಾಯಿ ಸೋಮರಾಯ ಕುರ್ಡೇಕರ್
ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು
ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

## ಪ್ರಥಮ ವರ್ಷದ ಪುಣ್ಯಸ್ಮರಣೆ



ನಿಧನ : 29.08.2021

**ದಿ. ಶ್ರೀ ಲಿಂಗದಕಲ್ಲುಗುಡಿ ಪೈಲ್ವಾನ್ ಎನ್.ಸಿ. ನಾಗಪ್ಪ**

(ಲಿಂಗದಕಲ್ಲುಗುಡಿ ದಿ. ಪೈಲ್ವಾನ್ ಚನ್ನಬಸಪ್ಪನವರ ಹಿರಿಯ ಪುತ್ರರು,
ಶ್ರೀ ಲಿಂಗೇಶ್ವರ ಸ್ವಾಮಿ ದೇವಸ್ಥಾನ ಸಮಿತಿ ಸದಸ್ಯರು ಮತ್ತು ವರ್ತಕರು
ಶ್ರೀ ಶಿವಕುಮಾರ ಸ್ವಾಮಿ ಬಡಾವಣೆ, ದಾವಣಗೆರೆ.)

ಗುರುಗಳ ಸೇವೆ, ಧಾರ್ಮಿಕ ಸೇವೆ, ಸರಳ ಜೀವನ, ನಿರಂತರ ಪರಿಶ್ರಮ,
ನೇರ ನಡೆ - ನುಡಿ, ನಾನು ಎನ್ನದೇ ನನ್ನವರು ಎಂದು ನಂಬಿ ಬದುಕಿದ;
ನುಡಿದಂತೆ ನಡೆದ ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.

'ನಿಮ್ಮ ಆದರ್ಶ ಪ್ರಾಯ ಜೀವನವೇ ನಮ್ಮ ಜೀವನದ ದಾರಿಯಾಗಿದೆ'

ಧರ್ಮಪತ್ನಿ : ಲಿಂಗದಕಲ್ಲುಗುಡಿ ಶ್ರೀಮತಿ ಕಮಲಮ್ಮ ಪೈಲ್ವಾನ್
ಎನ್.ಸಿ.ನಾಗಪ್ಪ ಮತ್ತು ಕುಟುಂಬದವರು

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte